

# ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಾಮಾಜಿಕ ತನಿಖಾ ವರದಿ(ಎಸ್‌ಐಆರ್) ಏಕೆ ಮತ್ತು ಹೇಗೆ?


## ಕಾರ್ಯಕರ್ತರ ಕೈಪಿಡಿ





ಎಸ್ ಐ ಆರ್





ಮಗು ಮತ್ತು ಕಾನೂನು ಕೇಂದ್ರ
ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ
ಬೆಂಗಳೂರು

# ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಾಮಾಜಿಕ ತನಿಖಾ ವರದಿ(ಎಸ್ಐಆರ್)
# ಏಕೆ ಮತ್ತು ಹೇಗೆ?

## ಕಾರ್ಯಕರ್ತರ ಕೈಪಿಡಿ


ರಚನೆ

ಮಗು ಮತ್ತು ಕಾನೂನು ಕೇಂದ್ರ

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ

ಬೆಂಗಳೂರು


धर्मो रक्षति रक्षितः

ಹಕ್ಕುಗಳು:
ಸೆಂಟರ್ ಫ಼ಾರ್ ಚೈಲ್ಡ್ ಅಂಡ್ ದ ಲಾ,
ನ್ಯಾಷನಲ್ ಲಾ ಸ್ಕೂಲ್ ಆಫ಼್ ಇಂಡಿಯಾ
ಯುನಿವರ್ಸಿಟಿ, 2024

ಮೂಲಕೃತಿಗೆ ಸೂಕ್ತವಾಗಿ ಕೃತಜ್ಞತೆಯನ್ನು
ಸೂಚಿಸುವ ಮೂಲಕ ಈ ಕೈಪಿಡಿಯ
ಯಾವುದೇ ಭಾಗವನ್ನು ಮುಕ್ತವಾಗಿ ಮರುಬಳಕೆ
ಮಾಡಬಹುದು. ಈ ಪುಸ್ತಕವನ್ನು ಇಡಿಯಾಗಿ
ಅಥವಾ ಇದರ ಯಾವುದೇ ಭಾಗವನ್ನು
ಅನುವಾದಿಸಲು ಸೆಂಟರ್ ಫ಼ಾರ್ ಚೈಲ್ಡ್
ಅಂಡ್ ದ ಲಾ, ನ್ಯಾಷನಲ್ ಲಾ ಸ್ಕೂಲ್ ಆಫ಼್
ಇಂಡಿಯಾ ಯುನಿವರ್ಸಿಟಿ, ಬೆಂಗಳೂರು
–ಇವರಿಂದ ಅನುಮತಿಯನ್ನು ಪಡೆಯಬೇಕು

ಲೇಖಕರು:
ಅಮೃಧಿ ದೇವರಾಜ್, ಸುಭದ್ರಾ ನಾಯರ್

ISBN: 978-93-91111-40-3

ಮುಖಪುಟ ವಿನ್ಯಾಸ:
ಅರುಣ್ ಕುಮಾರ್ ಜಿ

ಕನ್ನಡಕ್ಕೆ ಅನುವಾದ:
ಪ್ರೊ.ಎಂ.ಅಬ್ದುಲ್ ರೆಹಮಾನ್ ಪಾಷ

ಮುದ್ರಣ:

Justice S. Sunil Dutt Yadav
Judge, High Court of Karnataka
Dr. B.R. Ambedkar Veedhi,
Bengaluru - 560 001.

Off : 080 - 22954488 / 229
Email : justicesunilhck@gmai
justice.sunil-dy@aij.

ಆರಂಭದಲ್ಲಿಯೇ ನಾನು, ಮಗು ಮತ್ತು ಕಾನೂನು ಕೇಂದ್ರ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಕುರಿತು ಸಾಮಾಜಿಕ ತನಿಖಾ ವರದಿ(ಎಸ್ ಐ ಆರ್)ಯನ್ನು ತಯಾರಿಸುವಲ್ಲಿ, ಕೈದೀವಿಗೆ ಆಗಬಲ್ಲ ಈ ಕಾರ್ಯಕರ್ತರ ಕೈಪಿಡಿಯನ್ನು ಸಿದ್ಧಪಡಿಸಿ ಈ ಸಂಸ್ಥೆ ಬಹಳ ಮಹತ್ವದ ಕಾರ್ಯವನ್ನು ಮಾಡಿದೆ.

ಮಗುವನ್ನು ಕಾನೂನಿನೊಂದಿಗೆ ಸಂಘರ್ಷದಲ್ಲಿ ತಂದುನಿಲ್ಲಿಸಿದ ಸನ್ನಿವೇಶಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಮುಂದಿನ ಕಾರ್ಯವಿಧಾನವನ್ನು ರೂಪಿಸಲು ಎಸ್.ಐ.ಆರ್. ಬಾಲ ನ್ಯಾಯ ಮಂಡಳಿ(ಜೆ.ಜೆ.ಬಿ)ಗೆ ಅತ್ಯಗತ್ಯ ಮಾಹಿತಿಯನ್ನು ಒದಗಿಸುತ್ತದೆ.

ಉತ್ತಮ ಅಭ್ಯಾಸಗಳನ್ನು ಕ್ರೋಢೀಕರಿಸುವ ಈ ಪ್ರಯತ್ನಕ್ಕಾಗಿ ಈ ಕೈಪಿಡಿಯನ್ನು ಮನಸಾರೆ ಶ್ಲಾಘಿಸಬೇಕು.

ವಿವರಗಳ ಮಟ್ಟಿಗೆ ಇದು ಸಮಗ್ರವಾಗಿದೆ: ಬಾಲ ನ್ಯಾಯ ಅಧಿನಿಯಮ, 2015ರ ಸಾಮಾನ್ಯ ತತ್ವಗಳು, ಎಸ್.ಐ.ಆರ್.ನ ವಸ್ತುವಿವರ, ಅಂಥ ವರದಿಯನ್ನು ಸಿದ್ಧಪಡಿಸುವ ವಿಧಾನ, ಮತ್ತು ಯಾರು ಅದನ್ನು ಸಿದ್ಧಪಡಿಸುವುದು, ಇಂಥ ವರದಿಯನ್ನು ತಯಾರಿಸುವಾಗ ಸಹಜವಾಗಿಯೇ ನುಸುಳುವ ಪೂರ್ವಗ್ರಹಗಳನ್ನು ನಿವಾರಿಸುವುದು ಹೇಗೆ, ಹೀಗೆ ಒಂದು ಪರಿಣಾಮಕಾರಿ ಎಸ್.ಐ.ಆರ್.ನ್ನು ತಯಾರಿಸುವ ಕುರಿತ ಹಂತಹಂತದ ಮಾರ್ಗದರ್ಶಿ ಪುಸ್ತಕ ಇದಾಗಿದೆ.

“ನಮೂನೆ 6ರ ಅಧ್ಯಯನ ಯಾತ್ರೆ” ಎಂಬ ಅಧ್ಯಾಯ-6ರಲ್ಲಿ ಎಸ್.ಐ.ಆರ್.ಗಾಗಿ ಕೇಳಲಾಗುವ ಪ್ರಶ್ನೆಗಳನ್ನು ಅಳವಡಿಸಿಕೊಂಡು, ಅವುಗಳನ್ನು ವಿಶದವಾಗಿ ವಿವರಿಸಿರುವುದು ಈ ಕೈಪಿಡಿಯ ಒಂದು ಅನನ್ಯ ವೈಶಿಷ್ಟ್ಯವಾಗಿದೆ. ಆಯಾ ವಿಭಾಗದಲ್ಲಿ ನೀಡಿರುವ ಉದಾಹರಣೆಗಳಿಂದಾಗಿ ಅರ್ಥ ಮಾಡಿಕೊಳ್ಳುವುದು ಸುಲಭವಾಗುತ್ತದೆ. ಅಧ್ಯಾಯ-8ರಲ್ಲಿ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು ಎದುರಾಗುವ ಸನ್ನಿವೇಶಗಳನ್ನು ದರ್ಶಿಸುತ್ತವೆ.

ಕೈಪಿಡಿಯನ್ನು ಒಟ್ಟಾರೆ ಓದಿದಾಗ ಅದು ಬಾಲ ನ್ಯಾಯ ಕ್ಷೇತ್ರದಲ್ಲಿ ಕೆಲಸಮಾಡುವ ಕಾರ್ಯಕರ್ತರು ಮತ್ತು ಸಂಶೋಧಕರಿಗೆ ಪರಿಣಾಮಕಾರಿಯಾದ ಮಾಹಿತಿಯ ಆಕರವಾಗುವ ಲಕ್ಷಣವನ್ನು ತೋರಿಸುತ್ತದೆ. ಈ ಕೈಪಿಡಿಯು ಒಂದು ಉತ್ತಮ ಮಾರ್ಗದರ್ಶಿಯ ಪಾತ್ರವನ್ನು ಪೂರೈಸುವುದಲ್ಲದೇ, ಒಳಗೊಳ್ಳುವ ಕ್ರಮಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಾಯಕವಾದ ಸಮಗ್ರ ಸಾಧನವಾಗುತ್ತದೆ.

ಈ ಕೈಪಿಡಿಯನ್ನು ತುಂಬಾ ಕಾಳಜಿಯಿಂದ ಸಿದ್ಧಪಡಿಸಲಾಗಿದೆ; ಸಂಶೋಧಕರು ಮತ್ತು ಕ್ಷೇತ್ರದ ಮಟ್ಟದಲ್ಲಿ ವ್ಯವಸ್ಥೆಯ ಒಂದು ಭಾಗವಾಗಿ ಕೆಲಸ ಮಾಡಿರುವುದರ ಪರಿಶ್ರಮವನ್ನು ಇದು ಬಿಂಬಿಸುತ್ತದೆ. ಕಾನೂನು ಅಗತ್ಯಗಳನ್ನು ಸರಳವಾಗಿ ಮತ್ತು ಸುಲಭಗ್ರಾಹ್ಯವಾಗಿ ಮಾಡುವಲ್ಲಿ ಈ ಕೈಪಿಡಿಯು ಒಂದು ಉತ್ಕೃಷ್ಟ ಪರಿಶ್ರಮವಾಗಿದೆ.

ಕ್ಷೇತ್ರದಲ್ಲಿನ ಕಾರ್ಯಕರ್ತರು ಸಮರ್ಥವಾಗಿ ಕೆಲಸ ಮಾಡುವುದಕ್ಕೆ ಮತು ಆ ಮೂಲಕ ಬಾಲ

ನ್ಯಾಯ ವ್ಯವಸ್ಥೆಯನ್ನು ಸಶಕ್ತಗೊಳಿಸುವಲ್ಲಿ ಉತ್ಕೃಷ್ಟ ಕೊಡುಗೆಯನ್ನು ನೀಡುವ ಇಂಥ ಕೈಪಿಡಿಯನ್ನು

ಪ್ರಕಾಶಿಸಿರುವುದಕ್ಕಾಗಿ ತಂಡದವರಿಗೆ ನನ್ನ ವೈಯಕ್ತಿಕ ಪ್ರಶಂಸೆಗಳು ಸಲ್ಲುತ್ತವೆ.

Sunil Dutt Yadav

(S.SUNIL DUTT YADAV)
JUDGE

## ಮಗು ಮತ್ತು ಕಾನೂನು ಕೇಂದ್ರ : ಕಿರು ಪರಿಚಯ

ಸೆಂಟರ್ ಫಾರ್ ಚೈಲ್ಡ್ ಅಂಡ್ ದ ಲಾ (ಸಿಸಿಎಲ್), ಎಂದರೆ, ಮಗು ಮತ್ತು ಕಾನೂನು ಕೇಂದ್ರವನ್ನು, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ(ಎನ್ಎಲ್ಎಸ್ಐಯು)ಯ ವಿಶೇಷವಾದ ಸಂಯೋಜಿತ ಅಧ್ಯಯನ ವಲಯಗಳ ಸಂಶೋಧನಾ ಕೇಂದ್ರದ ರೂಪದಲ್ಲಿ 1996ರಲ್ಲಿ ಸ್ಥಾಪಿಸಲಾಯಿತು. ಕೇಂದ್ರವು ಮಕ್ಕಳ ಹಕ್ಕುಗಳ ಕಾನೂನಿನ ಕುರಿತು ಸಂಶೋಧನೆ, ಪ್ರತ್ಯಕ್ಷವಾದ ಕ್ಷೇತ್ರ ಕಾರ್ಯ ಮತ್ತು ಬೋಧನೆಗಳನ್ನು ಏಕೀಕರಿಸುತ್ತದೆ. ಸಿಸಿಎಲ್‌ನ ನಿರ್ದಿಷ್ಟವಾದ ಗುರಿ ಭಾರತದಲ್ಲಿನ ಎಲ್ಲಾ ಮಕ್ಕಳಿಗಾಗಿ ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳು ಮತ್ತು ಜೀವನದ ಉತ್ತಮ ಗುಣಮಟ್ಟವನ್ನು ಖಚಿತಪಡಿಸುವುದಾಗಿದೆ; ಅದರಲ್ಲಿಯೂ ವಿಶೇಷವಾಗಿ ಉಪೇಕ್ಷಿತ ಮತ್ತು ಮುಖ್ಯವಾಹಿನಿಯಿಂದ ಹೊರಗಿರಿಸಲಾದ ಮಕ್ಕಳಿಗೆ ಸಮಾನ ಗುಣಮಟ್ಟದ ಶಿಕ್ಷಣ, ಆರೈಕೆ, ರಕ್ಷಣೆ ಮತ್ತು ನ್ಯಾಯ ಒದಗುವಂತೆ ಮಾಡುವುದಾಗಿದೆ.

ಕೇಂದ್ರದ ಉದ್ದೇಶಗಳು ಎಂದರೆ: ತಮ್ಮದೇ ಆದ ಹಕ್ಕುಗಳನ್ನು ಉಳ್ಳವರಾಗಿ ಗಮನಿಸುವ ಹಾಗೆ ಮಕ್ಕಳನ್ನು ಸಬಲೀಕರಿಸುವುದು; ಮಕ್ಕಳ ಕುರಿತು ಕಾರ್ಯನೀತಿ, ಕಾನೂನು ಮತ್ತು ಅನುಷ್ಠಾನಗಳಲ್ಲಿ ಮಾನವ ಹಕ್ಕುಗಳ ಆಧಾರಿತ ವಿಧಾನವನ್ನು ಸಾಂಸ್ಥೀಕರಿಸಲು ಸಹಾಯ ಮಾಡುವುದು ಮತ್ತು ಮಕ್ಕಳ ಹಕ್ಕುಗಳ ಹೆಚ್ಚು ಪರಿಣಾಮಕಾರಿ ಸಾಕ್ಷಾತ್ಕಾರಕ್ಕಾಗಿ ಸರಕಾರ ಮತ್ತು ನಾಗರಿಕ ಸಮಾಜದ ಸಾಮರ್ಥ್ಯವನ್ನು ನಿರ್ಮಿಸುವುದು.

# ಪರಿವಿಡಿ


| SL No. | ವಿಷಯ | Page No. |
|---|---|---|
| 1 | ಕೃತಜ್ಞತೆಗಳು | 8 |
| 2 | ಪ್ರಮುಖ ಪದಗಳು | 9 |
| 3 | ಪ್ರೀತಿಯ ಕಾರ್ಯಕರ್ತರೆ | 10 |
| 4 | ಕೈಪಿಡಿಯ ಬಗ್ಗೆ | 10 |
| 5 | ಅಧ್ಯಾಯ 1– ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ, 2015– ಒಂದು ಅವಲೋಕನ ' | 13 |
| 6 | ಅಧ್ಯಾಯ 2– ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು (ಸಿಐಸಿಎಲ್) | 15 |
| 7 | ಅಧ್ಯಾಯ 3– ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗಾಗಿ ಸಾಮಾಜಿಕ ತನಿಖಾ ವರದಿ | 17 |
| 8 | ಅಧ್ಯಾಯ 4– ಸಾಮಾಜಿಕ ತನಿಖಾ ವರದಿಗಾಗಿ ಮಾಹಿತಿಯ ಆಕರಗಳು | 24 |
| 9 | ಅಧ್ಯಾಯ 5– ಸಾಮಾಜಿಕ ತನಿಖೆಯನ್ನು ಹೇಗೆ ನಡೆಸಬೇಕು ಮತ್ತು ವರದಿಯನ್ನು ಹೇಗೆ ತಯಾರಿಸಬೇಕು | 27 |
| 10 | ಅಧ್ಯಾಯ 6– ನಮೂನೆ 6ರ ಅಧ್ಯಯನ | 38 |
| 11 | ಅಧ್ಯಾಯ 7– ಸಂವಹನ ಒಂದು ಸಾಧನವಾಗಿ | 62 |
| 12 | ಅಧ್ಯಾಯ 8– ಇಂಥ ಸನ್ನಿವೇಶಗಳಲ್ಲಿ ನಾನು ಏನು ಮಾಡುತ್ತೇನೆ? ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು | 64 |
| 13 | ಅನುಬಂಧ | 70 |

## ಕೃತಜ್ಞತೆಗಳು

**ರಚಿಸಿದವರು:** ಅಮೈಥಿ ದೇವರಾಜ್

ಸುಭದ್ರಾ ನಾಯರ್

ಬಾಹ್ಯ ಸಲಹಾಕಾರರು:

ಡಾ.ಕಲ್ಪನಾ ಪುರುಷೋತ್ತಮನ್, ಪೂರ್ವ ಜೆಜೆಬಿ ಸದಸ್ಯರು, ಅಡ್ಜಂಕ್ಟ್ ಫ್ಯಾಕಲ್ಟಿ (ಐಐಪಿಆರ್), ಆಪ್ತ ಸಮಾಲೋಚನಾ ಮನೋವಿಜ್ಞಾನಿಗಳು ಮತ್ತು ಮಕ್ಕಳ ಹಕ್ಕುಗಳ ಕ್ರಿಯಾಕರ್ತರು.

**ಬೆಂಬಲ:**

ಅಮೃತಾ ಶಿವಪ್ರಸಾದ್

ಆ್ಯನ್‌ಮೇರಿ ಜೇಕೊಬ್

ಅರ್ಷಿತ ಸತ್ಸಂಗೀ

ಜೋವಾ ರಷೇಲ್ ಜೋಸೆಫ್

ಪಾರ್ವತಿ ಆರ್ ನಾಯರ್

ಸಂಗಪ್ಪ ವಗ್ಗರ್

ಕುಮಾರಸ್ವಾಮಿ ಟಿ

**ತಜ್ಞ ಸಂದರ್ಶನಗಳು:**

ಅನಂತ ಆಸ್ಥಾನ, ಮಕ್ಕಳ ಹಕ್ಕುಗಳ ಲಾಯರರು

ಅರ್ಲಿನ್ ಮನೋಹರನ್, ಎನ್‌ಫೋಲ್ಡ್ ಪ್ರೊಆ್ಯಟೆಕ್ಟಿವ್ ಹೆಲ್ತ್ ಟ್ರಸ್ಟ್

ಗೀತಾ ಸಜ್ಜನಶೆಟ್ಟಿ, ಮಕ್ಕಳ ಹಕ್ಕುಗಳ ಲಾಯರರು

ಪವಿತ್ರಾ ಎಚ್. ಎನ್‌ಫೋಲ್ಡ್ ಪ್ರೊಆ್ಯಟೆಕ್ಟಿವ್ ಹೆಲ್ತ್ ಟ್ರಸ್ಟ್

ರಾಧಾ ರಾಮಚಂದ್ರಪ್ಪ, ಸಮಾಜ ಕಾರ್ಯಕರ್ತರು

ಡಾ.ರೇಣು ಶಾಹ್, ಸಹಾಯಕ ಪ್ರಾಧ್ಯಾಪಕರು, ಕಾಲೇಜ್ ಆಫ್ ಸೋಶಿಯಲ್ ವರ್ಕ್, ನಿರ್ಮಲಾ ನಿಕೇತನ್, ಮುಂಬಯಿ

ವಸಂತ್ ಕುಮಾರ್, ಪ್ರೊಬೇಷನ್ ಅಧಿಕಾರಿ

**ಎಸ್‌ಐಆರ್ ಸಮಾಲೋಚನಾಗೋಷ್ಠಿಯಲ್ಲಿ ಭಾಗಿಗಳು:**

ಆಶಿಕಾ ಶೆಟ್ಟಿ, ಅಸೋಸಿಯೇಷನ್ ಫಾರ್ ಪ್ರಮೋಷನ್ ಆಫ್ ಸೋಶಿಯಲ್ ಆ್ಯಕ್ಷನ್

ಅರುಣಿಮಾ ಸಿನ್ಹಾ, ಫೈಜನ್ ಅಹಮದ್, ಯಾಮಿನಾ ರಿಜ್ವಿ: ಐಪ್ರೋಬೋನೋ

ಲಾರೆನ್ಸ್ ಎಂ.ಎಸ್., ಮಕ್ಕಳ ರಕ್ಷಣೆ ಅಧಿಕಾರಿ

ಶಿವಾಂಗಿ ಪುರಿ, ಎನ್‌ಫೋಲ್ಡ್ ಪ್ರೊಆ್ಯಟೆಕ್ಟಿವ್ ಹೆಲ್ತ್ ಟ್ರಸ್ಟ್

ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈಕಾಲಜಿ ಅಂಡ್ ರೀಸರ್ಚ್‌ನ ವಿದ್ಯಾರ್ಥಿ ಸ್ವಯಂಸೇವಕರು

**ಇನ್‌ಟರ್ನ್‌ಗಳು:**

ಭಾವನಾ ಹೆಗ್ಡೆ, ಕ್ರೈಸ್ತ್ ಯುನಿವರ್ಸಿಟಿ

ದಿಯಾ ವಿನೆಕರ್, ನ್ಯಾಷನಲ್ ಲಾ ಯುನಿವರ್ಸಿಟಿ, ದೆಹಲಿ

ಚಿರಾಗ್ ಹಲ್ಯೆ, ಮಹಾರಾಷ್ಟ್ರ ನ್ಯಾಯಷನಲ್ ಲಾ ಯುನಿವರ್ಸಿಟಿ, ನಾಗಪುರ್

ಪವಿತ್ರಾ ಸುಧೀರ್ ಕಂಚನ್, ಒ.ಪಿ. ಜಿಂದಾಲ್ ಗ್ಲೋಬಲ್ ಯುನಿವರ್ಸಿಟಿ

ಸಂಧ್ಯಾಶ್ರೀ ಕಾರಂತ ನಾಗರಾಜ, ಆರ್‌ವಿ ಯುನಿವರ್ಸಿಟಿ

ಪ್ರೊ. (ಡಾ.) ಸುಧೀರ್ ಕೃಷ್ಣಸ್ವಾಮಿ; ಉಪ ಕುಲಪತಿಗಳು, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ,

ಡಾ.ನೀತು ಶರ್ಮಾ, ಸೆಂಟರ್ ಕೊ–ಡೈರೆಕ್ಟರ್, ಡಾ.ಮಧುಬಂತಿ ಸಂಧ್ಯಾ ಮತ್ತು ಸಿಸಿಎಲ್ ತಂಡ.

ಲೀಗಲ್ ಸರ್ವೀಸ್ ಕ್ಲಿನಿಕ್ (ಎನ್‌ಎಲ್‌ಎಸ್‌ಐಯು) ಮತ್ತು ಸಿಬ್ಬಂದಿ, ಬಾಲಕರ ಸರಕಾರಿ ವೀಕ್ಷಣಾ ಗೃಹ, ಮಡಿವಾಳ ಅವರ ಬೆಂಬಲಕ್ಕಾಗಿ ನಾವು ಅವರಿಗೆಲ್ಲಾ ಕೃತಜ್ಞರಾಗಿದ್ದೇವೆ.

**ಅನುವಾದಕರು:** ಪ್ರೊ.ಎಂ.ಅಬ್ದುಲ್ ರೆಹಮಾನ್ ಪಾಷ

**ವಿನ್ಯಾಸ:** ಅರುಣ್ ಕುಮಾರ್

## ಪ್ರಮುಖ ಪದಗಳು

| | |
|---|---|
| 1 | ಬಾಲ್ಯದ ಪ್ರತಿಕೂಲ ಅನುಭವ |
| 2 | ಭಾರತೀಯ ನ್ಯಾಯಾಂಗ ಸಂಹಿತೆ |
| 3 | ಭಾರತೀಯ ನಾಗರಿಕ ರಕ್ಷಣಾ ಸಂಹಿತೆ |
| 4 | ಮಕ್ಕಳ ಆರೈಕೆ ಸಂಸ್ಥೆ |
| 5 | ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು |
| 6 | ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಗು |
| 7 | ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ |
| 8 | ಮಕ್ಕಳ ಕಲ್ಯಾಣ ಸಮಿತಿ |
| 9 | ಮಕ್ಕಳ ಕಲ್ಯಾಣ ಅಧಿಕಾರಿ |
| 10 | ಜಿಲ್ಲಾ ಮಕ್ಕಳ ರಕ್ಷಣಾ ಘಟಕ |
| 11 | ವೈಯಕ್ತಿಕ ಆರೈಕೆ ಯೋಜನೆ |
| 12 | ಭಾರತೀಯ ದಂಡ ಸಂಹಿತೆ |
| 13 | ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015 |
| 14 | ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016 |
| 15 | ಬಾಲ ನ್ಯಾಯ ಮಂಡಳಿ |
| 16 | ಕಾನೂನು–ಕಮ್–ಪರೀಕ್ಷಾ ಅಧಿಕಾರಿ |
| 17 | ಸರ್ಕಾರೇತರ ಸಂಸ್ಥೆ |
| 18 | ವೀಕ್ಷಣಾ ಗೃಹ |
| 19 | ಪ್ರಾಥಮಿಕ ಮೌಲ್ಯಮಾಪನ ವರದಿ |
| 20 | ಪರೀಕ್ಷಾಧಿಕಾರಿ |
| 21 | ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣಾ ಕಾಯ್ದೆ, 2012 |
| 22 | ಸಾಮಾಜಿಕ ಹಿನ್ನೆಲೆ ವರದಿ |
| 23 | ಮಕ್ಕಳ ವಿಶೇಷ ಪೊಲೀಸ್ ಘಟಕ |
| 24 | ಮಕ್ಕಳ ಹಕ್ಕುಗಳ ಕುರಿತಾದ ವಿಶ್ವಸಂಸ್ಥೆಯ ಸಮಾವೇಶ, 1992 |

ಪ್ರೀತಿಯ ಕಾರ್ಯಕರ್ತರೆ,

ಈ ಸಮಗ್ರ ಮಾರ್ಗದರ್ಶಿಯನ್ನು ಕೂಲಂಕಷವಾದ ಮತ್ತು ಪರಿಣಾಮಕಾರಿಯಾದ ಸಾಮಾಜಿಕ ತನಿಖಾ ವರದಿಯನ್ನು ಸಿದ್ಧಪಡಿಸಲು ನಿಮಗೆ ಸಹಾಯಕವಾಗುವಂತೆ ರಚಿಸಲಾಗಿದೆ. ಬಾಲನ್ಯಾಯ ವ್ಯವಸ್ಥೆಯೊಳಗೆ ಬರುವ ಮಕ್ಕಳ ಸನ್ನಿವೇಶಗಳು ಮತ್ತು ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಲು ಸಾಮಾಜಿಕ ತನಿಖೆಗಳು ಬಹಳ ನಿರ್ಣಾಯಕವಾಗಿವೆ. ಸಾಮಾಜಿಕ ತನಿಖೆಗಳು ಬಾಲ ನ್ಯಾಯ ಮಂಡಳಿಗಳಿಗೆ ಮಗುವಿನ ಕುರಿತು ಅಮೂಲ್ಯವಾದ ಒಳನೋಟವನ್ನು ಒದಗಿಸುತ್ತವೆ, ಇದು ಮಗುವಿನ ಅತ್ಯುತ್ತಮ ಹಿತಾಸಕ್ತಿಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಗತ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವರಿಗೆ ಅನುವು ಮಾಡಿಕೊಡುತ್ತದೆ.

ಬಾಲ ನ್ಯಾಯ ವ್ಯವಸ್ಥೆಯೊಳಗಿನ ಇನ್ಯಾವುದೇ ಇತರ ಬಾಧ್ಯಸ್ಥರಿಗಿಂತ ಭಿನ್ನವಾಗಿ, ಒಬ್ಬ ಕಾರ್ಯಕರ್ತರಾಗಿ, ನೀವು ಮಕ್ಕಳ ಜೀವನದಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತೀರಿ. ನೀವು ಮಗುವಿನೊಂದಿಗೆ ನೇರ ಸಂಪರ್ಕದಲ್ಲಿರುತ್ತೀರಿ ಮತ್ತು ವ್ಯವಸ್ಥೆಯೊಳಗಿನ ಯಾವುದೇ ವ್ಯಕ್ತಿಗಿಂತ ಹೆಚ್ಚಾಗಿ ಮಗುವನ್ನು ಮತ್ತು ಮಗುವಿನ ನೆರೆಹೊರೆಯ ಪರಿಸರವನ್ನು ಚೆನ್ನಾಗಿ ಗಮನಿಸಲು ನಿಮಗೆ ಸಾಧ್ಯವಾಗುತ್ತದೆ. ಮಗುವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವ ಮತ್ತು ಅದನ್ನು ಬಾಲ ನ್ಯಾಯ ಮಂಡಳಿಗೆ ತಿಳಿಸುವ ಜವಾಬ್ದಾರಿ ಮತ್ತು ಅಧಿಕಾರವನ್ನು ನಿಮಗೆ ವಹಿಸಲಾಗಿದೆ. ಈ ಕೈಪಿಡಿಯ ಮೂಲಕ ಮಗುವಿನ ಹಿತಾಸಕ್ತಿಗೆ ಅನುಗುಣವಾಗಿ ಮತ್ತು 2015ರ ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆಯ ಆಶಯಕ್ಕೆ ಅನುಗುಣವಾಗಿ ಸಾಮಾಜಿಕ ತನಿಖೆಯನ್ನು ನಡೆಸಿ ವರದಿಯನ್ನು ಸಿದ್ಧಪಡಿಸಲು ಅಗತ್ಯವಾದ ಮಾಹಿತಿ ಮತ್ತು ಕೌಶಲಗಳು ನಿಮಗೆ ಒದಗುತ್ತವೆ ಎಂದು ನಾವು ಆಶಿಸುತ್ತೇವೆ.

## ಕೈಪಿಡಿಯ ಬಗ್ಗೆ

ಈ ಕೈಪಿಡಿಯು, ಬಾಲ ನ್ಯಾಯ ವ್ಯವಸ್ಥೆಯಲ್ಲಿ ಕೆಲಸ ಮಾಡುವ ಕಾರ್ಯಕರ್ತರಿಗೆ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಆರೋಪವನ್ನು ಹೊತ್ತಿರುವ (ಸಿಐಸಿಎಲ್) ಮಕ್ಕಳ ಸಾಮಾಜಿಕ ತನಿಖೆಯನ್ನು ನಡೆಸುವ ಉದ್ದೇಶ ಮತ್ತು ವಿಧಾನಗಳ ಕುರಿತ ಒಂದು ಪರಿಚಯವಾಗಿದೆ.

2015ರ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆಯ ಸೆಕ್ಷನ್ 8(ಇ) ಪ್ರಕಾರ, ಪ್ರೊಬೇಷನ್ ಅಧಿಕಾರಿಗಳು (ಪಿಒ), ಸಾಮಾಜಿಕ ಕಾರ್ಯಕರ್ತರು ಅಥವಾ ಮಕ್ಕಳ ಕಲ್ಯಾಣ ಅಧಿಕಾರಿಗಳು (ಸಿಡಬ್ಲ್ಯೂಒಗಳು) ಸಿಐಸಿಎಲ್‌ಗಾಗಿ ಸಾಮಾಜಿಕ ತನಿಖೆಯನ್ನು ನಡೆಸಬೇಕು. ಈ ಕೈಪಿಡಿಯು ಸಾಮಾಜಿಕ ತನಿಖೆಯ ಈ ಕಾರ್ಯಕರ್ತರನ್ನು ಗಮನದಲ್ಲಿಟ್ಟುಕೊಂಡು, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಆರೋಪ ಹೊತ್ತಿರುವ ಮಕ್ಕಳಿಗಾಗಿ ಪರಿಣಾಮಕಾರಿ ಸಾಮಾಜಿಕ ತನಿಖಾ ವರದಿ (ಎಸ್‌ಐಆರ್) ತಯಾರಿಸಲು ಅವರಿಗೆ ನೆರವಾಗುವ ಗುರಿಯನ್ನು ಹೊಂದಿದೆ.

ಬಾಲ ನ್ಯಾಯ ಕಾಯ್ದೆಯ ಪ್ರಕಾರ, ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಗು (ಸಿಐಎನ್‌ಸಿಪಿ) ಮತ್ತು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು (ಸಿಐಸಿಎಲ್)– ಎರಡೂ ತರಹದ ಮಕ್ಕಳ ಕುರಿತು ಸಾಮಾಜಿಕ ತನಿಖೆ ನಡೆಸಬೇಕು. ಈ ಎರಡೂ ಸಾಮಾಜಿಕ ತನಿಖಾ ವರದಿಗಳ ಉದ್ದೇಶ, ವ್ಯಾಪ್ತಿ ಮತ್ತು ಭೌತಿಕ ಸ್ವರೂಪಗಳು ವಿಭಿನ್ನವಾಗಿವೆ. 2016ರ ಬಾಲ ನ್ಯಾಯ (ಆರೈಕೆ ಮತ್ತು ಮಕ್ಕಳ ರಕ್ಷಣೆ) ಮಾದರಿ ನಿಯಮಗಳನ್ನು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗಾಗಿ ಅನುಸರಿಸಲಾಗುತ್ತದೆ, ಆದರೆ, ಬಾಲ ನ್ಯಾಯ (ತಿದ್ದುಪಡಿ) ನಿಯಮಗಳು, 2022ರ ನಮೂನೆ 21 ಮತ್ತು ನಮೂನೆ 22ನ್ನು ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಅನುಸರಿಸಲಾಗುವುದು.

ಈ ಕೈಪಿಡಿಯು, 2015ರ ಬಾಲ ನ್ಯಾಯ ಕಾಯ್ದೆಯ ಸೆಕ್ಷನ್ 8(3)(ಇ) ಅಡಿಯಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗಾಗಿ ಸಾಮಾಜಿಕ ತನಿಖಾ ವರದಿಯನ್ನು ಸಿದ್ಧಪಡಿಸುವ ವ್ಯಕ್ತಿಗಳು ಮತ್ತು/ಅಥವಾ ಸಂಸ್ಥೆಗಳಿಗಾಗಿ ವಿಶಿಷ್ಟವಾಗಿ ರೂಪಿಸಲಾಗಿದೆ. ಇದು, ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಸಂದರ್ಭದ ಅಗತ್ಯಗಳನ್ನು ಪೂರೈಸುವುದಿಲ್ಲ.

ಒಬ್ಬ ಪಿಒ ಮತ್ತು/ಅಥವಾ ಸಾಮಾಜಿಕ ಕಾರ್ಯಕರ್ತರು ಬಾಲ ನ್ಯಾಯ ವ್ಯವಸ್ಥೆಯ ಒಳಗೆ ವಹಿಸುವ ಹಲವು ಪಾತ್ರಗಳು ಮತ್ತು ಜವಾಬ್ದಾರಿಗಳಲ್ಲಿ, ಎಸ್ಐಆರ್ ಬಹಳ ಮಹತ್ವವನ್ನು ಪಡೆಯುತ್ತದೆ; ಏಕೆಂದರೆ, ಮಗುವಿನ ವಿವಿಧ ಸಾಮಾಜಿಕ–ಆರ್ಥಿಕ ಮತ್ತು ಮಾನಸಿಕ ಹಿನ್ನೆಲೆಗಳು ಮತ್ತು ಅಪಾಯಕಾರಿ ಅಂಶಗಳ ಕುರಿತು ಬಾಲ ನ್ಯಾಯ ಮಂಡಳಿ(ಜೆಜೆಬಿ)ಗಳಿಗೆ ತಿಳಿಸುವ ಸಾಮರ್ಥ್ಯವನ್ನು ಎಸ್ಐಆರ್ ಹೊಂದಿರುತ್ತದೆ; ಇದು, ಆಪಾದಿಸಲಾಗಿರುವ ಅಪರಾಧದ ಕುರಿತಾದ ವಿವರಗಳನ್ನಷ್ಟೆ ಅಲ್ಲ, ಬದಲಿಗೆ ಮಗುವನ್ನು ಕಾನೂನಿನ ಸಂಪರ್ಕಕ್ಕೆ ಅಥವಾ ಅದರೊಂದಿಗೆ ಸಂಘರ್ಷಕ್ಕೆ ತಂದು ನಿಲ್ಲಿಸಿದ ಸನ್ನಿವೇಶಗಳ ಮೇಲೆ ಗಮನ ಹರಿಸುತ್ತದೆ. ಹೀಗಾಗಿ, ಎಸ್ಐಆರ್, ಮಕ್ಕಳನ್ನು ಕಾನೂನಿನ ಸಂಪರ್ಕಕ್ಕೆ ಅಥವಾ ಅದರೊಂದಿಗೆ ಸಂಘರ್ಷಕ್ಕೆ ತಂದು ನಿಲ್ಲಿಸುವ ಸಂದರ್ಭ, ಸನ್ನಿವೇಶ, ಬಾಲ್ಯದ ಪ್ರತಿಕೂಲ ಅನುಭವಗಳು, ಜಾತಿ, ಸ್ವತ್ತು ಇತ್ಯಾದಿ ಸಾಮಾಜಿಕ–ಆರ್ಥಿಕ ವಾಸ್ತವಗಳ ಕುರಿತು ಅರ್ಥ ಮಾಡಿಕೊಳ್ಳಲು ಜೆಜೆಬಿಗೆ ನೆರವಾಗುವಲ್ಲಿ ಇದು ಶಕ್ತಿಶಾಲಿ ಸಾಧನವಾಗಿದೆ.

ತಾತ್ಪರ್ಯದಲ್ಲಿ ಹೇಳುವುದಾದರೆ, ಎಸ್ಐಆರ್ ಎಂದರೇನು, ಅದನ್ನು ತಯಾರಿಸುವುದು ಹೇಗೆ ಎನ್ನುವ ಪ್ರಶ್ನೆಗಳನ್ನು ವಿಶದವಾಗಿ ಅರ್ಥ ಮಾಡಿಕೊಳ್ಳಲು ಕಾರ್ಯಕರ್ತರಿಗೆ ನೆರವಾಗುವುದು ಈ ಕೈಪಿಡಿಯ ಗುರಿಯಾಗಿದೆ.

## ಈ ಕೈಪಿಡಿಯು ತನ್ನ ಉದ್ದೇಶವನ್ನು ಕಂಡುಕೊಳ್ಳುವುದು ಇಲ್ಲಿ!

ಈ ಕೈಪಿಡಿಯನ್ನು, ಸಾಮಾಜಿಕ ಕಾರ್ಯ, ಮಕ್ಕಳ ಮನೋವಿಜ್ಞಾನ ಮತ್ತು ಕಾನೂನು ಕ್ಷೇತ್ರಗಳಲ್ಲಿನ ಕಾರ್ಯಕರ್ತರು ಮತ್ತು ಪರಿಣತರೊಂದಿಗೆ ಸಂವಾದ, ಸಂದರ್ಶನ ಮತ್ತು ಸಮಾಲೋಚನೆಯನ್ನು ನಡೆಸಿದ್ದನ್ನು ಆಧರಿಸಿ ತಯಾರಿಸಲಾಗಿದೆ. ಈ ಕೈಪಿಡಿಯು, ಮಗು ಮತ್ತು ಕಾರ್ಯಕರ್ತರು, ಇಬ್ಬರದೂ ವಿಭಿನ್ನ ವಾಸ್ತವತೆಗಳು ಮತ್ತು ವಾಡಿಕೆಗಳನ್ನು ಒಳಗೊಳ್ಳುವ ಪ್ರಯತ್ನ ಮಾಡುತ್ತಿರುವುದಾದರೂ, ಇನ್ನೂ ಹೆಚ್ಚಿನ ಸಾಧ್ಯತೆಗಳು ಇದಕ್ಕೆ ಇರಬಹುದು. ಆದ್ದರಿಂದ, ಸಿಐಸಿಎಲ್‌ಗಾಗಿ ಎಸ್ಐಆರ್‌ನ್ನು ಪರಿಣಾಮಕಾರಿಯಾಗಿ ತಯಾರಿಸುವಲ್ಲಿ ಇದೊಂದು ಪರಿಚಯಾತ್ಮಕ ಕೈಪಿಡಿಯಾಗಿದೆ; ಮತ್ತು ಉತ್ತಮ ವಾಡಿಕೆಗಳ ವಿಸ್ತಾರವಾದ ಸಂಕಥನಗಳನ್ನು ನಿರ್ಮಿಸಲು, ಮತ್ತು ನ್ಯಾಯ ವ್ಯವಸ್ಥೆಯ ಅನುಷ್ಠಾನದ ಒಳಗೆಯೇ ಇರಬಹುದಾದ ದೋಷಗಳನ್ನು ಗುರುತಿಸಲು ಭಾರತದಲ್ಲಿನ ಬಾಲ ನ್ಯಾಯ ವ್ಯವಸ್ಥೆಯ ಕ್ಷೇತ್ರದಲ್ಲಿ ಕಾರ್ಯಕರ್ತರು ಮತ್ತು ಸಂಶೋಧಕರು ಇದನ್ನು ಬಳಸುವರು.

### ಓದುಗರಿಗಾಗಿ ಟಿಪ್ಪಣಿ

ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಂದರ್ಭದಲ್ಲಿ ಈ ಕೈಪಿಡಿಯು, ಗಂಡು–ಹೆಣ್ಣು ಎರಡೂ ಲಿಂಗಗಳ ಮಕ್ಕಳನ್ನು ಒಳಗೊಳ್ಳುವ ಮತ್ತು ಅವರ ನಡುವೆ ಯಾವುದೇ ಬಗೆಯ ತಾರತಮ್ಯವನ್ನು ಮಾಡದೇ ಇರುವ ನಿಲುವನ್ನು ಹೊಂದಿರುತ್ತದೆ, ಹೀಗಾಗಿ, ಇಡೀ ಕೈಪಿಡಿಯ ಉದ್ದಕ್ಕೂ ಆತ/ಆಕೆ/ಅವರು ಎಂಬ ಸರ್ವನಾಮಗಳನ್ನು ಬಳಸಲಾಗಿದೆ. ಓದುಗರು ಆ ದಿಕ್ಕಿನಲ್ಲಿ ಆಲೋಚಿಸುವಂತೆ ಉತ್ತೇಜಿಸಲಾಗಿದೆ.

## ಈ ಕೈಪಿಡಿಯ ಸಂರಚನೆ ಈ ರೀತಿ ಇದೆ. ಇದರಲ್ಲಿ 8 ಅಧ್ಯಾಯಗಳಿವೆ:



- **ಅಧ್ಯಾಯ 1,** ಜೆಜೆ ಕಾಯ್ದೆಯ ಮತ್ತು ಮಕ್ಕಳ ಹಕ್ಕುಗಳ ಕುರಿತು ಇರುವ ಸಾಮಾನ್ಯ ತತ್ತ್ವಗಳ ಒಟ್ಟಾರೆ ಅವಲೋಕನವಾಗಿದೆ.
- **ಅಧ್ಯಾಯ 2,** ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು (ಸಿಐಸಿಎಲ್) ಎಂದರೆ ಯಾರು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಓದುಗರಿಗೆ ನೆರವಾಗುತ್ತದೆ. 'ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು, ಆರೈಕೆ ಮತ್ತು ರಕ್ಷಣೆಯ ಅಗತ್ಯ ಇರುವ ಮಗುವೂ ಆಗಿರಬಹುದೇ?' ಎಂಬ ಪ್ರಶ್ನೆಯನ್ನು ಎತ್ತುವ ಮೂಲಕ ಈ ಅಧ್ಯಾಯವು ಓದುಗರನ್ನು ಹೆಚ್ಚು ಸಂಕೀರ್ಣವಾದ ಆಲೋಚನೆಯಲ್ಲಿ ತೊಡಗಿಸುತ್ತದೆ.
- **ಅಧ್ಯಾಯ 3,** ಈ ತಿಳಿವಳಿಕೆಯಿಂದ ಮುಂದುವರೆದು, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು ಮತ್ತು ಎಸ್‌ಐಆರ್‌ನ ಮಹತ್ವದ ನಡುವಿನ ಸಂಬಂಧವನ್ನು ನಿರೂಪಿಸುತ್ತದೆ. ಈ ಅಧ್ಯಾಯವು, ಎಸ್‌ಐಆರ್‌ನ್ನು ಯಾರು ಸಿದ್ಧಪಡಿಸಬಹುದು? ಮತ್ತು ಇದರಲ್ಲಿ ಕಾರ್ಯಕರ್ತರ ಪಾತ್ರವೇನು ಎಂಬ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತದೆ.
- **ಅಧ್ಯಾಯ 4,** ಎಸ್‌ಐಆರ್ ತಯಾರಿಸಲು ಕಾರ್ಯಕರ್ತರು ಸಂಗ್ರಹಿಸಬೇಕಾದ ಮಾಹಿತಿಯ ವಿವಿಧ ಆಕರಗಳನ್ನು ಶೋಧಿಸುತ್ತದೆ. ಒಂದು ಸಂದರ್ಶನಕ್ಕಾಗಿ ಬಳಸಬಹುದಾದ ಕೆಲವು ತಂತ್ರಗಳ ಉದಾಹರಣೆಗಳನ್ನೂ ಈ ಅಧ್ಯಾಯಗಳಲ್ಲಿ ನೀಡಲಾಗಿದೆ.
- **ಅಧ್ಯಾಯ 5,** ಒಂದು ಎಸ್‌ಐಆರ್‌ನ್ನು ಸಿದ್ಧಪಡಿಸುವಾಗ ಅನುಸರಿಸಬೇಕಾದ ಹಂತಹಂತದ ಪ್ರಕ್ರಿಯೆಯ ಪರಿಚಯವನ್ನು ಓದುಗರಿಗೆ ನೀಡುತ್ತದೆ. ಸಾಮಾಜಿಕ ತನಿಖೆಗೆ ಮುಂಚೆ ಮತ್ತು ಅದರ ನಂತರ ಅನುಸರಿಸಬೇಕಾದ ಹಂತಗಳನ್ನು ಇಲ್ಲಿ ವಿಶದವಾಗಿ ವಿವರಿಸಲಾಗಿದೆ.
- **ಅಧ್ಯಾಯ 6,** (ಎಸ್‌ಐಆರ್) ನಮೂನೆ 6ನ್ನು ವಿವರವಾಗಿ ಗಮನಿಸುವ ಪ್ರಯತ್ನ ಮಾಡುತ್ತದೆ. ನಮೂನೆಯಲ್ಲಿನ ಪ್ರತಿ ಪ್ರಶ್ನೆಯನ್ನು, ಈ ನಮೂನೆಯಲ್ಲಿ ಈ ಪ್ರಶ್ನೆ ಇರುವುದೇಕೆ? ಇದರ ಅರ್ಥವೇನು? ಈ ಪ್ರಶ್ನೆಯನ್ನು ಯಾರಿಗೆ ಮತ್ತು ಹೇಗೆ ಕೇಳಬೇಕು? ಎನ್ನುವ ಪ್ರಶ್ನೆಗಳನ್ನು ಆಧರಿಸಿ ವಿಸ್ತಾರವಾಗಿ ವಿವರಿಸಲಾಗಿದೆ.
- **ಅಧ್ಯಾಯ 7,** ಸಾಮಾಜಿಕ ತನಿಖೆ ನಡೆಸುವಾಗ ಮತ್ತು ಆ ಕುರಿತು ವರದಿಯನ್ನು ತಯಾರಿಸುವಾಗ ಒಂದು ಸಾಧನವಾಗಿ ಸಂವಹನದ ಮಹತ್ವವನ್ನು ವಿವರಿಸುತ್ತದೆ.
- **ಅಧ್ಯಾಯ 8,** ಸಿಐಸಿಎಲ್ ಮಕ್ಕಳ ಕುರಿತು ತಯಾರಿಸಲಾಗುವ ಎಸ್‌ಐಆರ್ ಕುರಿತು ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳನ್ನು ಉತ್ತರಿಸುವ ಪ್ರಯತ್ನವನ್ನು ಮಾಡುತ್ತದೆ.

**ನಮೂನೆ 6ರಲ್ಲಿ ಇರುವ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುವಲ್ಲಿ ಒಳಗೊಳ್ಳುವ ತತ್ತ್ವಗಳು ಮತ್ತು ತಂತ್ರಗಳ ಪ್ರಾಯೋಗಿಕವಾಗಿ ಅನ್ವಯದಲ್ಲಿರುವ ಪೂರ್ವಗ್ರಹದ ವಿವಿಧ ಪರಿಕಲ್ಪನೆಗಳು, ಮತ್ತು ಕೈಪಿಡಿಯು ವಿವಿಧ ಪ್ರಕರಣ ಅಧ್ಯಯನಗಳ ನಿದರ್ಶನಗಳು ಮತ್ತು ಅಭ್ಯಾಸಗಳ ಸಹಾಯದಿಂದ ವಿವರಿಸುತ್ತದೆ.**

# ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015: ಒಂದು ಅವಲೋಕನ

ಸಾಮಾಜಿಕ ತನಿಖೆ ನಡೆಸಿ, ವರದಿಯನ್ನು ತಯಾರಿಸುವಾಗ ಪ್ರೊಬೇಷನ್ ಅಧಿಕಾರಿ ಅಥವಾ ಸಾಮಾಜಿಕ ಕಾರ್ಯಕರ್ತರು ನಿಷ್ಠರಾಗಿರಬೇಕಾದ ಪ್ರಾಥಮಿಕ ದಾಖಲೆ ಎಂದರೆ, ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ, 2015. ಇದೇ, ಅರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ(ಸಿಐಎನ್‌ಸಿಪಿ) ಮತ್ತು ಕಾನೂನಿನೊಂದಿಗೆ ಸಂಘರ್ಷಣೆಯಲ್ಲಿದ್ದಾರೆ ಎಂದು ಆರೋಪಿತರಾಗಿರುವ ಮಕ್ಕಳಿಗೆ(ಸಿಐಸಿಎಲ್) ರಕ್ಷಣೆಯನ್ನು ನೀಡುವ ಕಾನೂನು.

ಜೆಜೆ ಕಾಯ್ದೆಯು, ಯುನೈಟೆಡ್ ನೇಷನ್ಸ್ ಕನ್ವೆನ್ಶನ್ ಆನ್ ರೈಟ್ಸ್ ಆಫ್ ದ ಚೈಲ್ಡ್, 1992ರ ಕುರಿತು ಭಾರತವು ತೋರಿರುವ ಅಂತರರಾಷ್ಟ್ರೀಯ ಬದ್ಧತೆಯನ್ನು ಪ್ರತಿಧ್ವನಿಸುತ್ತದೆ. ಮಕ್ಕಳು ನ್ಯಾಯ ವ್ಯವಸ್ಥೆಯಲ್ಲಿ ಸುಗಮವಾಗಿ ನಿರ್ದೇಶಿತರಾಗಲು ಸಹಾಯಕವಾಗುವಂತೆ ಜೆಜೆ ಕಾಯ್ದೆಯು, ಒಂದು ಪ್ರತ್ಯೇಕವಾದ ಕಾನೂನು ಪ್ರಾಧಿಕಾರ ಮತ್ತು ಮಗು–ಸ್ನೇಹಿ ಪ್ರಕ್ರಿಯೆಯನ್ನು ಕಡ್ಡಾಯಗೊಳಿಸಿ ಆದೇಶಿಸುತ್ತದೆ. ಮಕ್ಕಳ ಕಲ್ಯಾಣ ಸಮಿತಿಗಳು(ಸಿಡಬ್ಲ್ಯುಸಿ) ಸಿಐಎನ್‌ಸಿಪಿಗೆ ಪ್ರತಿಕ್ರಿಯಿಸಬೇಕು ಎಂದಿದ್ದಾಗಲೂ, ಬಾಲ ನ್ಯಾಯ ಮಂಡಳಿ(ಜೆಜೆಬಿ) ಗಳನ್ನು ಸಿಐಸಿಎಲ್‌ಗಳಿಗೆ ಪ್ರತಿಕ್ರಿಯಿಸುವಂತೆ ವಿಶಿಷ್ಟವಾಗಿ ವಿನ್ಯಾಸಗೊಳಿಸಲಾಗಿದೆ. ಈ ಎರಡೂ ಪ್ರಾಧಿಕಾರಗಳೂ ಜೆಜೆ ಕಾಯ್ದೆಯಲ್ಲಿ ನಿರೂಪಿಸಲಾದ ಹಲವು ಕಟ್ಟುನಿಟ್ಟಾದ ಸಿದ್ಧಾಂತಗಳ ಅನ್ವಯ ಮಾರ್ಗದರ್ಶಿತವಾಗಿವೆ, ಮತ್ತು ಮಕ್ಕಳ ಹಕ್ಕುಗಳನ್ನು ರಕ್ಷಿಸುವುದನ್ನು ಮತ್ತು ಸಂರಕ್ಷಿಸುವುದನ್ನೇ ಪರಮಗುರಿಯಾಗಿ ಹೊಂದಿರುವ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳನ್ನು ಈ ಪ್ರಾಧಿಕಾರಗಳಿಗೆ ವಹಿಸಲಾಗಿದೆ.



## ಬಾಲ ನ್ಯಾಯ ವ್ಯವಸ್ಥೆಯ ಅಡಿಯಲ್ಲಿ ಮಕ್ಕಳು ಎಂದರೆ ಯಾರು?

- ಜೆಜೆ ಕಾಯ್ದೆಯ ಸೆಕ್ಷನ್ 2 (12), 'ಮಗು' ಎಂದರೆ ಹದಿನೆಂಟು ವರ್ಷ ಪೂರೈಸದೇ ಇರುವ ವ್ಯಕ್ತಿ ಎಂದು ವ್ಯಾಖ್ಯಾನಿಸುತ್ತದೆ.
- ಜೆಜೆ ಕಾಯ್ದೆಯ ಸೆಕ್ಷನ್ 2 (13) ಪ್ರಕಾರ, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು ಎಂದರೆ, ಒಂದು ಅಪರಾಧವನ್ನು ಮಾಡಿದೆ ಎಂದು ಗೊತ್ತಾಗಿರುವ ಅಥವಾ ಹಾಗೆಂದು ಆಪಾದಿತವಾಗಿರುವ ಮತ್ತು ಅಂಥ ಅಪರಾಧವನ್ನು ಎಸಗಿದ ದಿನಾಂಕದಂದು ಹದಿನೆಂಟು ವರ್ಷ ಪೂರ್ಣಗೊಳಿಸದೇ ಇರುವ ಒಬ್ಬ ವ್ಯಕ್ತಿ.
- ಜೆಜೆ ಕಾಯ್ದೆಯ ಸೆಕ್ಷನ್ 2 (14), ಸಿಐಎನ್‌ಸಿಪಿ–ಯನ್ನು ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಗು ಎಂದು ವ್ಯಾಖ್ಯಾನಿಸುತ್ತದೆ. ಉದಾಹರಣೆಗೆ, ಅಂಥ ಮಕ್ಕಳಲ್ಲಿ (ಇತರರೊಂದಿಗೆ) ಕಾಣೆಯಾಗಿರುವ ಮಕ್ಕಳು, ಪರಿತ್ಯಕ್ತ ಅಥವಾ ತೊರೆಯಲಾಗಿರುವ ಮಕ್ಕಳು, ಮತ್ತು ತಂದೆತಾಯಿ/ಪೋಷಕರು ಇಲ್ಲದ ಮಕ್ಕಳು ಒಳಗೊಂಡಿರುತ್ತಾರೆ (ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಕುರಿತು ಹೆಚ್ಚು ತಿಳಿಯಲು ದಯವಿಟ್ಟು ಜೆಜೆ ಕಾಯ್ದೆಯನ್ನು ಓದಿ).

# ಮಕ್ಕಳ ಆರೈಕೆ ಮತ್ತು ರಕ್ಷಣೆಯ ಸಾಮಾನ್ಯ ತತ್ತ್ವಗಳು

ಈ ಕುರಿತು ಜೆಜೆ ಕಾಯ್ದೆಯ ಸೆಕ್ಷನ್ 3ರಲ್ಲಿ ಇಂಥ ಹದಿನಾರು ಸಾಮಾನ್ಯ ತತ್ತ್ವಗಳನ್ನು ನಿರೂಪಿಸಲಾಗಿದೆ. ಎಸ್‌ಐಆರ್‌ನ್ನು ತಯಾ-ರಿಸುವಾಗ ಅವುಗಳ ಅನ್ವಯದ ಕೆಲವು ಉದಾಹರಣೆಗಳ ಸಹಿತವಾಗಿ ಕೆಳಗೆ ಅವುಗಳನ್ನು ವ್ಯಾಖ್ಯಾನಿಸಲಾಗಿದೆ.

### ಮುಗ್ಧತೆಯ ಊಹೆಯ ತತ್ತ್ವ

ಹದಿನೆಂಟು ವರ್ಷ ವಯಸ್ಸಿನವರೆಗಿನ ಯಾವುದೇ ಮಗುವನ್ನು ಯಾವುದೇ ಅಪರಾಧಿಕ ಉದ್ದೇಶವಿಲ್ಲದ ಮುಗ್ಧ ವ್ಯಕ್ತಿ ಎಂದೇ ಭಾವಿಸಬೇಕು.

ಉದಾ: ಎಸ್‌ಐಆರ್‌ನ್ನು ತಯಾರಿಸುವ ಹಂತದಲ್ಲಿ ಅಪರಾಧಗಳೆಲ್ಲವೂ ಆಪಾದಿಸಲಾಗಿರುವ ಮತ್ತು ಇನ್ನೂ ಸಾಬೀತಾಗಬೇಕಾದ ಕೃತ್ಯಗಳು; ಆದ್ದರಿಂದ, ಮಗು ಅದನ್ನು ಮಾಡಿರದ ಮುಗ್ಧ ಎಂದೇ ಭಾವಿಸಬೇಕು ಮತ್ತು ಕಾರ್ಯಕರ್ತರು ಮಗುವಿನ ಕುರಿತು ತಮ್ಮದೇ ನೆಲೆಯಿಂದ ಪೂರ್ವಗ್ರಹದ ಹೇಳಿಕೆಗಳನ್ನು ನೀಡಬಾರದು.

### ಘನತೆ ಮತ್ತು ಮೌಲ್ಯದ ತತ್ತ್ವ

ಎಲ್ಲಾ ಮಾನವರನ್ನು ಸಮಾನವಾದ ಘನತೆ ಮತ್ತು ಹಕ್ಕುಗಳೊಂದಿಗೆ ನಡೆಸಿಕೊಳ್ಳಬೇಕು.

ಉದಾ: ಯಾವಾಗಲೂ ನೀವು ನಿಮ್ಮ ಪರಿಚಯವನ್ನು ಮೊದಲು ಹೇಳಿಕೊಳ್ಳಿ, ನಂತರ ಮಗು ಮತ್ತು ಅದರ ಕುಟುಂಬಕ್ಕೆ ನೀವು ಅವರಲ್ಲಿಗೆ ಭೇಟಿ ನೀಡಿರುವ ಉದ್ದೇಶವನ್ನು ವಿವರಿಸಿ.

### ಸಹಭಾಗಿತ್ವದ ತತ್ತ್ವ

ಪ್ರತಿಯೊಂದು ಮಗುವೂ ತನ್ನ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಎಲ್ಲಾ ಪ್ರಕ್ರಿಯೆಗಳು ಮತ್ತು ನಿರ್ಧಾರಗಳಲ್ಲಿ ಭಾಗವಹಿಸುವ ಮತ್ತು ತನ್ನ ಮಾತನ್ನು ಹೇಳುವ (ಸಂಬಂಧಪಟ್ಟವರು ಆಲಿಸುವುದನ್ನು ಖಚಿತಪಡಿಸಿಕೊಳ್ಳುವ) ಹಕ್ಕನ್ನು ಹೊಂದಿರಬೇಕು.

ಉದಾ: ಮಗುವಿಗೆ/ಕುಟುಂಬಕ್ಕೆ ತಮ್ಮ ಕಥೆಯನ್ನು/ಅಭಿಪ್ರಾಯವನ್ನು ಹೇಳಲು ಮುಕ್ತ ಅವಕಾಶವನ್ನು ನೀಡಬೇಕು, ಯಾವುದೇ ಪೂರ್ವಗ್ರಹ, ನಿಮ್ಮದೇ ಆದ ಪೂರ್ವನಿರ್ಧಾರ ಇಲ್ಲದೇ ಆಲಿಸಬೇಕು.

### ಅತ್ಯುತ್ತಮ ಆಸಕ್ತಿಯ ತತ್ತ್ವ

ಮಗುವಿಗೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳು ಅದರ ಹಿತಾಸಕ್ತಿಗೆ ಅನುಗುಣವಾಗಿರುತ್ತವೆ ಮತ್ತು ಅವು ಮಗುವಿನ ಪೂರ್ಣ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಸಹಾಯಕವಾಗುತ್ತವೆ ಎಂಬ ಪ್ರಾಥಮಮಿಕ ಪರಿಗಣನೆಯ ಆಧಾರದ ಮೇಲೆ ಇರಬೇಕು.

ಉದಾ: ಕೆಲವೊಮ್ಮೆ, ಕಾನೂನನ್ನು ನೇರವಾಗಿ ಅನ್ವಯಿಸುವುದು ಮಗುವಿನ ಹಿತಾಸಕ್ತಿಗೆ ಪೂರಕವಾಗಿ ಇರದೇ ಇರಬಹುದು. ಎಸ್‌ಐಅರ್ ಬರೆಯುವಾಗ, ಮಗು ಮತ್ತು ಅದರ ಕುಟುಂಬದ ಪರಿಸ್ಥಿತಿಯ ಎಲ್ಲಾ ಅಂಶಗಳನ್ನು ಅವಲೋಕಿಸಬೇಕು.

### ಕುಟುಂಬದ ಜವಾಬ್ದಾರಿ ತತ್ತ್ವ

ಮಗುವಿನ ಪಾಲನೆ, ಪೋಷಣೆ ಮತ್ತು ರಕ್ಷಣೆಯ ಪ್ರಾಥಮಿಕ ಜವಾಬ್ದಾರಿಯು, ಸಂದರ್ಭಕ್ಕನುಗುಣವಾಗಿ ಅದರ ಜೈವಿಕ ಕುಟುಂಬ ಅಥವಾ ದತ್ತು ಪೋಷಕರು ಅಥವಾ ಸಾಕುವ ಪೋಷಕರದು ಆಗಿರುತ್ತದೆ.

### ಸುರಕ್ಷಿತತೆಯ ತತ್ತ್ವ

ಮಗು ಸುರಕ್ಷಿತವಾಗಿದ್ದು, ಯಾವುದೇ ಹಾನಿ, ನಿಂದನೆ ಅಥವಾ ದೌರ್ಜನ್ಯಕ್ಕೆ ಒಳಗಾಗದಂತೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಉದಾ: ಮಗುವಿಗೆ ಶಿಸ್ತನ್ನು ಕಲಿಸುವ ನೆಪದಲ್ಲಿ ಅದು ದೌರ್ಜನ್ಯಕ್ಕೆ ಒಳಗಾಗುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರಶ್ನೆಗಳನ್ನು ಕೇಳುವುದು.

### ಸಕಾರಾತ್ಮಕ ಕ್ರಮಗಳ ತತ್ತ್ವ

ಮಗುವಿನ ಕ್ಷೇಮವನ್ನು ಸಂರಕ್ಷಿಸಲು, ಅದರ ಗುರುತಿನ ಬೆಳವಣಿಗೆಯನ್ನು ಉತ್ತೇಜಿಸಲು ಮತ್ತು ಒಳಗೊಳ್ಳುವ ಮತ್ತು ಸಕ್ರಿಯಗೊಳಿಸುವ ವಾತಾವರಣವನ್ನು ಒದಗಿಸಲು, ಮಕ್ಕಳ ಅಮಾಯಕತೆಯನ್ನು ಮತ್ತು ಕಾಯ್ದೆಯ ಮಧ್ಯಪ್ರವೇಶದ ಅಗತ್ಯವನ್ನು ಕಡಿಮೆ ಮಾಡಲು, ಕುಟುಂಬ ಮತ್ತು ಸಮುದಾಯದವೂ ಒಳಗೊಂಡಹಾಗೆ ಸಾಧ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಸಂಘಟಿಸಬೇಕು.

ಉದಾ: ಮಗು ಶಾಲೆಗೆ ಹೋಗುತ್ತಿಲ್ಲವಾದರೆ, ಏಕೆ ಎಂದು ಕುಟುಂಬದವರಿಗೆ ಕೇಳಿ; ಮಗುವಿಗೆ ಹೆಚ್ಚು ಉತ್ತಮವಾದ ಪರಿಸರವನ್ನು ಒದಗಿಸಲು ಅವರಿಗೆ ಏನಾದರೂ ಬೆಂಬಲ ಬೇಕೇ ಎಂದು ವಿಚಾರಿಸಿ. ಇನ್ನೊಂದು ಉಪಾಯವೆಂದರೆ, ಮಗುವಿನ ಕೌಟುಂಬಿಕ ಸನ್ನಿವೇಶಗಳನ್ನು ಅವಲಂಬಿಸಿ ಕುಟುಂಬಕ್ಕೆ ಪ್ರಯೋಜನಕಾರಿಯಾದ ಸರಕಾರದ ಕಾರ್ಯಯೋಜನೆಗಳನ್ನು ಪರಿಚಯಿಸುವುದು.

### ನಿಂದನೆ, ದೂಷಣೆ ಹೊರತಾದ ಪದಗಳ ಬಳಕೆಯ ತತ್ತ್ವ

ಮಗುವಿಕೆ ಸಂಬಂಧಿಸಿದ ಯಾವುದೇ ಪ್ರಕ್ರಿಯೆಯಲ್ಲಿ ಪ್ರತಿಕೂಲಾತ್ಮಕವಾದ, ನಿಂದನೆ ಅಥವಾ ದೂಷಣಾತ್ಮಕ ಅರ್ಥದ ಪದಗಳನ್ನು ಬಳಸಬಾರದು.

ಉದಾ: ಸಂದರ್ಶನವನ್ನು ಮಾಡುವ ವೇಳೆಯಲ್ಲಿ, 'ಕ್ರಿಮಿನಲ್', 'ಕಳ್ಳ/ಕಳ್ಳಿ', 'ಕೆಟ್ಟ ಹುಡುಗ/ಹುಡುಗಿ' ಈ ತರಹದ ಪದಗಳನ್ನು ಮಗುವಿನ ಮತ್ತು ಅದರ ಕುಟುಂಬದ ಎದುರು ಬಳಸಬಾರದು.

### ಹಕ್ಕುಗಳನ್ನು ಬಿಟ್ಟುಕೊಡದಿರುವಿಕೆ ತತ್ತ್ವ

ಮಗುವಿನ ಯಾವುದೇ ಹಕ್ಕನ್ನು ಬಿಟ್ಟುಕೊಡುವಂತೆ ಮಾಡುವುದಕ್ಕೆ ಅನುಮತಿಯೂ ಇಲ್ಲ,
ಅದು ಮಾನ್ಯವೂ ಅಲ್ಲ.

ಉದಾ: ಮಗುವು ತನ್ನ ಹಕ್ಕುಗಳನ್ನು ಒಬ್ಬ ಲಾಯರರಿಗೆ ಬಿಟ್ಟುಕೊಡುವ ಹಾಗಿಲ್ಲ.

### ಸಮಾನತೆ ಮತ್ತು ತಾರತಮ್ಯರಾಹಿತ್ಯದ ತತ್ತ್ವ

ಲಿಂಗ, ಜಾತಿ, ಜನಾಂಗ, ಜನ್ಮಸ್ಥಳ, ಅಸಾಮರ್ಥ್ಯ ಸೇರಿದಂತೆ ಯಾವುದೇ ಆಧಾರದ ಮೇಲೆ ಮಗುವಿನ ವಿರುದ್ಧ ತಾರತಮ್ಯ ತೋರಬಾರದು. ಮತ್ತು ಪ್ರವೇಶ, ಅವಕಾಶ ಮತ್ತು ನಡೆಸಿಕೊಳ್ಳುವ ರೀತಿ ಎಲ್ಲವನ್ನೂ ಮಗುವಿಗೆ ಸಮಾನವಾಗಿ ಒದಗಿಸಬೇಕು.

ಉದಾ: ಕಾರ್ಯಕರ್ತರು ಧರ್ಮ, ಜಾತಿ, ಅಂಗವಿಕಲತೆ ಕುರಿತು ಪ್ರಶ್ನೆಗಳನ್ನು ಕೇಳಬೇಕಾಗಿ ಬರುತ್ತದೆ: ಆದರೆ, ಈ ಮಾಹಿತಿಯನ್ನು ಮಗುವಿನ ವಿರುದ್ಧ ತಾರತಮ್ಯ ತೋರಲು ಯಾವುದೇ ರೀತಿಯಲ್ಲಿ ಬಳಸಬಾರದು.

### ಖಾಸಗಿತನ ಮತ್ತು ಗೋಪ್ಯತೆಯ ತತ್ತ್ವ

ಪ್ರತಿಯೊಂದು ಮಗುವೂ, ಎಲ್ಲಾ ವಿಧಾನಗಳಿಂದ ಮತ್ತು ನ್ಯಾಯಾಂಗ ಪ್ರಕ್ರಿಯೆಯ ಉದ್ದಕ್ಕೂ ತನ್ನ ಖಾಸಗಿತನ ಮತ್ತು ಗೋಪ್ಯತೆಯನ್ನು ರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತದೆ.

ಉದಾ: ಮಗುವಿನ ಪ್ರಕರಣದ ವಿವರಗಳನ್ನು ಯಾವಾಗಲೂ, ಮುಖ್ಯವಾಗಿ, ಮಗುವಿನ ನೆರೆಹೊರೆಯವರನ್ನು ಮತ್ತು/ಅಥವಾ ಶಾಲಾ ಅಧಿಕಾರಿಗಳನ್ನು ಸಂದರ್ಶಿಸುವಾಗ ಗೋಪ್ಯವಾಗಿ ಇರಿಸಬೇಕು,

### ಕೊನೆಯ ಉಪಾಯವಾಗಿ ಸಾಂಸ್ಥೀಕರಣದ ತತ್ತ್ವ

ಸಮಂಜಸವಾದ ವಿಚಾರಣೆ ನಡೆಸಿದ ನಂತರವಷ್ಟೇ ಕೊನೆಯ ಕ್ರಮವಾಗಿ ಮಗುವನ್ನು ಸಾಂಸ್ಥಿಕ ಆರೈಕೆಯಲ್ಲಿ ಇರಿಸಬೇಕು.

ಉದಾ: ಎಲ್ಲಾ ಕ್ರಮಗಳು ವಿಫಲವಾದಾಗ ಕೊನೆಯ ಆಯ್ಕೆಯಾಗಿ ಸಾಂಸ್ಥೀಕರಣವನ್ನು ಪರಿಗಣಿಸಬಹುದು.

### ವಾಪಸಾತಿ ಮತ್ತು ಪುನರ್ವಸತಿಯ ತತ್ತ್ವ

ಜೆಜೆ ವ್ಯವಸ್ಥೆಯಲ್ಲಿನ ಪ್ರತಿಯೊಂದು ಮಗುವೂ, ಆದಷ್ಟು ಬೇಗ ತನ್ನ ಕುಟುಂಬವನ್ನು ಸೇರಿಕೊಳ್ಳುವ ಹಕ್ಕನ್ನು ಹೊಂದಿರಬೇಕು; ಮತ್ತು ಅಂಥ ವಾಪಸಾತಿ ಮತ್ತು ಪುನರ್ವಸತಿಯು ಮಗುವಿನ ಅತ್ಯುತ್ತಮ ಹಿತದಲ್ಲಿ ಇಲ್ಲದೇ ಇರುವ ಹೊರತಾಗಿ ಮಗುವನ್ನು ಈ ಕಾಯ್ದೆಯ ವ್ಯಾಪ್ತಿಯ ಒಳಗೆ ಬರುವ ಮುನ್ನ ತಾನಿದ್ದ ಸಾಮಾಜಿಕ-ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗೆ ಮರಳಿಸಬೇಕು.

### ಹೊಸ ಆರಂಭದ ತತ್ತ್ವ

ವಿಶೇಷ ಸನ್ನಿವೇಶಗಳನ್ನು ಹೊರತುಪಡಿಸಿ, ಜೆಜೆ ವ್ಯವಸ್ಥೆಯಡಿಯಲ್ಲಿರುವ ಯಾವುದೇ ಮಗುವಿನ ಎಲ್ಲಾ ಹಿಂದಿನ ದಾಖಲೆಗಳನ್ನು ಅಳಿಸಿಹಾಕಬೇಕು.

ಉದಾ: (ಮಗುವನ್ನು ಒಬ್ಬ ವಯಸ್ಕರ ಹಾಗೆ ವಿಚಾರಣೆಗೆ ಒಳಪಡಿಸಿದ ಸಂದರ್ಭವನ್ನು ಹೊರತುಪಡಿಸಿ) ಮಗುವಿನ ಪ್ರಕರಣಕ್ಕೆ ಸಂಬಂಧಿಸಿದ, ಎಸ್‌ಐಆರ್ ಒಳಗೊಂಡಹಾಗೆ, ಎಲ್ಲಾ ದಸ್ತಾವೇಜುಗಳನ್ನು ಏಳು ವರ್ಷಗಳ ನಂತರ ಜೆಜೆ ವ್ಯವಸ್ಥೆಯಿಂದ ಅಳಿಸಿಹಾಕಬೇಕು. ಎಂದರೆ, ಸಿಐಸಿಎಲ್ ಸರಕಾರಿ ಉದ್ಯೋಗ, ಪಾಸ್‌ಪೋರ್ಟ್ ಇತ್ಯಾದಿಗಾಗಿ ಅರ್ಜಿಯನ್ನು ಸಲ್ಲಿಸಿ ಹೊಸ ಬದುಕನ್ನು ಆರಂಭಿಸಬಹುದು.

### ಮಾರ್ಗಾಂತರದ ತತ್ತ್ವ

ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಜೊತೆಯಲ್ಲಿ ವ್ಯವಹರಿಸುವಾಗ ಮಗುವಿನ ಮತ್ತು ಒಟ್ಟಾರೆ ಸಮಾಜದ ಹಿತದಲ್ಲಿ ಇರದೇ ಇರುವ ಹೊರತಾಗಿ ನ್ಯಾಯಾಂಗ ಪ್ರಕ್ರಿಯೆಗಳನ್ನು ಅನುಸರಿಸದೆ ವ್ಯವಹರಿಸುವ ಕ್ರಮಗಳನ್ನು ಉತ್ತೇಜಿಸಲಾಗುತ್ತದೆ.

ಉದಾ: ಮಗುವನ್ನು ಹೇಗಾದರೂ ಮಾಡಿ ಜೆಜೆ ವ್ಯವಸ್ಥೆಯ ಹೊರಗೆ ಇರಿಸುವ ಪ್ರಯತ್ನವನ್ನು ಮಾಡಬೇಕು. ಮಗುವು ಜೆಜೆ ವ್ಯವಸ್ಥೆಯಲ್ಲಿ ಪ್ರವೇಶಿಸದೆ ಇರುವ ಹಾಗೆ ಎಸ್‌ಐಆರ್‌ನಲ್ಲಿ ಸಿಐಸಿಎಲ್‌ಗಾಗಿ ತೆಗೆದುಕೊಳ್ಳಬಹುದಾದ ಪುನಃಸ್ಥಾಪನೆಯ ಕ್ರಮಗಳನ್ನು ಶಿಫಾರಸ್ಸು ಮಾಡಬಹುದು.

### ನೈಸರ್ಗಿಕ ನ್ಯಾಯದ ತತ್ತ್ವ

ಈ ಕಾಯ್ದೆಯ ಅಡಿಯಲ್ಲಿ ನ್ಯಾಯಾಂಗ ಅಧಿಕಾರದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ವ್ಯಕ್ತಿಗಳು ಅಥವಾ ಸಂಸ್ಥೆಗಳು ನ್ಯಾಯಯುತ ವಿಚಾರಣೆಯ ಹಕ್ಕು, ಪಕ್ಷಪಾತದ ವಿರುದ್ಧದ ನಿಯಮ ಮತ್ತು ಪರಿಶೀಲನೆಯ ಹಕ್ಕನ್ನು ಒಳಗೊಂಡಂತೆ ನ್ಯಾಯಯುತತೆಯ ಮೂಲಭೂತ ಕಾರ್ಯವಿಧಾನದ ಮಾನದಂಡಗಳನ್ನು ಪಾಲಿಸಬೇಕು.

ಅಧ್ಯಾಯ 2

# ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು (ಸಿಐಸಿಎಲ್)

## ಸಿಐಸಿಲ್ ಎಂದರೆ ಯಾರು?

ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು(ಸಿಐಸಿಎಲ್) ಎಂದರೆ, ಒಂದು ಅಪರಾಧವನ್ನು ಮಾಡಿರುವ ಅಥವಾ ಹಾಗೆಂದು ಆಪಾದಿತವಾಗಿರುವ, ಅಂಥ ಅಪರಾಧವನ್ನು ಎಸೆಗಿದ್ದಾನೆ/ಳೆ ಎಂದು ಹೇಳಲಾಗುವ ದಿನಾಂಕದಂದು ಹದಿನೆಂಟು ವರ್ಷವನ್ನು ದಾಟದೇ ಇರುವ ವ್ಯಕ್ತಿ.

ಈಗ ಸಹಜವಾಗಿಯೇ ಹುಟ್ಟುವ ಒಂದು ಪ್ರಶ್ನೆ ಎಂದರೆ, 'ಒಬ್ಬ ಆಪಾದಿತ ವಯಸ್ಕ ವ್ಯಕ್ತಿಗಿಂತ, ಮಕ್ಕಳನ್ನು ಏಕೆ ಮತ್ತು ಹೇಗೆ ಭಿನ್ನವಾಗಿ ನಡೆಸಿಕೊಳ್ಳಬೇಕು?'

ಇಪ್ಪತ್ತು ವರ್ಷಗಳಾಗುವ ವರೆಗೆ ಮಕ್ಕಳ ಮೆದುಳು ಪೂರ್ಣವಾಗಿ ಬೆಳೆದಿರುವುದಿಲ್ಲ, ಮತ್ತು ಅವರಿಗೆ ತಮ್ಮ ಕ್ರಿಯೆಗಳ ಪರಿಣಾಮ ಏನಾಗಾಗುತ್ತದೆ ಎಂಬುದರ ಸಂಪೂರ್ಣ ಅರಿವು ಇರದೇ ಇರಬಹುದು, ಅಥವಾ ಕಾನೂನು ಪ್ರಕ್ರಿಯೆಯ ಸಂಕೀರ್ಣತೆ ಪೂರ್ತಿ ಅರ್ಥವಾಗದೇ ಇರಬಹುದು. ಅವರ ನಿರ್ಧಾರ ತೆಗೆದುಕೊಳ್ಳುವಿಕೆ, ಭಾವಾವೇಗದ ನಿಯಂತ್ರಣ ಮತ್ತು ಪರಿಣಾಮಗಳ ಅರಿವು ವಯಸ್ಕರ ಹಾಗೆ ಪ್ರಬುದ್ಧವಾಗಿರುವುದಿಲ್ಲ. ಮಕ್ಕಳು ಸಹವರ್ತಿಗಳ ಒತ್ತಡಕ್ಕೆ ಬೇಗ ಮತ್ತು ಸುಲಭವಾಗಿ ಒಳಗಾಗುತ್ತಾರೆ, ಮತ್ತು ತಮ್ಮ ಕ್ರಿಯೆಗಳ ಗಾಂಭೀರ್ಯವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳದೇ ಇರಬಹುದು. ಆದ್ದರಿಂದ ಅವರಿಗೆ ಕಠಿಣವಾದ ಶಿಕ್ಷೆಯನ್ನು ಕೊಡುವುದರ ಬದಲಿಗೆ ನಮ್ಮ ಲಕ್ಷ್ಯ ಇರುವುದು ಸುಧಾರಣೆಯಾಗಬಹುದಾದ ಮತ್ತು ಸಮಾಜದಲ್ಲಿ ಪುನಃ ಏಕೀಕೃತವಾಗಾಬಹುದಾದ ಅವರ ಸಾಮರ್ಥ್ಯದ ಕುರಿತು. ಆರಂಭಿಕ ಕಾರ್ಯಾಚರಣೆ ಮತ್ತು ಬೆಂಬಲವು ಮಕ್ಕಳನ್ನು ಉತ್ಪಾದಕ ಜೀವನವನ್ನು ನಡೆಸುವತ್ತ ಕೊಂಡೊಯ್ಯುತ್ತದೆ ಎಂಬ ನಂಬಿಕೆಯೊಂದಿಗೆ ಈ ವಿಧಾನವು ಮಹತ್ವವನ್ನು ಪಡೆಯುತ್ತದೆ.

**ಇಂಥ ಮಗು ಯಾರಿರಬಹುದು ಎಂದು ಅರ್ಥ ಮಾಡಿಕೊಳ್ಳುವುದು ಮುಖ್ಯ.**

ಒಬ್ಬ ಸಿಐಸಿಎಲ್ ಹೆಚ್ಚಿನ ಸಲ, ಬಡತನ, ಮಾದಕ ವಸ್ತು ಸೇವನೆ, ಬಾಲ ಕಾರ್ಮಿಕತೆ, ಕುಟುಂಬದೊಳಗಿನ ಹಿಂಸಾಚಾರ, ಲೈಂಗಿಕ ದೌರ್ಜನ್ಯ, ಪೋಷಕರಿಂದ ಉಪೇಕ್ಷೆ, ಗುರುತಿಸಲಾಗಿರದ/ಪತ್ತೆಯಾಗಿರದ ಮತ್ತು/ಅಥವಾ ಚಿಕಿತ್ಸೆಯಾಗಿರದ ದೈಹಿಕ, ಬೌದ್ಧಿಕ ಅಥವಾ ಮಾನಸಿಕ ಅಸಾಮರ್ಥ್ಯಗಳು– ಇವೇ ಮುಂತಾದ ಬಾಲ್ಯದ ಒಂದಕ್ಕಿಂತ ಹೆಚ್ಚು ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸಿರುವ ಮಗುವಾಗಿರುತ್ತದೆ.

ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು, ಮಂಜು(ಹೆಸರು ಬದಲಾಯಿಸಲಾಗಿದೆ) ಒಮ್ಮೆ ಹೇಳಿದ:

### ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು, ಮಂಜು(ಹೆಸರು ಬದಲಾಯಿಸಲಾಗಿದೆ) ಒಮ್ಮೆ ಹೇಳಿದ:

**"ಸಾರ್, ನಿನ್ನ ಸಮುದಾಯದಲ್ಲಿ ಎಲ್ಲರೂ ಕಳ್ಳರೇ ಎಂದು ಹೇಳಿ ಪೊಲೀಸರು ನನಗೆ ಹೊಡೆದರು. ತರಗತಿಯಲ್ಲಿ ನನ್ನ ಶಿಕ್ಷಕರು ನನ್ನನ್ನು ಕೊನೆಯ ಬೆಂಚಿನ ಮೇಲೆ ಕುಳಿತುಕೊಳ್ಳಲು ಹೇಳುತ್ತಿದ್ದರು. ನನಗೆ ಅವಮಾನವಾಗುತ್ತದೆ. ಅದಕ್ಕೆ, ನಾನು ಶಾಲೆಗೆ ಹೋಗುವುದನ್ನೇ ಬಿಟ್ಟುಬಿಟ್ಟೆ. ನಾನು ನನ್ನ ಈ ಜಾತಿಗೆ ಸೇರಿದ್ದಕ್ಕೆ ನನಗೆ ನಾಚಿಕೆಯಾಗುತ್ತದೆ. ನೀವು ಓದಿದ್ದೀರಿ, ಒಳ್ಳೆಯ ಕುಟುಂಬದಿಂದ ಬಂದಿದ್ದೀರಿ, ನನ್ನ ಸಮಸ್ಯೆ ನಿಮಗೆ ಅರ್ಥವಾಗುವುದಿಲ್ಲ, ಬಿಡಿ.**

**"ಸಾರ್, ನೀವು ನಮಗೆ ಹಲವು ವಿಚಾರಗಳನ್ನು ಕಲಿಸುವ ಪ್ರಯತ್ನ ಮಾಡುತ್ತೀರಿ, 'ಇದು ನಿನಗೆ ಒಳ್ಳೆಯದು, ಇದು ಒಳ್ಳೆಯದಲ್ಲ' ಎಂದೆಲ್ಲಾ ಹೇಳಿಕೊಡುತ್ತೀರಿ. ಆದರೆ, ನಾನು ಬದುಕಿದ ರೀತಿಯ ಜೀವನವನ್ನು ನೀವು ಬದುಕಿಲ್ಲ. ನಮಗೆ ನೀವು ಬಹಳ ಸಂಗತಿಗಳ ಕುರಿತು ಹೇಳಬಹುದು. ಆದರೆ, ನಾವು ಕಂಡ ಜೀವನದ ಬಗ್ಗೆ ನಿಮಗೆ ಗೊತ್ತಿರದೇ ಇರಬಹುದು. ನಿಮಗೆ ಅರ್ಥವಾಗದೇ ಇರುವ ರೀತಿಯ ಜೀವನವನ್ನು ನಾನು ಬದುಕಿದ್ದೇನೆ"**

ಭಾರತದಲ್ಲಿ, ಒಬ್ಬ ಸಿಐಸಿಎಲ್ ಮಗುವನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ, ಅದರೊಂದಿಗೆ ಹೇಗೆ ನಡೆದುಕೊಳ್ಳುತ್ತೇವೆ ಎಂಬುದರಲ್ಲಿ ಧರ್ಮ, ಜಾತಿ, ಬಡತನ, ಅನಕ್ಷರತೆ, ಲಿಂಗ, ಸಾಮಾಜಿಕ ಸ್ಥಾನಮಾನ, ನಿರುದ್ಯೋಗ ಇತ್ಯಾದಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ಕಾರ್ಯಕರ್ತರು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಆದ್ದರಿಂದ, ಎಸ್‌ಐಆರ್ ತಯಾರಿಸುವಾಗ ಕಾರ್ಯಕರ್ತರು ಈ ಸಂಕೀರ್ಣತೆಗಳು, ಅಸ್ಮಿತೆ ಅಥವಾ ಗುರುತುಗಳು ಮತ್ತು ಹಿನ್ನೆಲೆಗಳನ್ನು ಮನಸ್ಸಿನಲ್ಲಿರಿಸಿಕೊಳ್ಳಬೇಕು.

**ಮಗುವಿನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಮಗುವಿನ ಜಾಮೀನು, ಪ್ರೊಬೇಷನ್, ಕಸ್ಟಡಿ, ಆಪ್ತ ಸಮಾಲೋಚನೆ, ಚಿಕಿತ್ಸೆ, ಜೀವನದ ಸನ್ನಿವೇಶಗಳು ಇತ್ಯಾದಿಗಳ ಕುರಿತು ಪ್ರಮುಖ ನಿರ್ಧಾರಗಳನ್ನು ತಾಳಲು ಜೆಜೆಬಿಗೆ ನೆರವಾಗುವಲ್ಲಿ ಎಸ್‌ಐಅರ್‌ನಲ್ಲಿರುವ ಮಾಹಿತಿಯು ನಿರ್ಣಾಯಕವಾಗಿರುತ್ತದೆ.**

## ರವಿ ಕಥೆ...

ಹದಿನಾರು ವರ್ಷದ ರವಿ, ಜೆಜೆಬಿ ಎದುರು ಬಂದಾಗ ಆತನ ಮೇಲೆ (ಸಾಧಾರಣ ಮತ್ತು ಗಂಭೀರವಾದ) ಹಲವು ಪ್ರಕರಣಗಳು ಇದ್ದವು. ಮಲ-ಸಹೋದರನೊಬ್ಬನನ್ನು ಬಿಟ್ಟರೆ ರವಿಗೆ ಕುಟುಂಬ ಎನ್ನುವ ಹೆಸರಿನಲ್ಲಿ ಯಾರೂ ಇರಲಿಲ್ಲ; ಆತನ ಜೊತೆಯೂ ರವಿ ಈಗ ಮಾತಾಡುತ್ತಿರಲಿಲ್ಲ. ಯಾರೂ ಇಲ್ಲದ ಈ ರವಿಯನ್ನು ಬೈಕುಗಳನ್ನು ಕದಿಯುತ್ತಿದ್ದ ಒಂದು ಗ್ಯಾಂಗ್ ತಮ್ಮೊಂದಿಗೆ ಸೇರಿಸಿಕೊಂಡಿತು. ಒಮ್ಮೆ ಪೊಲೀಸರು ರವಿಯನ್ನು ಒಂದು ಪ್ರಕರಣದಲ್ಲಿ ಬಂಧಿಸಿದರು, ಆತ 6 ತಿಂಗಳಿಗೂ ಹೆಚ್ಚು ಕಾಲ ಒಎಚ್‌ನಲ್ಲಿ ಇದ್ದ. ಜೆಜೆಬಿ ಆತನಿಗೆ ಬೇಲನ್ನು ಕೊಟ್ಟರೂ ಆತನನ್ನು ಒಎಚ್‌ನಿಂದ ಬಿಡಿಸಿ ಕರೆದುಕೊಂಡು ಹೋಗಲು ತಂದೆತಾಯಿಯಾಗಲಿ, ಪೋಷಕರಾಗಲಿ ಆತನಿಗೆ ಇರಲಿಲ್ಲ. ಈಗೊಂದು ಪ್ರಶ್ನೆ...



## ರವಿ ಯಾರು, ಒಬ್ಬ ಸಿಐಸಿಎಲ್ ಅಥವಾ ಒಬ್ಬ ಸಿಐಎನ್‌ಸಿಪಿ ಅಥವಾ ಎರಡೂ ಹೌದೇ?

ಜೆಜೆ ವ್ಯವಸ್ಥೆಯಲ್ಲಿ ಪ್ರವೇಶಿಸುವ ಹೆಚ್ಚಿನ ಮಕ್ಕಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅತ್ಯಂತ ಬಡ ಮತ್ತು ಉಪೇಕ್ಷಿತ ಸಮುದಾಯದಿಂದ ಬರುತ್ತಾರೆ – ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವು ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಗುವೂ ಆಗಿರುತ್ತದೆ ಎಂಬುದನ್ನು ಕಾರ್ಯಕರ್ತರು ಮನಗಾಣುವುದು ಬಹಳ ಮುಖ್ಯ!

ಅಧ್ಯಾಯ 3

# ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿನ ಕುರಿತು ಸಾಮಾಜಿಕ ತನಿಖಾ ವರದಿ

## ಸಿಐಸಿಎಲ್ ಕುರಿತು ಎಸ್ಐಆರ್

ಪರಿಣಾಮಕಾರಿಯಾಗಿ ತಯಾರಿಸಲಾದ ಎಸ್ಐಆರ್ ಮಗುವಿನ ಪರಿಸ್ಥಿತಿಗಳು, ಸಾಮಾಜಿಕ–ಆರ್ಥಿಕ ಸನ್ನಿವೇಶ ಮತ್ತು ಕುಟುಂಬದ ಕುರಿತು, ಮತ್ತು ಇತರ ಸಂಬಂಧಿತ ಮಾಹಿತಿಗಳು ಮತ್ತು ಸಂಬಂಧಪಟ್ಟ ಶಿಫಾರಸ್ಸುಗಳು–ಹೀಗೆ ಸಮಗ್ರವಾದ ಮಾಹಿತಿಯನ್ನು ವ್ಯವಸ್ಥಿತವಾಗಿ ಒದಗಿಸುತ್ತದೆ. ಇದು, ಸಂಭಾವ್ಯ ಅಪಾಯದ ಮೌಲ್ಯಮಾಪನವನ್ನು ಒದಗಿಸಬೇಕು, ಇದರಲ್ಲಿ ದುರ್ಬಲತೆಗಳನ್ನು ಉಂಟುಮಾಡುವ ಸಂದರ್ಭಗಳನ್ನು ಎತ್ತಿ ತೋರಿಸುವ, ಉಲ್ಬಣಗೊಳಿಸುವ ಮತ್ತು ತಗ್ಗಿಸುವ ಅಂಶಗಳು ಸೇರಿರುತ್ತವೆ. ಉದಾಹರಣೆಗೆ, ಕಳ್ಳಸಾಗಣೆದಾರರು ಅಥವಾ ದುರುಪಯೋಗ ಮಾಡುವವರು ನೆರೆಹೊರೆಯಲ್ಲಿರುವುದು, ವಯಸ್ಕ ಗ್ಯಾಂಗುಗಳು, ಮಾದಕ ವಸ್ತು ಸೇವಿಸುವವರು, ಶಸ್ತ್ರಾಸ್ತ್ರಗಳು ಮತ್ತು ಮಾದಕ ದ್ರವ್ಯಗಳ ಲಭ್ಯತೆಯ ಸಾಧ್ಯತೆ ಮತ್ತು ವಯಸ್ಸಿಗೆ ಅನುಚಿತವಾದ ನಡವಳಿಕೆಗಳು, ಮಾಹಿತಿ ಮತ್ತು ವಸ್ತುಗಳಿಗೆ ಒಡ್ಡಿಕೊಳ್ಳುವುದು (ಜೆಜೆ ಮಾದರಿ ನಿಯಮಗಳು, 2016ರ ನಿಯಮ 64(2)ರಲ್ಲಿ ವ್ಯಾಖ್ಯಾನಿಸಲಾಗಿದೆ) ಇಂಥ ವಿವರಗಳು ಒಳಗೊಂಡಿರಬೇಕು.

ಎಸ್ಐಆರ್‌ನ ಉದ್ದೇಶ, ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾಗುವ ಹಾಗೆ ಮಾಡಿದ **ಮಗುವಿನ/ಅದರ ಕುಟುಂಬದ ಸನ್ನಿವೇಶಗಳು ಗುರುತಿಸಿ, ವಿಶ್ಲೇಷಿಸಿ ಅದನ್ನು ಜೆಜೆಬಿಗೆ ತಿಳಿಸುವುದೇ ವಿನಾ ಆಪಾದಿತ ಅಪರಾಧದ ವಿವರಗಳನ್ನು ತಿಳಿಸುವುದಲ್ಲ ಎಂಬುದನ್ನು ಇಲ್ಲಿ ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಇಲ್ಲಿ ಅನುಸರಿಸಬೇಕಾದದ್ದು ಜೆಜೆ ನಿಯಮ, 2016ರಲ್ಲಿ ಬರುವ ನಮೂನೆ 6ನ್ನು.**



- ಜೆಜೆ ಕಾಯ್ದೆಯು, ಸಿಐಸಿಎಲ್‌ನ್ನು ಜೆಜೆಬಿ ಎದುರು ಹಾಜರುಪಡಿಸಿದ 15 ದಿನಗಳ ಒಳಗೆ ಸಾಮಾಜಿಕ ತನಿಖೆಯನ್ನು ನಡೆಸಬೇಕು ಎನ್ನುವುದನ್ನು ಕಡ್ಡಾಯಗೊಳಿಸುತ್ತದೆ (ಜೆಜೆ ಕಾಯ್ದೆ, 2915ರ ಸೆಕ್ಷನ್ 8).
- ಜೆಜೆ ನಿಯಮ, 2016ರ ನಿಯಮ 64ರ ಪ್ರಕಾರ, ಸಾಮಾಜಿಕ ತನಿಖೆಯನ್ನು ನಡೆಸಲು ಪ್ರೊಬೇಷನ್ ಅಧಿಕಾರಿಯು **ಜೆಜೆಬಿಯಿಂದ ಆದೇಶಕ್ಕಾಗಿ ಕಾಯಬೇಕಾಗಿಲ್ಲ.**

## ಎಸ್ಐಆರ್ ಯಾರು ಮಾಡಬಹುದು?

ಸಿಐಸಿಎಲ್‌ಗಾಗಿ ಎಸ್ಐಆರ್‌ನ್ನು ಯಾರು ನಡೆಸಬಹುದು ಎಂಬುದನ್ನು ಜೆಜೆ ನಿಯಮ 2016ರ ಸೆಕ್ಷನ್ (8)ರಲ್ಲಿ ಸ್ಪಷ್ಟವಾಗಿ ಹೇಳಿದೆ. ಎಸ್ಐಆರ್‌ನ್ನು ನಡೆಸಲು ನಿಯೋಜಿಸಲಾದ ಮುಖ್ಯ ಅಧಿಕಾರಿ ಎಂದರೆ, ಪ್ರೊಬೇಷನ್ ಅಧಿಕಾರಿ. ಆದರೂ, ಎನ್‌ಜಿಒಗಳಿಂದ ನಿಯೋಜಿಸಲಾದ ಮಕ್ಕಳ ಕಲ್ಯಾಣ ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು ಮತ್ತು ಆಪ್ತ ಸಮಾಲೋಚಕರಿಗೂ ಸಿಐಸಿಎಲ್‌ಗಳ ಎಸ್ಐಆರ್‌ಗಳನ್ನು ನಡೆಸಲು ಅಧಿಕೃತವಾಗಿ ನಿಯೋಜಿಸಬಹುದಾಗಿದೆ.

ಜೆಜೆ ಕಾಯ್ದೆಯ ಸೆಕ್ಷನ್ 2 (48)ರಲ್ಲಿ, ಪ್ರೊಬೇಷನ್ ಅಧಿಕಾರಿ ಎಂದರೆ, ಪ್ರೊಬೇಷನ್ ಆಫ್ ಅಫೆಂಡರ್ಸ್ ಆ್ಯಕ್ಟ್, 1958 (1958ರ 20) ಅಡಿಯಲ್ಲಿ ರಾಜ್ಯ ಸರಕಾರದಿಂದ ನೇಮಿಸಲ್ಪಟ್ಟ ಅಧಿಕಾರಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸ್ಟ್ರಿಕ್ಟ್ ಚೈಲ್ಡ್ ಪ್ರೊಟೆಕ್ಷನ್ ಯುನಿಟ್) (ಡಿಸಿಪಿಯು) ಅಡಿಯಲ್ಲಿ ರಾಜ್ಯ ಸರಕಾರದಿಂದ ನೇಮಿಸಲ್ಪಟ್ಟ ಲೀಗಲ್–ಕಮ್–ಪ್ರೊಬೇಷನ್ ಆಫೀಸರ್(ಎಲ್‌ಪಿಒ) ಎಂದು ವ್ಯಾಖ್ಯಾನಿಸಲಾಗಿದೆ. ಒಬ್ಬ ಪ್ರೊಬೇಷನ್ ಅಧಿಕಾರಿ ಸಮಾಜ ಕಾರ್ಯ, ಕಾನೂನು ಅಥವಾ ಮನೋವಿಜ್ಞಾನದ ಹಿನ್ನೆಲೆ ಉಳ್ಳವರಾಗಿರಬೇಕು ಮತ್ತು ಉತ್ತಮ ಆಪ್ತ ಸಮಾಲೋಚನೆ ಮತ್ತು ಸಂವಹನದ ಕೌಶಲವನ್ನು ಹೊಂದಿದವರಾಗಿರಬೇಕು.

ಜೆಜೆ ಮಾದರಿ ನಿಯಮಗಳು, 2016ರ ನಿಯಮ 2 (xviii) ರಲ್ಲಿ ವ್ಯಾಖ್ಯಾನಿಸಿರುವಂತೆ, ಸಾಮಾಜಿಕ ಕಾರ್ಯಕರ್ತರು ಎಂದರೆ, ಸಮಾಜ ಕಾರ್ಯ, ಸಮಾಜ ವಿಜ್ಞಾನ, ಮನೋವಿಜ್ಞಾನ ಅಥವಾ ಮಕ್ಕಳ ಅಭಿವೃದ್ಧಿ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದವರಾಗಿರಬೇಕು. ಮಕ್ಕಳ ಶಿಕ್ಷಣ ಮತ್ತು ಅಭಿವೃದ್ಧಿ ಅಥವಾ ಮಕ್ಕಳ ರಕ್ಷಣೆಯ ವಿಷಯಗಳಲ್ಲಿ ಕನಿಷ್ಠ ಏಳು ವರ್ಷದ ಅನುಭವ ಇರುವ, ಮಕ್ಕಳ ರಕ್ಷಣೆ ಸಂಸ್ಥೆ(ಸಿಸಿಐ)ಯಿಂದ ನೇಮಿಸಲ್ಪಟ್ಟ ಅಥವಾ ಡಿಸಿಪಿಯು, ರಾಜ್ಯ ಮಕ್ಕಳ ರಕ್ಷಣ ಸಂಘ, ಸ್ಟೇಟ್ ರೀಸೋರ್ಸ್ ಏಜೆನ್ಸಿ ಅಥವಾ ಸೆಂಟ್ರಲ್ ಅಡಾಪ್ಷನ್ ರೀಸೋರ್ಸ್ ಅಥಾರಿಟಿ– ಇವುಗಳಿಂದ ಮಾನ್ಯತೆ ಪಡೆದ ಪದವೀಧರರೂ ಆಗಿರಬಹುದು.

ಸೆಕ್ಷನ್ 2(17)ರ ಅಡಿಯಲ್ಲಿ ವ್ಯಾಖ್ಯಾನಿಸಿರುವಂತೆ ಮಕ್ಕಳ ರಕ್ಷಣಾಧಿಕಾರಿ, ಜೆಜೆಬಿ ನೀಡಿದ ನಿರ್ದೇಶನಗಳನ್ನು ಪಾಲಿಸಲು ಸಿಸಿಐಗೆ ಲಗತ್ತಿಸಲಾದ ಅಧಿಕಾರಿಯಾಗಿದ್ದಾರೆ.

## ಬಾಲ ನ್ಯಾಯ ವ್ಯವಸ್ಥೆಯಲ್ಲಿ ಪ್ರೊಬೇಷನ್ ಅಧಿಕಾರಿಯ ಪಾತ್ರ

ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ಒಮ್ಮೆ ಜೆಜೆ ವ್ಯವಸ್ಥೆಯ ಅಡಿಯಲ್ಲಿ ಬಂದ ಕೂಡಲೇ ಅವರ ಬದುಕಿನಲ್ಲಿ ಪ್ರೊಬೇಷನ್ ಅಧಿಕಾರಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತಾರೆ.

ಮಗುವನ್ನು ವಶಕ್ಕೆ ಪಡೆದ ಕೂಡಲೇ, ಆ ಕುರಿತು ಪ್ರೊಬೇಷನ್ ಅಧಿಕಾರಿ ಮತ್ತು ಮಗುವಿನ ಕುಟುಂಬಕ್ಕೆ ತಿಳಿಸುವುದು ಪೊಲೀಸರ ಕಾನೂನಾತ್ಮಕ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ, ನಾವು ಇಲ್ಲಿ ನೋಡುವ ಹಾಗೆ, ಪಿಒ ಪಾತ್ರವು ಆರಂಭದಿಂದಲೇ ಆರಂಭವಾಗುತ್ತದೆ. ಮಗುವಿನ ಪುನಃಸ್ಥಾಪನೆ ಮತ್ತು ಬೆಳವಣಿಗೆ ಪಿಒ ಜವಾಬ್ದಾರಿಯಾಗಿರುತ್ತದೆ. ಮೊದಲನೆ ಸಲ ಹಾಜರುಪಡಿಸಿದಾಗ ಮಗುವನ್ನು, 'ಸೂಕ್ತ ವ್ಯಕ್ತಿ'ಯ ನಿಗಾವಣೆಯಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು. 'ಸೂಕ್ತ ವ್ಯಕ್ತಿ' ಎನ್ನುವ ವರ್ಗದಲ್ಲಿ [ಜೆಜೆ ಮಾದರಿ ನಿಯಮಗಳು, 2016ರ ಸೆಕ್ಷನ್ 13(1)(iii)] ಪಿಒ ಒಳಗೊಂಡಿರುತ್ತಾರೆ. ಮಗುವಿನ ಸಾಮಾಜಿಕ–ಆರ್ಥಿಕ ಹಿನ್ನೆಲೆ ಮತ್ತು, ಮಗು ಹಾಗೂ ಅದರ ಕುಟುಂಬದ ಸ್ಥಿತಿಗತಿಗಳ ಕುರಿತು ಜೆಜೆಬಿಗೆ ಮಾಹಿತಿಯನ್ನು ನೀಡಲು ಮಗುವಿನ ಎಸ್‌ಐಆರ್ ಮತ್ತು ವೈಯಕ್ತಿಕ ಆರೈಕೆ ಯೋಜನೆ(ಇಂಡಿವಿಜ್ಯುವಲ್ ಕೇರ್ ಪ್ಲ್ಯಾನ್) (ಐಸಿಪಿ)ಯನ್ನು ಪಿಒ ತಯಾರಿಸುತ್ತಾರೆ. ಆದಾಗ್ಯೂ, ತನ್ನ ಉದ್ದೇಶದಲ್ಲಿ ಐಸಿಪಿ ಎನ್ನುವುದು ಎಸ್‌ಐಆರ್‌ಗಿಂತ ಭಿನ್ನವಾದದ್ದು ಎನ್ನುವುದನ್ನು ಗಮನಿಸಬೇಕು (ಐಸಿಪಿಯ ಕುರಿತು ಹೆಚ್ಚು ತಿಳಿಯಲು ಕೆಳಗಿನ ಬಾಕ್ಸನ್ನು ನೋಡಿ).

ಪ್ರೊಬೇಷನ್ ಆಫೀಸರ್, ಮಗು, ಅದರ ಕುಟುಂಬ ಮತ್ತು ನೆರೆಹೊರೆಯವರ ಜೊತೆಯಲ್ಲಿ ವಿಸ್ತೃತವಾಗಿ ಮಾತುಕತೆ ನಡೆಸಿರುತ್ತಾರೆ, ಪರಿಸ್ಥಿತಿಯನ್ನು ಚೆನ್ನಾಗಿ ಮನನ ಮಾಡಿಕೊಂಡಿರುತ್ತಾರೆ, ಹೀಗಾಗಿ ಜಾಮೀನು ಅವಧಿಯಲ್ಲಿ ಅಥವಾ ಬಿಡುಗಡೆಯಾದಾಗ ಅಥವಾ ಜೆಜೆಬಿಯು ಆದೇಶವನ್ನು ಪಾಸು ಮಾಡಿದ ನಂತರ ಮಗು ತನ್ನ ಕುಟುಂಬದೊಂದಿಗೆ ಸೌಹಾರ್ದಯುತವಾಗಿ ಮತ್ತೆ ಒಂದಾಗುವಂತೆ ಮಾಡಲು ಪಿಒ ಅತ್ಯಂತ ಸೂಕ್ತರಾಗಿರುತ್ತಾರೆ. ಆದ್ದರಿಂದ, ಜೆಜೆ ವ್ಯವಸ್ಥೆಯಲ್ಲಿನ ಹಲವು ಬಾಧ್ಯಸ್ಥರಲ್ಲಿ, ಪಿಒ ಅತ್ಯಂತ ಸೂಕ್ತರು ಮತ್ತು ಸುಸಜ್ಜಿತರು, ಮತ್ತು ಮಗುವಿಗಾಗಿ ಸುಧಾರಣೆ, ಆರೈಕೆ ಮತ್ತು ಪುನರ್ವಸತಿಗಾಗಿ ಅತ್ಯಂತ ಹೆಚ್ಚು ಹೊಣೆಗಾರರು ಆಗಿರುತ್ತಾರೆ ಎಂದೇ ಪರಿಗಣಿಸಲಾಗುತ್ತದೆ.



### ಜೆಜೆ ನಿಯಮಗಳು, 2016, ನಿಯಮ 2(ix)

ವೈಯಕ್ತಿಕ ಆರೈಕೆ ಯೋಜನೆ (ಐಸಿಪಿ) ಒಂದು ಮಗುವಿನ ಸಮಗ್ರ ಅಭಿವೃದ್ಧಿಗಾಗಿ ರೂಪಿಸಲಾದ ಯೋಜನೆಯಾಗಿರುತ್ತದೆ. ಅದು ಕೆಳಗಿನ ಅಂಶಗಳನ್ನು ಆಧರಿಸಿ ಇರುತ್ತದೆ:

- ಮಗುವಿನ ವಯಸ್ಸು
- (ಹುಡುಗ/ಹುಡುಗಿ) ಲಿಂಗಕ್ಕನುಗುಣವಾದ ವಿಶಿಷ್ಟ ಅಗತ್ಯಗಳು
- ಮಗುವಿನ ಪ್ರಕರಣದ ಇತಿಹಾಸ.

  ಮಗುವಿನ ಆತ್ಮಗೌರವ, ಘನತೆ ಮತ್ತು ಸ್ವಮೌಲ್ಯವನ್ನು ಪುನಃಸ್ಥಾಪಿಸುವ ಮತ್ತು ಆ ಮಗುವನ್ನು ಒಬ್ಬ ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವ ಸಲುವಾಗಿ ಐಸಿಪಿಯನ್ನು ಮಗುವಿನೊಂದಿಗೆ ಸಮಾಲೋಚನೆ ನಡೆಸಿಯೇ ತಯಾರಿಸಲಾಗುತ್ತದೆ.

ಯೋಜನೆಯು ಮಗುವಿನ ಈ ಕೆಳಗಿನ ಅಗತ್ಯವನ್ನು ಪೂರೈಸುವಂತೆ ಇರುತ್ತದೆ:

(ಎ) ಏನಾದರೂ ವಿಶೇಷ ಅಗತ್ಯಗಳಿದ್ದರೆ ಅವುಗಳನ್ನೂ ಒಳಗೊಂಡ ಹಾಗೆ ಆರೋಗ್ಯ ಮತ್ತು ಮತ್ತು ಪೌಷ್ಟಿಕಾಂಶಗಳ ಅಗತ್ಯಗಳು;

(ಬಿ) ಭಾವನಾತ್ಮಕ ಮತ್ತು ಮಾನಸಿಕ ಅಗತ್ಯಗಳು;

(ಸಿ) ಶೈಕ್ಷಣಿಕ ಮತ್ತು ತರಬೇತಿ ಸಂಬಂಧಿ ಅಗತ್ಯಗಳು;

(ಡಿ) ವಿರಾಮ, ಸೃಜನಶೀಲತೆ ಮತ್ತು ಆಟ;

(ಇ) ಎಲ್ಲಾ ಬಗೆಯ ನಿಂದನೆ, ನಿರ್ಲಕ್ಷ್ಯ ಮತ್ತು ದೌರ್ಜನ್ಯದಿಂದ ರಕ್ಷಣೆ;

(ಎಫ್) ಪುನರ್ವಸತಿ ಮತ್ತು ಅನುಸರಣೆ;

(ಜಿ) ಸಾಮಾಜಿಕ ಮುಖ್ಯವಾಹಿನಿಗೆ ತರುವುದು; ಮತ್ತು

(ಎಚ್) ಜೀವನ ಕೌಶಲ ತರಬೇತಿ.

**ನೀವಿಲ್ಲಿ ನೋಡುತ್ತಿರುವ ಹಾಗೆ, ಐಸಿಪಿ ಮತ್ತು ಎಸ್‌ಐಆರ್ ಇವುಗಳನ್ನು ನಡೆಸುವ ಉದ್ದೇಶಗಳು ಬೇರೆ ಬೇರೆ, ಹೀಗಾಗಿ ಅವುಗಳಿಗಾಗಿ ಬಳಸಲಾಗುವ ನಮೂನೆಗಳೂ ಬೇರೆ ಬೇರೆ. ಐಸಿಪಿಗಾಗಿ ನಮೂನೆ 7ನ್ನು ಬಳಸಲಾಗುತ್ತದೆ; ಆದರೆ, ಸಿಐಸಿಎಲ್‌ಗಳ ಎಸ್‌ಐಆರ್‌ಗಾಗಿ ನಮೂನ್ 6ನ್ನು ಅನುಸರಿಸಲಾಗುತ್ತದೆ.**

## ಅಭ್ಯಾಸ : ಪೂರ್ವಗ್ರಹವನ್ನು ತೊರೆಯುವುದು

ಮಗುವಿನ ಕುರಿತು ಸಾಮಾಜಿಕ ತನಿಖೆಯನ್ನು ನಡೆಸುತ್ತಿರುವ ಪ್ರಕ್ರಿಯೆಯಲ್ಲಿ ನಮ್ಮದೇ ಆದ ಪೂರ್ವಗ್ರಹಗಳು ಅಥವಾ ಪಕ್ಷಪಾತೀಯ ಧೋರಣೆಗಳು ಮುನ್ನೆಲೆಗೆ ಬರಬಹುದು.

### ಪೂರ್ವಗ್ರಹ ಎಂದರೇನು?

ಒಂದು ವಿಚಾರ, ವಸ್ತು, ಗುಂಪು, ಕೆಲವೊಮ್ಮೆ ಒಬ್ಬ ವ್ಯಕ್ತಿ– ಹೀಗೆ ಯಾವುದೇ ಸಂಗತಿಗಳ ಕುರಿತು ಹೊಂದಿರಬಹುದಾದ ಪರವಾದ ಅಥವಾ ವಿರುದ್ಧವಾದ ನಮ್ಮದೇ ಸಹಜ ಒಲವು ಅಥವಾ ಧೋರಣೆಯನ್ನು ಪೂರ್ವಗ್ರಹ ಅಥವಾ ಪಕ್ಷಪಾತ ಎನ್ನುತ್ತೇವೆ. ಪಕ್ಷಪಾತವು ನಮ್ಮೆಲ್ಲರಲ್ಲಿಯೂ ಅಂತರ್ಗತವಾಗಿರುವ ಒಂದು ಸಹಜ ಪ್ರವೃತ್ತಿ. ಅದರ ಅಸ್ತಿತ್ವವು ನಮ್ಮ ಸಾಮಾಜಿಕ–ಆರ್ಥಿಕ ಸ್ಥಿತಿ, ಶೈಕ್ಷಣಿಕ ಹಿನ್ನೆಲೆ, ಲಿಂಗತ್ವದ ಗುರುತು ಮತ್ತು ಅಭಿವ್ಯಕ್ತಿ, ಧರ್ಮ ಇತ್ಯಾದಿಗಳನ್ನು ಅವಲಂಬಿಸಿರುತ್ತದೆ. ಈ ಪ್ರವೃತ್ತಿಯು ನಮ್ಮಲ್ಲಿ ಅಪ್ರಜ್ಞಾಪೂರ್ವಕವಾಗಿರಬಹುದು ಅಥವಾ ನಾವು ಅದನ್ನು ಪ್ರಜ್ಞಾಪೂರ್ವಕವಾಗಿಯೇ ಅಭಿವ್ಯಕ್ತಿಸಬಹುದು.



**ಉದಾಹರಣೆಗೆ: ನಾವು ನಮ್ಮ ಸಂದರ್ಶನವನ್ನು ಆರಂಭಿಸುವ ಮುಂಚೆಯೇ, ನಾವು, 'ಓಹ್! ಅಪ್ಪ ಈಗಾಗಲೇ ಜೈಲಿನಲ್ಲಿದ್ದಾನೆ. ಅಂದ ಮೇಲೆ ಈ ಮಗುವೂ ಆಪಾದಿತ ಅಪರಾಧವನ್ನು ಮಾಡಿರಲೇ ಬೇಕು. ಬೀಜದಂತೆ ಮರ, ತಂದೆಯಂತೆ ಮಗ ಎಂಬ ಗಾದೆಯೇ ಇದೆಯಲ್ಲವೇ!' ಎಂದು ಆಲೋಚಿಸಬಹುದು. ಅಥವಾ, 'ಈ ಮಗುವಿನ ದೇಹದ ಮೇಲೆ ಟ್ಯಾಟೂ ಇವೆ. ಎಂದಾಗ ಈ ಮಗುವಿನ ಸ್ವಭಾವವೇ ಸರಿಯಿಲ್ಲ,' ಎಂದೋ; 'ಮಗುವಿನ ತಂದೆತಾಯಿ ಬಡವರು, ಹೀಗಾಗಿ, ತಮ್ಮ ಮಕ್ಕಳನ್ನು ನೋಡಿಕೊಳ್ಳುವ ಸಾಮರ್ಥ್ಯ ಇವರಿಗಿಲ್ಲ.' ಎಂದೋ ಯೋಚಿಸಬಹುದು. ಇದನ್ನೇ ಪೂರ್ವಗ್ರಹ ಎನ್ನುತ್ತೇವೆ, ಎಂದರೆ ವಾಸ್ತವವನ್ನು ಹತ್ತಿರದಿಂದ ಪರಿಶೀಲಿಸುವ ಮುನ್ನವೇ ತೀರ್ಮಾನಕ್ಕೆ ಬರುವುದು. ಇದು ಮಗುವಿನೊಂದಿಗೆ ತಾರತಮ್ಯಕ್ಕೆ ಕಾರಣವಾಗಬಹುದು.**

ನಾವು ಎಸ್‌ಐಆರ್‌ಗಾಗಿ ಸಂದರ್ಶನವನ್ನು ಮಾಡುತ್ತಿರುವಾಗ ಇಂಥ ಪೂರ್ವಗ್ರಹಗಳು ನಮ್ಮ ಧೋರಣೆಯಲ್ಲಿ ಮತ್ತು ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡದಂತೆ, ನಮ್ಮನ್ನು ಪ್ರಭಾವಿಸದಂತೆ, ಮತ್ತು ಇದು ಮಗುವಿನ ಹಿತಾಸಕ್ತಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸಬೇಕು. ಆದ್ದರಿಂದ, ಯಾವುದೇ ಸಾಮಾಜಿಕ ತನಿಖೆಗೆ ಹೋಗುವ ಮುನ್ನ ಆಯಾ ಮಗು/ಕುಟುಂಬ/ಸಮುದಾಯದ ಕುರಿತು ನಮ್ಮ ಪೂರ್ವಗ್ರಹಗಳನ್ನು ಅಂತಾರಾವಲೋಕನದ ಮೂಲಕ ಒಮ್ಮೆ ಪರಿಶೀಲಿಸಿಕೊಳ್ಳುವುದು ಒಳ್ಳೆಯದು.

ನಮ್ಮಲ್ಲಿ ಯಾವುದೇ ವಿಚಾರದಲ್ಲಿ ಪಕ್ಷಪಾತ ಧೋರಣೆಗಳು ಇವೆಯೇ ಎಂಬುದನ್ನು ಗುರುತಿಸಿಕೊಳ್ಳಲು, ಮತ್ತು ಸಾಮಾಜಿಕ ತನಿಖೆಯನ್ನು ನಡೆಸುವಾಗ ಆ ಕುರಿತು ಎಚ್ಚರಿಕೆಯನ್ನು ವಹಿಸುವುದನ್ನು ಕಲಿಯಲು ಇಲ್ಲೊಂದು ಅಭ್ಯಾಸವಿದೆ. ಅಭ್ಯಾಸ ಮಾಡುವ ಮೂಲಕ ನಾವು ನಮ್ಮ ಇಂಥ ಪೂರ್ವಗ್ರಹಗಳು ನಮ್ಮ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪ್ರವೇಶಿಸದ ಹಾಗೆ ನಿಯಂತ್ರಿಸಬಹುದು ಮತ್ತು ಅವುಗಳನ್ನು ನಿವಾರಿಸಬಹುದು.

### ಪ್ರಕರಣ 1:

ರಾಜುವನ್ನು ಬಿಎನ್‌ಎಸ್‌ನ ಸೆಕ್ಷನ್ 303(2) (ಕಳ್ಳತನ) ಅಡಿಯಲ್ಲಿ ವಶಕ್ಕೆ ಪಡೆಯಲಾಗಿತ್ತು. 14 ವರ್ಷದ ಈ ಬಾಲಕ ಒಂದು ಪಟಾಕಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ. ತನ್ನ ತಂದೆ ಮಾಡಿದ ಒಂದು ಗಂಭೀರ ಅಪರಾಧದ ಪ್ರಯುಕ್ತ ಜೈಲು ಶಿಕ್ಷೆಯಾದ ನಂತರ ತಾನು ತನ್ನ ಕುಟುಂಬವನ್ನು ಆರ್ಥಿಕವಾಗಿ ನೆರವಾಗುತ್ತಿದ್ದೇನೆ ಎಂದು ಹೇಳುತ್ತಾನೆ ರಾಜು.

ಕೆಳಗೆ ಕೆಲವು ಆಯ್ಕೆಗಳನ್ನು ಕೊಡಲಾಗಿದೆ, ಒಬ್ಬ ಕಾರ್ಯಕರ್ತರಾಗಿ, ಸನ್ನಿವೇಶವನ್ನು ಹತ್ತಿರದಿಂದ ಮನನ ಮಾಡಿಕೊಳ್ಳುವ ಮುಂಚೆಯೇ, ನೀವು ಕೆಳಗಿನ ಒಂದು ಅಥವಾ ಎಲ್ಲ ರೀತಿಯಲ್ಲಿ ಪೂರ್ವಗ್ರಹಕ್ಕೆ ಒಳಗಾಗುತ್ತೀರಾ?

### ಊಹೆಗಳು:

- ಆತನ ತಂದೆಯೂ ಒಬ್ಬ ಕ್ರಿಮಿನಲ್ ಆದ್ದರಿಂದ ರಾಜುವೂ ಅಪರಾಧವನ್ನು ಮಾಡಿರಬೇಕು.
- ರಾಜುವನ್ನು ಒಂದು ಅಪಾಯಕಾರಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವಂತೆ ಮಾಡಿದ ಕುಟುಂಬದ ಕುರಿತು ಅಧಿಕಾರಿಗಳಿಗೆ ದೂರು ನೀಡುವುದು.
- ರಾಜು ತನ್ನ ಕುಟುಂಬಕ್ಕೆ ಹಣಕಾಸಿನ ದೃಷ್ಟಿಯಿಂದ ನೆರವಾಗುತ್ತಿರುವುದರಿಂದ ಆತ ಅಲ್ಲಿ ಕೆಲಸ ಮಾಡುವುದನ್ನು ಮುಂದುವರೆಸುವುದಕ್ಕೆ ಅವಕಾಶ ನೀಡುವುದು.

## ನಾವು ಪೂರ್ವಗ್ರಹ ಪೀಡಿತರೇ ಎಂಬುದನ್ನು ನೋಡೋಣ!

**ಇಲ್ಲಿ ಪೂರ್ವಗ್ರಹ ಇದೆಯೇ?**

- **ಪುಷ್ಟೀಕರಣ ಪೂರ್ವಗ್ರಹ:** ನಮ್ಮಲ್ಲಿ ಈಗಾಗಲೇ ಇರುವ ನಂಬಿಕೆಗಳನ್ನು ಪುಷ್ಟೀಕರಿಸುವುದು.

  "ಕುಟುಂಬದಲ್ಲಿಯೇ ಕ್ರಿಮಿನಲ್ ಇತಿಹಾಸ ಇರುವುದರಿಂದ ಹುಡುಗ ಅಪರಾಧ ಮಾಡಿರುತ್ತಾನೆ ಎನ್ನುವುದು ಸ್ಪಷ್ಟವಾಗಿಯೇ ಇದೆ."

- **ಸಾಮಾಜಿಕ ಪೂರ್ವಗ್ರಹ:** ಒಬ್ಬ ವ್ಯಕ್ತಿಯ ಸಾಮಾಜಿಕ–ಆರ್ಥಿಕ ಹಿನ್ನೆಲೆ ಮತ್ತು ರೂಢಿಗತತೆಯ ಆಧಾರದ ಮೇಲೆ ತೀರ್ಮಾನಿಸುವುದು.

  "ಹುಡುಗ ಒಂದು ಬಡ ಕುಟುಂಬದಿಂದ ಬಂದಿರುವವನಾದ್ದರಿಂದ ಆತ ಒಂದು ಫ್ಯಾಕ್ಟರಿಯಲ್ಲಿ ಕೆಲಸ ಮಾಡಿದರೆ ಅಭ್ಯಂತರವಿಲ್ಲ."

- **ಬದ್ಧ ಪೂರ್ವಗ್ರಹ:** ಮಾಹಿತಿಯ ಮೊದಲ ತುಣುಕಿನ ಮೇಲೆ ನಾವು ಅವಲಂಬಿಸಿದಾಗ ಇದು ಆಗುತ್ತದೆ.

  "ತಂದೆ ಒಬ್ಬ ಅಪರಾಧಿ, ಆದ್ದರಿಂದ ಮಗನೂ ಅಪರಾಧಿಯೆ."



### ಒಬ್ಬ ಕಾರ್ಯಕರ್ತರಾಗಿ, ನಾವು ಏನನ್ನು ಮನಸ್ಸಿನಲ್ಲಿರಿಸಿಕೊಳ್ಳಬೇಕು?

ರಾಜು ಕುಟುಂಬವನ್ನು ಬೆಂಬಲಿಸಲು ಫ್ಯಾಕ್ಟರಿಯಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯ ಏಕೆ ಉಂಟಾಯಿತು ಎಂಬುದನ್ನು ಅರ್ಥ ಮಾಡಿಕೊಳ್ಳಲು (ಮಧ್ಯದಲ್ಲಿ ಅಡ್ಡಿಪಡಿಸದೆ) ಹುಡುಗ ಮತ್ತು ಕುಟುಂಬದವರ ಮಾತನ್ನು ತದೇಕ ಲಕ್ಷ್ಯದಿಂದ ಜಾಗರೂಕತೆಯಿಂದ ಆಲಿಸಬೇಕು. ರಾಜುವಿಗೆ ಕೇವಲ 14 ವರ್ಷ ವಯಸ್ಸು, ತನ್ನ ತಂದೆಯ ಹಾಗೆ ತಾನೂ ಜೈಲು ಸೇರಬೇಕಾಗಬಹುದು ಎಂದು ಆತ ದಿಗಿಲು ಪಡಬಹುದು. ಕಾರ್ಯಕರ್ತರಾಗಿ ನಾವು ಹುಡುಗನನ್ನು ಸಮಾಧಾನ ಮಾಡುವುದು, ಆತನನ್ನು ಮಾತನಾಡಿಸಿ, ಆತನಿಗೆ ಇರಬಹುದಾದ ಈ ಆತಂಕದ ಕುರಿತೂ ಜೆಜೆಬಿಗೆ ತಿಳಿಸಬೇಕು.

ಕುಟುಂಬಕ್ಕೆ ಹಣಕಾಸಿನ ದೃಷ್ಟಿಯಿಂದ ಸಹಾಯಕವಾಗಲಿ ಎಂದು ಎಲ್ಲಾದರೂ ಒಂದು ಕಡೆ ಕೆಲಸಕ್ಕೆ ಸೇರುವುದು ಸಾಮಾನ್ಯವೆಂಬಂತೆ ತೋರಿದರೂ, ಕಾರ್ಯಕರ್ತರಾಗಿ ನಾವು, ಇದು, ಬಾಲ ಮತ್ತು ಹದಿಹರೆಯದ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಉಲ್ಲಂಘನೆಯಾಗುತ್ತದೆ ಎಂಬುದನ್ನು ಗುರುತಿಸಬೇಕು. ಇದನ್ನು ಗುರುತಿಸಿದ ನಂತರ, ಎಸ್‌ಐಆರ್ ಮೂಲಕ, ಈ ಬಾಲಕ ಒಬ್ಬ ಸಿಐಎನ್‌ಸಿಪಿಯಾಗಿಯೂ ಬೆಂಬಲಕ್ಕೆ ಅರ್ಹ ಎಂದು ಶಿಫಾರಸ್ಸು ಮಾಡಬೇಕು.

### ಎಸ್‌ಐಆರ್ ಮೂಲಕ ನಾವು ಜೆಜೆಬಿಗೆ ಏನನ್ನು ಹೇಳಬಹುದು?

ತಂದೆ ಸೆರೆಮನೆಯಲ್ಲಿರುವುದು ಹುಡುಗನ ಮನಸ್ಸಿನ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿರಬಹುದು (ಇದರಿಂದಾಗಿಯೂ ಆ ಹುಡುಗ ಕುಟುಂಬವನ್ನು ಬೆಂಬಲಿಸಲು ಅಪಾಯಕಾರಿಯಾಗಿದ್ದಾಗಲೂ ಅಂಥ ಉದ್ಯೋಗದಲ್ಲಿ ಸೇರಿಕೊಳ್ಳಬೇಕಾದ ಪರಿಸ್ಥಿತಿ ಬಂದಿತ್ತು), ಆದ್ದರಿಂದ, ಹುಡುಗನಿಗೆ ಆಪ್ತ ಸಮಾಲೋಚನೆ ಒದಗಿಸುವಂತೆ ಶಿಫಾರಸ್ಸು ಮಾಡಬಹುದು.

ಸಿಡಬ್ಲ್ಯುಸಿ ಜೊತೆ ಮಾತಾಡಿ, ಹುಡುಗನನ್ನು ಒಬ್ಬ ಸಿಐಎನ್‌ಸಿಪಿ ರೂಪದಲ್ಲಿ ಪುನರ್ವಸತಿ ಮಾಡುವಂತೆ ಜೆಜೆಬಿಗೆ ಶಿಫಾರಸ್ಸು ಮಾಡಿ.



**ಪ್ರಕರಣ 2:**

ಮಂಜು (17 ವರ್ಷ) ಮತ್ತು ಮೀನಾ (16 ವರ್ಷ) ಪರಸ್ಪರ ಪ್ರೀತಿಸಿದರು, ಮತ್ತು ಗ್ರಾಮವೊಂದರ ದೇವಸ್ಥಾನದಲ್ಲಿ, ಎರಡು ಕಡೆಯ ಕುಟುಂಬದವರ ಆಶೀರ್ವಾದದೊಂದಿಗೆ, ಅವರ ಬುಡಕಟ್ಟಿನ ಸಂಪ್ರದಾಯದ ಪ್ರಕಾರ ಮದುವೆಯನ್ನು ಮಾಡಿಕೊಂಡರು. ಮೀನಾ ಮುಟ್ಟಾಗುವುದು ತಪ್ಪಿದ್ದಕ್ಕಾಗಿ ಆಸ್ಪತ್ರೆಗೆ ಹೋಗಿ ಪರೀಕ್ಷೆ ಮಾಡಿಸಿಕೊಂಡಳು, ಅದರಲ್ಲಿ ಆಕೆ ಗರ್ಭಿಣಿಯಾಗಿರುವುದು ಗೊತ್ತಾಯಿತು. (ಪೋಕ್ಸೋ ಕಾಯ್ದೆಯ ಅಡಿಯಲ್ಲಿ ಕಡ್ಡಾಯವಾಗಿರುವಂತೆ) ಡಾಕ್ಟರರು ಈ ಸಂಗತಿಯನ್ನು ಎಸ್‌ಜೆಪಿಯುಗೆ ವರದಿ ಮಾಡಿದರು.

**ಕೆಳಗೆ ಕೆಲವು ಆಯ್ಕೆಗಳನ್ನು ಕೊಡಲಾಗಿದೆ, ಒಬ್ಬ ಕಾರ್ಯಕರ್ತರಾಗಿ ನೀವು ಕೆಳಗಿನ ಒಂದು ಅಥವಾ ಎಲ್ಲವನ್ನು ಊಹಿಸಿಕೊಳ್ಳಬಹುದೇ?**

## ಊಹೆಗಳು:

- ಹದಿನೇಳು ವರ್ಷ ವಯಸ್ಸಿನ ಮಕ್ಕಳು ಪ್ರೀತಿಯ ಪಾಶಕ್ಕೆ ಗುರಿಯಾಗಬಾರದು, ಮದುವೆಯನ್ನು ಮಾಡಿಕೊಳ್ಳಬಾರದು.
- ಬುಡಕಟ್ಟು ಸಮುದಾಯಗಳಲ್ಲಿನ ಸಂಪ್ರದಾಯವು ಹಿಂದುಳಿದ ಸಂಸ್ಕೃತಿಯಾಗಿದೆ, ಇದನ್ನು ಬದಲಾಯಿಸಬೇಕು.
- ಮಂಜು ಹೇಳಿಕೇಳಿ ಬುಡಕಟ್ಟು ಸಮುದಾಯದಿಂದ ಬಂದ ಹುಡುಗ, ಅವನು ಆ ಹುಡುಗಿಯ ಮೇಲೆ ಅತ್ಯಾಚಾರ ಎಸಗಿರಬೇಕು.
- ಶಿಕ್ಷಣದ ಕಡೆಗೆ ಲಕ್ಷ್ಯ ಕೊಡುವುದರಿಂದ ಅವರಲ್ಲಿ ಇಂಥ ಪ್ರಮಾದಗಳು ಜರಗುವುದಿಲ್ಲ. **ನಾವು ಇವರ ಕುರಿತು ಪೂರ್ವಗ್ರಹ ಪೀಡಿತರಾಗಿದ್ದೇವೆಯೇ ಎಂಬುದನ್ನು ನೋಡೋಣ!**

  **ಇಲ್ಲಿ ಪೂರ್ವಗ್ರಹ ಯಾವುದು?**

- **ಪುಷ್ಟೀಕರಣ ಪೂರ್ವಗ್ರಹ:** ನಮ್ಮಲ್ಲಿ ಈಗಾಗಲೇ ಇರುವ ನಂಬಿಕೆಗಳನ್ನು ನಾವು ಪುಷ್ಟೀಕರಿಸುವುದು.

  "ನನಗೆ ಖಂಡಿತ ಗೊತ್ತು, ಅದು ಹುಡುಗನ ತಪ್ಪೆ."

- **ತರುವಾಯದರಿವಿನ ಪೂರ್ವಗ್ರಹ:** ನಾವು ಘಟನೆಗಳನ್ನು ಮುಂದಾಗಿಯೇ ಊಹಿಸುವುದು ಮತ್ತು ಹೀಗೇ ಆಗುತ್ತದೆ ಎಂದು ನಿಮಗೆ ಮೊದಲೇ ಗೊತ್ತಿತ್ತು ಎಂದು ನಂಬುವುದು.

  "ನಿಮ್ಮ ಮಕ್ಕಳನ್ನು ಶಾಲೆಗೆ ಕಳಿಸದೇ ಇದ್ದರೆ, ನೋಡಿ, ಹೀಗೇ ಆಗೋದು."

- **ಸಾಮಾಜಿಕ ಪೂರ್ವಗ್ರಹ:** ರೂಢಿಗತತೆ ಮತ್ತು ಸಾಮಾಜಿಕ–ಆರ್ಥಿಕ ಹಿನ್ನೆಲೆಯನ್ನು ಆಧರಿಸಿ ತೀರ್ಮಾನವನ್ನು ಕೈಗೊಳ್ಳುವುದು.

  "ಈ ಸಮುದಾಯಕ್ಕೆ ಸೇರಿದ ಜನ ಇರೋದೇ ಹೀಗೆ."

  **ಒಬ್ಬ ಕಾರ್ಯಕರ್ತರಾಗಿ ನಾವು ಎಸ್‌ಐಆರ್‌ನಲ್ಲಿ ಏನನ್ನು ಹೇಳಬಹುದು?**

  ಇವರ ಸಂಬಂಧದಲ್ಲಿ ಇಬ್ಬರ ಸಹಮತಿಯೂ ಇತ್ತು ಎಂದು ಜೆಜೆಬಿಗೆ ತಿಳಿಸಬಹುದು. ಮಕ್ಕಳು ಮತ್ತು ಅವರ ಕುಟುಂಬಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಕುರಿತು (ಸಮುದಾಯವು 18 ವರ್ಷಕ್ಕಿಂತ ಮುಂಚಿನ ವಿವಾಹಗಳಿಗೆ ಮನ್ನಣೆ ನೀಡುತ್ತದೆ ಎಂಬುದನ್ನು) ಜೆಜೆಬಿಗೆ ಮಾಹಿತಿ ನೀಡಬೇಕು. ಮಂಜು ಮತ್ತು ಮೀನಾ ಇಬ್ಬರಿಗೂ ಲೈಂಗಿಕ ಆರೋಗ್ಯದ ಬಗ್ಗೆ ತಿಳಿವಳಿಕೆಯನ್ನು ನೀಡುವಂತೆ ಆಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡಬಹುದು. ಮೀನಾಗೆ ಒಬ್ಬ ಗರ್ಭಿಣಿಗೆ ಸಿಗುವ ರೀತಿಯ ಸೂಕ್ತವಾದ ವೈದ್ಯಕೀಯ ಆರೈಕೆ ಸಿಗುತ್ತಿರುವುದನ್ನು ಖಚಿತಪಡಿಕೊಳ್ಳಬೇಕು, ಪ್ರಕರಣವು ಅವರು ಡಾಕ್ಟರರ ಬಳಿ ಹೋಗದ ಹಾಗೆ ನಿರುತ್ತೇಜಿಸದಂತೆ ನೋಡಿಕೊಳ್ಳಬೇಕು.

ನಮ್ಮ ಪೂರ್ವಗ್ರಹಗಳ ಸತ್ಯವನ್ನು ಮರೆಮಾಚಬಹುದು, ಅನ್ಯಾಯವನ್ನು ಮುಂದುವರೆಸಬಹುದು. ಕಾರ್ಯಕರ್ತರಾಗಿ ನಾವು ಇಂಥ ಪೂರ್ವಗ್ರಹಗಳ ಕುರಿತು ಜಾಗರೂಕರಾಗಿರಬೇಕು, ಅದು ನಮ್ಮ ತೀರ್ಮಾನಗಳ ಮೇಲೆ ಪ್ರಭಾವ ಬೀರಿ, ನಾವು ಯಾರನ್ನು ರಕ್ಷಿಸಬೇಕಾಗಿದೆಯೋ ಅವರಿಗೆ ನಮ್ಮಿಂದಲೇ ಹಾನಿ ಆಗದ ಹಾಗೆ ಎಚ್ಚರಿಕೆ ವಹಿಸಬೇಕು. ನಮ್ಮ ಕರ್ತವ್ಯವನ್ನು ನಾವು ಮರೆಯದಿರೋಣ– ಮೇಲ್ಪದರದಲ್ಲಿ ಕಾಣುವುದಕ್ಕಿಂತ ಆಚೆ ನೋಡಬೇಕು, ಮಕ್ಕಳ ಪ್ರತಿಯೊಂದು ಹಕ್ಕುಗಳಿಗಾಗಿಯೂ ಪ್ರಖರವಾಗಿ ವಕಾಲತ್ತು ಮಾಡಬೇಕು; ನಮ್ಮ ತೀರ್ಮಾನ ಮತ್ತು ಕ್ರಿಯೆಗಳು ನಮ್ಮ ಪೂರ್ವಗ್ರಹದಿಂದ ಮಾರ್ಗದರ್ಶಿತವಾಗದಂತೆ, ಬದಲಿಗೆ ಅವು ಕರುಣೆ ಮತ್ತು ನ್ಯಾಯೋಚಿತತೆಯ ಬೆಳಕಿನಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.

ನೆನಪಿರಲಿ, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು (ಸಿಐಸಿಎಲ್) ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳೂ (ಸಿಎನ್‌ಸಿಪಿ) ಆಗಿರುತ್ತಾರೆ. ಈ ಪ್ರಕರಣಗಳ ಸಂಕೀರ್ಣತೆಯು ನಮ್ಮಿಂದ ಸಮಾನುಭೂತಿ ಮತ್ತು ನಮ್ಮದೇ ನಂಬಿಕೆಗಳು ಮತ್ತು ಊಹನೆಗಳನ್ನು ಪ್ರಶ್ನಿಸಲು ಸಿದ್ಧವಿರುವ ಮನಸ್ಸು ಇರಬೇಕಾಗುತ್ತದೆ. ನಮ್ಮ ವೃತ್ತಿಯನ್ನು ವ್ಯಾಖ್ಯಾನಿಸುವ ನ್ಯಾಯದ ಮತ್ತು ಸಮತೆಯ ತತ್ತ್ವಗಳನ್ನು ಎತ್ತಿಹಿಡಿಯುವುದು ನಮ್ಮ ಕರ್ತವ್ಯ. ಪ್ರತಿಯೊಂದು ಮಗುವೂ, ಅದು ಕಾನೂನಿನೊಂದಿಗೆ ಸಂಘರ್ಷದಲ್ಲಿರಲಿ, ಅಥವಾ ಆರೈಕೆ ಮತ್ತು ರಕ್ಷಣೆಯ ಅಗತ್ಯವನ್ನು ಹೊಂದಿರಲಿ, ಅವರ ಕ್ಷೇಮಕ್ಕಾಗಿ ನಮ್ಮ ಅಚಲವಾದ ಬದ್ಧತೆಗೆ ಅರ್ಹವಾಗಿರುತ್ತದೆ.

**ಒಂದು ಮಗುವಿನ ಮಾನಸಿಕ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗುವ ಒಂದು ಸಾಧನವೆಂದರೆ, ಬಾಲ್ಯದ ಪ್ರತಿಕೂಲ ಅನುಭವಗಳು, ಅಡ್ವರ್ಸ್ ಚೈಲ್ಡ್‌ಹುಡ್ ಎಕ್ಸ್‌ಪೀರಿಯನ್ಸಸ್, (ಎಸಿಇ).**

## ಬಾಲ್ಯದ ಪ್ರತಿಕೂಲ ಅನುಭವಗಳು(ಎಸಿಇ) ಎಂದರೇನು?

ಎಸಿಇಗಳೆಂದರೆ, (0–17 ವರ್ಷದ ನಡುವೆ) ಬಾಲ್ಯದಲ್ಲಿ ನಡೆದ, ದೈಹಿಕವಾಗಿ ಅಥವಾ ಮಾನಸಿಕವಾಗಿ ತೀವ್ರ ಆಘಾತವನ್ನುಂಟು ಮಾಡುವ ಸಾಮರ್ಥ್ಯವನ್ನು ಹೊಂದಿರುವ ಘಟನೆಗಳು. ಬಾಲ ನ್ಯಾಯ ವ್ಯವಸ್ಥೆಯೊಳಗಿನ ಪ್ರತಿಯೊಂದು ಮಗುವೂ ಇಂಥ ಎಸಿಇಗಳನ್ನು ಎದುರಿಸಿರುತ್ತಾರೆ ಎಂದು ಭಾವಿಸುವುದು ಸೂಕ್ತ. ಇಂಥ ಕಹಿ ಅನುಭವಗಳು ಆರೋಗ್ಯ, ಅವಕಾಶ ಮತ್ತು ಯೋಗಕ್ಷೇಮದ ಮೇಲೆ ದೀರ್ಘಕಾಲಿಕ ಪ್ರಭಾವಗಳನ್ನು ಹೊಂದಿರಬಹುದು.

**ಕೆಲವು ಉದಾಹರಣೆಗಳು ಎಂದರೆ:**

- ಹಿಂಸೆ, ದೂಷಣೆ, ನಿಂದನೆ ಅಥವಾ ನಿರ್ಲಕ್ಷ್ಯವನ್ನು ಅನುಭವಿಸುವುದು.
- ಮನೆಯಲ್ಲಿ ಅಥವಾ ಸಮುದಾಯದಲ್ಲಿ ನಡೆಯುವ ಹಿಂಸಾಚಾರವನ್ನು ಕಣ್ಣಾರೆ ನೋಡುವುದು.
- ಕುಟುಂಬದ ಸದಸ್ಯರೊಬ್ಬರು ಆತ್ಮಹತ್ಯೆಗೆ ಪ್ರಯತ್ನಿಸುವುದು ಅಥವಾ ಆತ್ಮಹತ್ಯೆ ಮಾಡಿಕೊಂಡು ಸತ್ತಿರುವುದು.
- ಆರ್ಥಿಕ ಮತ್ತು ಸಾಮಾಜಿಕ–ಸಾಂಸ್ಕೃತಿಕ ಉಪೇಕ್ಷೆಗೆ ಒಳಗಾಗುವುದು.

  ಇವುಗಳಲ್ಲಿ, ಅವರ ಸುರಕ್ಷಿತತೆ, ಸ್ಥಿರತೆ ಮತ್ತು ಬಂಧುತ್ವ ಇಂಥ ಸಂವೇದನೆಗಳನ್ನು ಕೀಳರಿಸಬಲ್ಲ ಮಗುವಿನ ಪರಿಸರದ ಅಂಶಗಳೂ ಒಳಗೊಳ್ಳುತ್ತವೆ. ಉದಾಹರಣೆಗೆ, ಕೆಳಗಿನ ರೀತಿಯ ಸನ್ನಿವೇಶಗಳಿರುವ ಕುಟುಂಬಗಳಲ್ಲಿ ಬೆಳೆಯುವುದು:

- ಮಾದಕ ದ್ರವ್ಯ ಸೇವನೆಯ ಸಮಸ್ಯೆಗಳು
- ಮಾನಸಿಕ ಆರೋಗ್ಯದ ಸಮಸ್ಯೆಗಳು
- ತಂದೆ ತಾಯಿಯರು ಪ್ರತ್ಯೇಕವಾಗಿರುವ ಕಾರಣದಿಂದಾಗಿ ಉಂಟಾಗಿರುವ ಅಸ್ಥಿರತೆ
- ಕುಟುಂಬದ ಯಾರಾದರೊಬ್ಬರು ಜೈಲು ಅಥವಾ ಕಾರಾಗೃಹದಲ್ಲಿರುವುದರಿಂದ ಉಂಟಾಗಿರುವ ಅಸ್ಥಿರತೆ

ಈ ಉದಾಹರಣೆಗಳು ಮಕ್ಕಳು ಎದುರಿಸುವ ಪ್ರತಿಕೂಲ ಸನ್ನಿವೇಶಗಳ ಪೂರ್ಣ ಪಟ್ಟಿಯೇನಲ್ಲ. ಇನ್ನೂ ಹಲವು ಆಘಾತಕಾರಿ ಅನುಭವಗಳು ಮಕ್ಕಳ ಆರೋಗ್ಯ ಮತ್ತು ಯೋಗಕ್ಷೇಮದ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರಬಲ್ಲವು. ಇದರಲ್ಲಿ ತಿನ್ನಲು ಸಾಕಷ್ಟು ಆಹಾರ ಸಿಗದೇ ಇರುವುದು, ವಾಸಕ್ಕೆ ಮನೆಯಿಲ್ಲದಿರುವುದು ಅಥವಾ ಇದ್ದರೂ ಅಸ್ಥಿರತೆ ಅಥವಾ ತೀವ್ರ ತಾರತಮ್ಯವನ್ನು ಅನುಭವಿಸುವುದು (ಆಕರ: ಯು.ಎಸ್.ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಶನ್).

ಜೆಜೆ ವ್ಯವಸ್ಥೆಯಲ್ಲಿ ಪ್ರವೇಶಿಸುವ ಮಕ್ಕಳಲ್ಲಿ ಹೆಚ್ಚಿನವರು ತಮ್ಮ ಬದುಕಿನಲ್ಲಿ ಒಂದು ಅಥವಾ ಹೆಚ್ಚು ಬಗೆಯ ಆಘಾತಕಾರಿ ಸನ್ನಿವೇಶಗಳನ್ನು ಅನುಭವಿಸಿದವರೇ ಆಗಿರುತ್ತಾರೆ. ಅವರು ಪೋಸ್ಟ್–ಟ್ರಾಮ್ಯಾಟಿಕ್ ಸ್ಟ್ರೆಸ್ ಡಿಸ್‌ಆರ್ಡರ್‌ಗಳನ್ನು (ಆಘಾತಕಾರಿ ಅನುಭವದ ನಂತರದ ಒತ್ತಡದಿಂದ ಉಂಟಾಗುವ ಅಸ್ವಸ್ಥತೆಗಳನ್ನು) ಬೆಳೆಸಿಕೊಳ್ಳಬಹುದು ಅಥವಾ ಅವರಲ್ಲಿ ಈ ಕೆಳಗಿನ ಲಕ್ಷಣಗಳು ಕಂಡುಬರಬಹುದು:


- ಆ ಆಘಾತಕಾರಿ ಘಟನೆಯನ್ನು ಮತ್ತೆ ಮತ್ತೆ ಆಲೋಚನೆ ಅಥವಾ ಆಟದಲ್ಲಿ ಮರುಜೀವಂತಗೊಳಿಸುವುದು
- ದುಃಸ್ವಪ್ನಗಳು ಮತ್ತು ನಿದ್ದೆ ಬಾರದ ಸಮಸ್ಯೆಗಳು
- ಯಾವುದಾದರೂ ಕಾರಣಕ್ಕೆ ಆ ಘಟನೆಯ ನೆನಪು ಬಂದಾಗ ತೀವ್ರವಾಗಿ ವ್ಯಾಕುಲಕ್ಕೆ ಒಳಗಾಗುವುದು
- ಸಕಾರಾತ್ಮಕ ಭಾವನೆಗಳ ಕೊರತೆ
- ತೀವ್ರವಾದ ನಿರಂತರ ಭಯ ಅಥವಾ ದುಃಖದ ಭಾವ
- ಕಿರಿಕಿರಿ ಮಾಡಿಕೊಳ್ಳುವುದು ಮತ್ತು ಕೋಪದ ಆಸ್ಫೋಟಗಳು ಇತ್ಯಾದಿ.

  ಆದ್ದರಿಂದ, ಕಾರ್ಯಕರ್ತರು ಈ ಪ್ರತಿಕೂಲತೆಗಳು ಉಂಟುಮಾಡಬಹುದಾದಂಥ ಪರಿಣಾಮಗಳು ಮತ್ತು ಅವುಗಳಿಂದಾಗಿ ಸಿಐಸಿಎಲ್‌ನ ಆಲೋಚನೆಗಳು, ಭಾವನೆಗಳು ಮತ್ತು ವರ್ತನೆಗಳ ಮೇಲೆ ಉಂಟಾಗಬಹುದಾದ ಆಘಾತದ ಕುರಿತು ತಿಳಿದಿರಬೇಕು.

## ಅಧ್ಯಾಯ 4

### ಸಾಮಾಜಿಕ ತನಿಖಾ ವರದಿಗಾಗಿ ಮಾಹಿತಿಯ ಆಕರಗಳು

**ನ್ಯಾಯಿಕ ಪ್ರಕ್ರಿಯೆಯ ಯಾವ ಹಂತದಲ್ಲಿ ಸಾಮಾಜಿಕ ತನಿಖಾ ವರದಿಯ ಮಹತ್ವವಿದೆ ಎಂಬುದನ್ನು ತಿಳಿದುಕೊಳ್ಳೋಣ.**




### ಎಸ್‌ಐಆರ್‌ಗಾಗಿ ಮಾಹಿತಿಯ ಆಕರಗಳು:

ಒಬ್ಬ ಕಾರ್ಯಕರ್ತರ ಮಟ್ಟಿಗೆ ಎಸ್‌ಐಆರ್‌ನ್ನು ತಯಾರಿಸುವ ಮುಂಚೆ ಸಾಮಾಜಿಕ ತನಿಖೆ ನಡೆಸುವುದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವುದು ಬಹಳ ಮುಖ್ಯ.

ಆದ್ದರಿಂದ, ಪ್ರಕರಣದ ಫೈಲನ್ನು ಓದಿ ಅಪಾದನೆಗಳ ಸ್ಥೂಲ ಪರಿಚಯವನ್ನು ಪಡೆಯುವುದು ಕಾರ್ಯಕರ್ತರಿಗೆ ಬಹಳ ಪ್ರಯೋಜನಕಾರಿಯಾಗುತ್ತದೆ. ಪ್ರೊಬೇಷನ್ ಆಫೀಸರ್, ಒಂದು ಎಸ್‌ಐಆರ್‌ನ್ನು ಸಿದ್ಧಪಡಿಸುವ ಮುಂಚೆ ಪ್ರಕರಣದ ಫೈಲನ್ನು ಚೆನ್ನಾಗಿ ಅಧ್ಯಯನ ಮಾಡುವರು, ಮತ್ತು ಮಗು ಮತ್ತು ಅದರ ಕುಟುಂಬದೊಂದಿಗೆ ಚರ್ಚಿಸಿ ತಿಳಿದುಕೊಳ್ಳುವರು. ಪ್ರಕರಣದ ಬಗ್ಗೆ ಹೆಚ್ಚು ತಿಳಿದುಕೊಂಡಷ್ಟೂ ಕಾರ್ಯಕರ್ತರಿಗೆ ಸರಿಯಾದ ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಇದರಿಂದ ಮಗುವಿನ ಬದುಕಿನ ಬಗ್ಗೆ ಸಮಗ್ರವಾದ, ಸ್ಪಷ್ಟವಾದ ಚಿತ್ರ ಪಡೆಯಲು ಪ್ರಯೋಜನಕಾರಿಯಾಗುತ್ತದೆ.

**ಎಸ್‌ಐಆರ್‌ನ್ನು ಒಂದು ಎನ್‌ಜಿಒನಿಂದ ಬಂದ ಸಾಮಾಜಿಕ ಕಾರ್ಯಕರ್ತರು ತಯಾರಿಸುವವರಾದರೆ, ಪಿಒ ಪ್ರಕರಣದ ಫೈಲನ್ನು ಓದುವರು, ಮತ್ತು ಅದನ್ನು ಆ ಸಾಮಾಜಿಕ ಕಾರ್ಯಕರ್ತರಿಗೆ ವಿವರಿಸುವರು. ಸಾಮಾಜಿಕ ಕಾರ್ಯಕರ್ತರು ಪ್ರಕರಣದ ಫೈಲುಗಳನ್ನು ಅಧ್ಯಯನ ಮಾಡುವಾಗ ಗೋಪ್ಯತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.**



### 1. ಮಗು

ಎಸ್‌ಐಆರ್‌ಗಾಗಿ ಅತ್ಯಂತ ಮುಖ್ಯವಾದ ಮಾಹಿತಿಯ ಮೂಲ ಎಂದರೆ ಸ್ವತಃ ಸಿಐಸಿಎಲ್. ಕುಟುಂಬವನ್ನು ಸಂದರ್ಶಿಸುವ ಮುಂಚೆ ಮತ್ತು ಆ ನಂತರ ಮಗುವಿನೊಂದಿಗೆ ಮಾತುಕತೆಯಾಡುವುದು, ಕಾರ್ಯಕರ್ತರಿಗೆ ತಾವು ಸಂಗ್ರಹಿಸಿರುವ ಮಾಹಿತಿಯ ದೃಢೀಕರಣಕ್ಕಾಗಿ ಮತ್ತು ಮಗುವಿನ ಹಿತದೃಷ್ಟಿಯಿಂದ ಗಣನೀಯ ಮತ್ತು ಉಪಯುಕ್ತ ಶಿಫಾರಸ್ಸುಗಳನ್ನು ಮಾಡುವುದಕ್ಕಾಗಿ ಸಹಾಯಕವಾಗಿದೆ.

**ಸಹಭಾಗಿತ್ವದ ತತ್ತ್ವದ ಅನ್ವಯವನ್ನು ಗಮನಿಸಿ**

ಅಧ್ಯಾಯ 1ರಲ್ಲಿ ಚರ್ಚಿಸಿದ ಹಾಗೆ, ಮಕ್ಕಳ ಹಕ್ಕುಗಳ ಬಹಳ ಮುಖ್ಯವಾದ ಒಂದು ತತ್ತ್ವವೆಂದರೆ, ಸಹಭಾಗಿತ್ವದ ತತ್ತ್ವ. ಈ ತತ್ತ್ವಕ್ಕೆ ಬದ್ಧರಾಗಿರುವುದು ಎಂದರೆ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲಿಯೂ ಮಗುವನ್ನು ಒಳಗೊಳಿಸಿಕೊಳ್ಳುವುದು ಎಂದರ್ಥ. ಕಾರ್ಯಕರ್ತರು ಪ್ರಕರಣದ ಕುರಿತಾದ ಮಾಹಿತಿಯನ್ನು ಮಗುವಿನೊಂದಿಗೆ ಹಂಚಿಕೊಳ್ಳಬಹುದು. ಎಸ್‌ಐಆರ್ ಒಂದು ನಿರ್ಣಾಯಕವಾದ ದಾಖಲೆಯಾದ್ದರಿಂದ, ಕಾರ್ಯಕರ್ತರು ಮಗುವಿನೊಂದಿಗೆ ಮಾತಾಡದೇ ಇದ್ದರೆ ನಾವು ನಮ್ಮ ಉದ್ದೇಶದಲ್ಲಿ ವಿಫಲರಾದಂತೆಯೇ ಸರಿ.

ಮಗುವನ್ನು ವೀಕ್ಷಣಾ ಗೃಹ(ಒಎಚ್)ದಲ್ಲಿ ಇರಿಸಿದಾಗ ಅಲ್ಲಿಯೇ ಇರುವ ಪಿಒಅವರಿಗೆ ಮಗುವನ್ನು ಮಾತಾಡಿಸುವುದು ಸುಲಭವಾಗುತ್ತದೆ, ಎನ್‌ಜಿಒ ಸದಸ್ಯರೂ ಜೆಜೆಬಿಗೆ ಎಸ್‌ಐಆರ್‌ನ್ನು ಸಲ್ಲಿಸುವ ಮುನ್ನ ಮಗುವನ್ನು ಭೇಟಿಯಾಗಿ, ಮಾತಾಡಿ ಅದರೊಂದಿಗೆ ವಿಶ್ವಾಸವನ್ನು ಗಳಿಸಿಕೊಳ್ಳುವುದು ಬಹಳ ಮುಖ್ಯ.

**ಮಗುವಿನೊಂದಿಗೆ ಮಾತುಕತೆಯಾಡುವುದು ಎಸ್‌ಐಆರ್‌ನ ಗುಣಮಟ್ಟವನ್ನು ಮತ್ತು ಪರಿಣಾಮಕಾರಿತ್ವವನ್ನು ಹಲವು ಪಟ್ಟು ಹೆಚ್ಚಿಸಲು ಸಹಾಯಕವಾಗುತ್ತದೆ. ಹೇಳಿಕೇಳಿ, ಎಸ್‌ಐಆರ್ ನಿರೂಪಿಸಬೇಕಾಗಿರುವುದು ಮಗುವಿನ ಜೀವನದ ಬಗ್ಗೆ, ಮಗುವಿನದೇ ಧ್ವನಿಯಲ್ಲಿ, ಅಲ್ಲವೇ?**



## 2. ಕುಟುಂಬ

ಎಸ್‌ಐಆರ್‌ನ ಗುರಿ ಇರುವುದೇ ಸಿಐಸಿಎಲ್‌ನ ಸಾಮಾಜಿಕ–ಆರ್ಥಿಕ ಮತ್ತು ಮಾನಸಿಕ ಮುಖಗಳ ವಾಸ್ತವ ಅವಲೋಕನಗಳನ್ನು ದಾಖಲಿಸುವುದು. ಪ್ರತಿಯೊಂದು ಮಗುವೂ ತನ್ನ ಕುಟುಂಬ, ನೆರೆಹೊರೆ ಮತ್ತು ಸನ್ನಿವೇಶಗಳಿಂದ ಹೊಂದಿದ ಹಲವು ಅನುಭವಗಳ ಫಲಿತಾಂಶವಾಗಿರುತ್ತದೆ. ಅವರ ಆಲೋಚನೆ, ಕ್ರಿಯೆ ಮತ್ತು ಪ್ರತಿಕ್ರಿಯೆಗಳೂ ಪ್ರಾಥಮಿಕವಾಗಿ ಕೌಟುಂಬಿಕ ಪರಿಸರ ಮತ್ತು ಹಿನ್ನೆಲೆಯಿಂದ ಪ್ರೇರಿತವೂ ಪ್ರಭಾವಿತವೂ ಆಗಿರುತ್ತವೆ. ಕುಟುಂಬವನ್ನು ಸಂದರ್ಶನ ಮಾಡುವುದು

**ಕುಟುಂಬದ ಜವಾಬ್ದಾರಿ ತತ್ತ್ವದ ಅನ್ವಯವನ್ನು ಇಲ್ಲಿ ಗಮನಿಸಿ**

**ಸಾಮಾಜಿಕ ತನಿಖಾ ವರದಿಯನ್ನು ತಯಾರಿಸುವ ಪ್ರಕ್ರಿಯೆಯ ಸಿಐಸಿಎಲ್ ಒಂದು ಅವಿಭಾಜ್ಯ ಅಂಗ.**

ನಮೂನೆಯಲ್ಲಿರುವ ಹೆಚ್ಚಿನ ಪ್ರಶ್ನೆಗಳು ಮಗುವಿನ ಕುಟುಂಬದ ಸುತ್ತಮುತ್ತ ಇರುತ್ತವೆ, ಎಂದರೆ ಕುಟುಂಬದಲ್ಲಿ ಯಾರು ಯಾರು ಇದ್ದಾರೆ, ಕುಟುಂಬದಲ್ಲಿನ ಘಟನೆಗಳ ಇತಿಹಾಸವೇನು ಇತ್ಯಾದಿ.

ಮಗುವಿನ ಕುಟುಂಬದಲ್ಲಿ ತಾಯಿ, ತಂದೆ, ಸೋದರ ಸೋದರಿಯವರು, ಅಜ್ಜಅಜ್ಜಿಯವರು, ಸಿಐಸಿಎಲ್ ಜೊತೆಗೆ ಅಥವಾ ಸಾಕಷ್ಟು ಹತ್ತಿರದಲ್ಲಿ ವಾಸಿಸುವ ಬಂಧುಗಳು ಅಥವಾ ಇನ್ಯಾರಾದರೂ ಮಗುವನ್ನು ನೋಡಿಕೊಳ್ಳುವವರು, ಮಗುವಿನ ಕುಟುಂಬಕ್ಕೆ ಸೇರಿದವರಾಗುತ್ತಾರೆ.

ಈ ಕ್ರಿಯೆಯಲ್ಲಿ ಕಾರ್ಯಕರ್ತರು ಎದುರಿಸುವ ಸಾಮಾನ್ಯ ಸಮಸ್ಯೆ ಎಂದರೆ ಸಿಐಸಿಎಲ್ ಕುಟುಂಬವನ್ನು ಗುರುತಿಸುವುದು, ಮತ್ತು ಅದನ್ನು ಸಂಪರ್ಕಿಸುವುದು, ಅಥವಾ ಸಿಐಸಿಎಲ್ ವಿಳಾಸವನ್ನು ಕಂಡುಕೊಳ್ಳುವುದಾಗಿರುತ್ತದೆ. ಇಂಥ ಸನ್ನಿವೇಶಗಳಲ್ಲಿ ನೆರೆಹೊರೆಯವರು, ಸ್ನೇಹಿತರು, ಉದ್ಯೋಗದಾತರು, ಸಹೋದ್ಯೋಗಿಗಳು, ಪ್ರೇಮಿಗಳು ಮುಂತಾದವರು, ಸಿಐಸಿಎಲ್ ಬಗ್ಗೆ ಮಾಹಿತಿಯನ್ನು ನೀಡಬಹುದಾದ ಉತ್ತಮ ಆಕರವಾಗುತ್ತಾರೆ, ಇಂಥವರಿಂದ ಆದಷ್ಟು ಮಾಹಿತಿಯನ್ನು ಶೋಧಿಸಿ ತೆಗೆಯಬೇಕು. ಇದಲ್ಲದೇ, ಮಗುವಿನ ಕುಟುಂಬದ ವಿಳಾಸವನ್ನು ತಿಳಿದುಕೊಂಡು, ಅದರ ಮನೆ ಮತ್ತು ಕುಟುಂಬದ ಸದಸ್ಯರನ್ನು ಗುರುತಿಸುವಲ್ಲಿ ಸ್ಥಳೀಯ ಪೊಲೀಸರು ಮತ್ತು/ಅಥವಾ ಆ ಪ್ರದೇಶದಲ್ಲಿ ಕಾರ್ಯನಿರತ ಎನ್‌ಜಿಒಗಳ ಬೆಂಬಲ ಮತ್ತು ಸಹಾಯವನ್ನು ತೆಗೆದುಕೊಳ್ಳಬಹುದು.

ಸಾಮಾಜಿಕ ತನಿಖೆಯನ್ನು ನಡೆಸುವ ವೇಳೆಯಲ್ಲಿ ಮಗುವಿನ ನೆರೆಹೊರೆಯವರೊಂದಿಗೆ ಸಂದರ್ಶನ ನಡೆಸುವುದು ಪ್ರಯೋಜನಕಾರಿಯಾಗಬಹುದು. ಅದರೂ, ನೆರೆಹೊರೆಯವನ್ನು ಸಂದರ್ಶಿಸುವ ಮುಂಚೆ, ಆ ಪ್ರದೇಶ ಅಥವಾ ಬಡಾವಣೆಯಲ್ಲಿ ಜಾತಿ ಮತ್ತು ಧರ್ಮದ ವಿಚಾರಗಳು ಹೇಗೆ ಕೆಲಸ ಮಾಡುತ್ತಿವೆ, ಕುಟುಂಬದ ಕುರಿತು ನೆರೆಹೊರೆಯವರ ಅಭಿಪ್ರಾಯ ಹೇಗಿದೆ, ಮನೆಮಾಲೀಕರು, ನೆರೆಹೊರೆಯವರು, ಸಮುದಾಯದವರು, ಮುಖಂಡರು ಇತ್ಯಾದಿ ಯಾರಾದರೂ ಆ ಕುಟುಂಬವನ್ನು ಸಾಮಾಜಿಕವಾಗಿ ದೂರಗೈದಿದ್ದಾರೆಯೇ ಮುಂತಾದ ಅಂಶಗಳನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳಬೇಕು.



### 3. ಶಾಲೆ ಮತ್ತು ಕೆಲಸ ಮಾಡುತ್ತಿರುವ ಜಾಗ

ಮಗುವಿನ ವರ್ತನೆಯ ಕುರಿತು, ಇತರ ಮಕ್ಕಳೊಂದಿಗೆ ಅವರ ಸ್ನೇಹದ ಕುರಿತು, ಅವರು ಎದುರಿಸಿರಬಹುದಾದ ವಿಶಿಷ್ಟ ಸಮಸ್ಯೆ, ಅವರ ಕುರಿತು ಶಿಕ್ಷಕರು/ಸ್ನೇಹಿತರ ಧೋರಣೆ, ಶಾಲೆಯನ್ನು ಬಿಟ್ಟಿದ್ದರೆ, ಹಾಗೆ ಬಿಡಲು ಕಾರಣ– ಇವುಗಳ ಕುರಿತು ಸಿಐಸಿಎಲ್ ಹಾಲಿ ಓದುತ್ತಿರುವ ಅಥವಾ ಈ ಹಿಂದೆ ಓದಿದ್ದ ಶಾಲೆ ಅತ್ಯುಪಯುಕ್ತ ಒಳನೋಟವನ್ನು ನೀಡಬಲ್ಲದು.

ಮಗುವಿನ ಸಹಪಾಠಿಗಳು, ಶಿಕ್ಷಕರು, ಮುಖ್ಯಶಿಕ್ಷಕರು, ಇತರ ಶಾಲೆಯ, ಕ್ಯಾಂಟೀನಿನ ಸಿಬ್ಬಂದಿ, ಶಾಲೆ ಬಳಿ ಇರುವ ಅಂಗಡಿಯವರು, ಶಾಲೆಯ ಬಸ್ಸಿನ ಡ್ರೈವರ್ ಮುಂತಾದವರನ್ನು ಮಾತಾಡುವುದು ಸಿಐಸಿಎಲ್ ಶಾಲಾ ಜೀವನದ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡಬಹುದು.

### ಮಗುವಿನ ನೆರೆಹೊರೆ/ಶಾಲೆಯಲ್ಲಿ ಸಂದರ್ಶನ ನಡೆಸುವಾಗ ಅನುಸರಿಸಬಹುದಾದ ಕೆಲವು ತಂತ್ರಗಳು

ಕಾರ್ಯಕರ್ತರು ನೆರೆಯೊರೆಯವರೊಂದಿಗೆ ಸಂದರ್ಶನ ಮಾಡುವಾಗ ಪ್ರಕರಣದ ವಿವರಗಳನ್ನು ಬಹಿರಂಗ ಪಡಿಸದೇ ಇರುವಂತೆ ಎಚ್ಚರಿಕೆ ವಹಿಸಬೇಕು. ಮಗು ಮತ್ತು ಕುಟುಂಬದ ಕುರಿತು ಸಮುದಾಯದಲ್ಲಿ ಕಳಂಕಿತ ಭಾವನೆ ಮೂಡದಂತೆ ನೋಡಿಕೊಳ್ಳಲು ಇದು ಬಹಳ ಮುಖ್ಯ.

ಪ್ರತಿಯೊಂದು ಸಂಭಾಷಣೆ/ಸನ್ನಿವೇಶ ವಿಭಿನ್ನವಾಗಿರುತ್ತದೆ, ಕಾರ್ಯಕರ್ತರು ಬಳಸಬಹುದಾದ ಕೆಲವು ಸಾಮಾನ್ಯ ತಂತ್ರಗಳು ಇಲ್ಲಿವೆ. ಸಮುದಾಯಗಳು ಸಾಮಾನ್ಯವಾಗಿ ಹತ್ತಿರಹತ್ತಿರದ ನಂಟನ್ನು ಹೊಂದಿರುತ್ತವೆ, (ಮಗುವನ್ನು ವಶಕ್ಕೆ ಪಡೆಯಲಾಗಿದೆ) ಎನ್ನುವ ವಿಚಾರ ಈಗಾಗಲೇ ಇತರರಿಗೂ ತಿಳಿದಿರುವ ಸಾಧ್ಯತೆ ಇದೆ. ಆದರೂ, ಕಾರ್ಯಕರ್ತರು ಸಂದರ್ಶನ ಮಾಡುತ್ತಿರುವ ಒಬ್ಬ ವ್ಯಕ್ತಿಗೆ ಈ ಪ್ರಕರಣದ ಮಾಹಿತಿ ಇರಲಿಲ್ಲ ಎಂದಾದರೆ, ಏನು ಮಾಡಬೇಕು?

**ಇಂಥ ಸನ್ನಿವೇಶವನ್ನು ಆಸಿಫ್ ಹೇಗೆ ನಿಭಾಯಿಸುತ್ತಾರೆ ಎಂಬುದನ್ನು ನೋಡೋಣ.**

ಆಸಿಫ್ ಒಬ್ಬ ಸಾಮಾಜಿಕ ಕಾರ್ಯಕರ್ತರು. ಅವರು ಸಿಐಸಿಎಲ್, ಸಾಗರ್ ಬಗ್ಗೆ ಎಸ್‌ಐಆರ್ ತಯಾರಿಸುತ್ತಿದ್ದಾರೆ. ಸಾಗರ್ ವಾಸಿಸುತ್ತಿರುವ ನೆರೆಹೊರೆ/ಓದುತ್ತಿರುವ ಶಾಲೆಗೆ ಹೋಗಿ ಆಸಿಫ್ ಸಂದರ್ಶನವನ್ನು ನಡೆಸುತ್ತಾರೆ.

ಆಸಿಫ್: "ನಮಸ್ಕಾರ, ನಾನು ಆಸಿಫ್. ಚೈಲ್ಡ್ ಕೇರ್ ಅನ್ನೋ ಸಂಸ್ಥೆಯಲ್ಲಿ ನಾನೊಬ್ಬ ಸಮಾಜ ಕಾರ್ಯಕರ್ತ. ಸಾಗರ್ ಮತ್ತು ಆತನ ಕುಟುಂಬದ ಕುರಿತು ನಾನು ಕೆಲವು ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿದೆ."

ನೆರೆಯವರು: ಸಾಗರನ ಬಗ್ಗೆ ನೀವು ಯಾಕೆ ತಿಳಿದುಕೊಳ್ಳಬೇಕು? ಅವನು ಏನು ಮಾಡಿದ್ದಾನೆ?

ಆಸಿಫ್: ಏನಿಲ್ಲ, ನಮ್ಮ ಸಂಸ್ಥೆ ವತಿಯಿಂದ ಅವರಿಗೆ ಏನಾದರೂ ಬೆಂಬಲ ಬೇಕೇ ಅನ್ನೊದಕ್ಕಾಗಿ ನಾನು ಸಾಗರ್ ಮನೆಯವರು ಮತ್ತು ಸಾಗರನ ಶೈಕ್ಷಣಿಕ ಹಿನ್ನೆಲೆಯ ಕುರಿತು ಅರ್ಥ ಮಾಡಿಕೊಳ್ಳಬೇಕು.

(ಇಲ್ಲಿ, ಆಸಿಫ್ ಸಂಭಾಷೆಯನ್ನು ಆರಂಭಿಸಲು ಹೇಗೆ ಸರ್ವೇಸಾಧಾರಣವಾದ ಉತ್ತರಗಳನ್ನು ಕೊಡುತ್ತಿದ್ದಾರೆ ಎಂಬುದನ್ನು ನಾವು ನೋಡುತ್ತೇವೆ. ಕುಟುಂಬ/ಮಗು ಈಗಾಗಲೇ ದೂಷಣೆಗೆ ಒಳಗಾಗಿದ್ದರೆ ಅವರು ಇನ್ನಷ್ಟು ಕಳಂಕಕ್ಕೆ ಒಳಗಾಗದಂತೆ ನೋಡಿಕೊಳ್ಳಲು ಈ ಉಪಾಯ.)

ಇದೇ ರೀತಿಯಲ್ಲಿ, ಎಸ್‌ಐಆರ್‌ಗಾಗಿ ಶಾಲೆಯ ಮುಖ್ಯಶಿಕ್ಷಕರು/ಶಿಕ್ಷಕರನ್ನು ಮಾತಾಡಿಸುವಾಗ ಆಸಿಫ್, "ಅಗತ್ಯವಿರುವ ಪುನರ್ವಸತಿಗಾಗಿ ನಮ್ಮ ಸಂಸ್ಥೆಯು ನಿಮ್ಮ ವಿದ್ಯಾರ್ಥಿ, ಸಾಗರನ ಕುರಿತು ಒಂದಷ್ಟು ಮಾಹಿತಿ ತಿಳಿದುಕೊಳ್ಳಲು ಬಯಸುತ್ತದೆ." ಎನ್ನಬಹುದು.



## ಅಧ್ಯಾಯ 5

# ಸಾಮಾಜಿಕ ತನಿಖೆಯನ್ನು ಹೇಗೆ ನಡೆಸಬೇಕು ಮತ್ತು ವರದಿಯನ್ನು ಹೇಗೆ ತಯಾರಿಸಬೇಕು ಹಂತ ಹಂತದ ಮಾರ್ಗದರ್ಶಿ



**ಎಸ್‌ಐಆರ್‌ನ್ನು ಆರಂಭಿಸುವ ಮುನ್ನ ಮನಸ್ಸಿನಲ್ಲಿ ಇರಿಸಿಕೊಳ್ಳಬೇಕಾದ ಕೆಲವು ಅಂಶಗಳು ಹೀಗಿವೆ:**

- ನೀವು ಒಂದು ಸ್ವಯಂಸೇವಾ ಸಂಸ್ಥೆ ಅಥವಾ ಎನ್‌ಜಿಒನೊಂದಿಗೆ ಕೆಲಸ ಮಾಡುತ್ತಿರುವ ಕಾರ್ಯಕರ್ತರಾಗಿದ್ದರೆ, ಒಎಚ್‌ನ ಪಿಒ ಎಸ್‌ಐರ್ ಕುರಿತು ನಿಮ್ಮನ್ನು ಸಂಪರ್ಕಿಸುತ್ತಾರೆ.

- ಪರಿಣಾಮಕಾರಿಯಾದ ಎಸ್‌ಐಆರ್‌ನ್ನು ತಯಾರಿಸಲು ನೀವು ಕನಿಷ್ಠ 3 ದಿನವಾದರೂ ಅದರಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ (ಒಂದು ಉತ್ತಮವಾದ ಎಸ್‌ಐಆರ್ ತಯಾರಿಕೆಯ ವಿವರವಾದ ವೇಳಾ ನಕಾಶೆಯನ್ನು ಈ ಅಧ್ಯಾಯದಲ್ಲಿ ಮುಂದೆ ನೀಡಲಾಗಿದೆ).

- ಒಂದು ಮಗುವಿನ ಕುರಿತು ಎಸ್‌ಐಆರ್‌ನ್ನು ತಯಾರಿಸುವ ಅಗತ್ಯ ಉದ್ಭವವಾದಾಗ, ಮಗುವಿನ ಮೇಲೆ ಹೊರೆಸಲಾದ ಆಪಾದನೆಯ ಹಿನ್ನೆಲೆ ಮತ್ತು ಅದರ ಕುಟುಂಬದ ವಿಳಾಸದ ವಿವರ ಇತ್ಯಾದಿಗಳನ್ನು ತಿಳಿದುಕೊಳ್ಳುವುದು ಸಹಾಯಕವಾಗುತ್ತದೆ. ಪೊಲೀಸರು ವರದಿ ಮಾಡಿದ ಸಾಮಾಜಿಕ ಹಿನ್ನೆಲೆ ವರದಿ(ಎಸ್‌ಬಿಆರ್) ಲಭ್ಯವಿದ್ದರೆ, ಅದು ನಮಗೆ ಸಿಐಸಿಎಲ್‌ನ್ನು ಹೇಗೆ, ಯಾವಾಗ, ಎಲ್ಲಿ ಮತ್ತು ಯಾವ ಸನ್ನಿವೇಶಗಳಲ್ಲಿ ವಶಕ್ಕೆ ಪಡೆಯಲಾಯಿತು ಎಂಬ ವಿವರಗಳನ್ನು ನೀಡುತ್ತದೆ. ಇದನ್ನು ಓದುವುದು ಎಸ್‌ಐಆರ್ ತಯಾರಿಕೆಯಲ್ಲಿ ಬಹಳ ಉಪಯುಕ್ತವಾಗುತ್ತದೆ (ಆದರೆ, ಎಲ್ಲಾ ಸ್ಟೇಷನ್ನುಗಳು ಇಂಥ ವರದಿಯನ್ನು ಸಲ್ಲಿಸದೇ ಇರಬಹುದು ಎಂಬುದನ್ನು ಗಮನಿಸುವುದು ಮುಖ್ಯ).

- ತನಿಖೆಗಾಗಿ ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಮತ್ತು ಪರಿಣಾಮಕಾರಿಯಾಗಿ ತಯಾರಿಸುವಲ್ಲಿ ಮತ್ತು ಮಗು ಅಥವಾ ಕುಟುಂಬದ ಭಾವನೆಗಳನ್ನು ಪ್ರಚೋದಿಸದೇ ಇರುವ ರೀತಿಯ ಪ್ರಶ್ನೆಗಳನ್ನು ಕೇಳುವುದಕ್ಕೆ ಕಾರ್ಯಕರ್ತರನ್ನು ಸಜ್ಜುಗೊಳಿಸುತ್ತದೆ. ಹೀಗೆ ಹೇಳಿದಾಗ್ಯೂ, ಎಸ್‌ಐಆರ್‌ನ ಉದ್ದೇಶ ಮತ್ತು ವ್ಯಾಪ್ತಿಯು, ಮಾಡಲಾಗಿದೆ ಎಂದು ಆಪಾದಿಸಲಾಗಿರುವ ಅಪರಾಧದ ಸನಿವೇಶಗಳನ್ನು ವಿಮರ್ಶಿಸುವುದಲ್ಲ, ಅದರ ಬದಲಿಗೆ ಮಗು ಮತ್ತು ಕುಟುಂಬವನ್ನು ಎಷ್ಟು ಉತ್ತಮವಾಗಿ ಪುನರ್ವಸತಿಗೊಳಿಸಬಹುದು ಎಂದು ಕಂಡುಕೊಳ್ಳುವುದು ಎಂಬುದನ್ನು ಮನನ ಮಾಡಿಕೊಳ್ಳುವುದು ಅತ್ಯಂತ ಮುಖ್ಯ. ಅಪರಾಧದ ಬಗೆಗಿನ ವಿವರಗಳು ಕೇವಲ ಕಾರ್ಯಕರ್ತರ ಮಾಹಿತಿಗಾಗಿ ಮಾತ್ರ. ಇದಲ್ಲದೇ, ಆಪಾದನೆಗಳ ಕುರಿತು ಈ ಮಾಹಿತಿಯನ್ನು ತುಂಬ ಜಾಗರೂಕತೆಯಿಂದ ಗಮನಿಸಬೇಕು– ಇವು ಕೇವಲ ಆರೋಪಗಳೇ ವಿನಾ ಸಾಬೀತಾದ ಅಪರಾದಗಳಲ್ಲ ಎಂಬುದನ್ನು ಮನಸ್ಸಿನಲ್ಲಿರಿಸಿಕೊಳ್ಳಬೇಕು. ಇಲ್ಲಿ ಮುಖ್ಯವಾದ ಅಂಶವೆಂದರೆ, 'ಆರೋಪಿತ' ಎಂಬ ಪದ. ಆಪಾದನೆಗಳನ್ನು, ನಮ್ಮಲ್ಲಿ ಅಂತರ್ಗತವಾದ ಪೂರ್ವಗ್ರಹಗಳನ್ನು ನಿಯಂತ್ರಣದಲ್ಲಿರಿಸಿಕೊಂಡು ನಿರಪೇಕ್ಷವಾಗಿ ಗಮನಿಸಬೇಕು.

- ಮಗುವಿನ ಕುಟುಂಬದ ಬಳಿ ಹೋಗುವ ಮುಂಚೆ ಮಗುವಿನೊಂದಿಗೆ ಮಾತನಾಡುವುದು ಕಾರ್ಯಕರ್ತರಿಗೆ ತುಂಬಾ ಉಪಯುಕ್ತವಾಗಿರುತ್ತದೆ. ಮಗು ಒಎಚ್‌ನಲ್ಲಿದ್ದರೆ ಮತ್ತು ಜಾಮೀನಿನ ನಿರೀಕ್ಷೆಯಲ್ಲಿದ್ದರೆ, ಅದರ ಜೊತೆ ಮಾತುಕತೆಯಾಡಲು ಪ್ರಯತ್ನಿಸಿ. ಮಗುವಿನ ಶಿಕ್ಷಣ, ಕುಟುಂಬ ಮತ್ತು ಸ್ನೇಹಿತರ ಕುರಿತು ವಿಚಾರಿಸಿ. ಮಗುವು ಅನುಭವಿಸಿರಬಹುದಾದ ದೈಹಿಕ ಅಥವಾ ಭಾವನಾತ್ಮಕ ಯಾತನೆಯ ಕುರಿತು ನಿಗಾ ಇರಲಿ. ಅದು, ಕಣ್ಣಿನ ಮಿಡಿತ, ನಿದ್ದೆ ಮಾಡಿರದೇ ಇರುವುದರ ಲಕ್ಷಣಗಳು, ದೇಹದ ಮೇಲೆ ಆಗಿರಬಹುದಾದ ಗಾಯಗಳು, ಆಗಿರುವ ಘಟನೆಗಳ ಕೆಲವು ಅಂಶಗಳನ್ನು ಮತ್ತೆ ಮತ್ತೆ ಹೇಳುವುದು, ಅಥವಾ ಕೆಲವನ್ನು ಮರೆಯುವುದು, ಯಾವುದೇ ಬಗೆಯ (ಗೋಚರ ಅಥವಾ ಅಗೋಚರ) ಅಸಾಮರ್ಥ್ಯಗಳು– ಇಂಥ ಅಂಶಗಳ ಮೂಲಕ ವ್ಯಕ್ತವಾಗುತ್ತದೆ.

- ಪ್ರತಿಕೂಲ ಬಾಲ್ಯದ ಒಂದು ಅಥವಾ ಹೆಚ್ಚು ಕಹಿ ಅನುಭವಗಳು, ವಯಸ್ಕರ ಸಂಗ, ಧೂಮಪಾನ, ಮದ್ಯಪಾನದಂಥ ವಯಸ್ಕರ ಅಭ್ಯಾಸಗಳನ್ನು ಬಹಳ ಬೇಗ ಹಾಕಿಕೊಳ್ಳುವುದು, ತಂದೆಯ/ಪೋಷಕರ ಮರಣ ಅಥವಾ ಕಡುಬಡತನದಿಂದಾಗಿ ವಯಸ್ಕರ ಜವಾಬ್ದಾರಿಯನ್ನು ಬೇಗನೇ ಹೊರುವ ಅನಿವಾರ್ಯ ಉಂಟಾಗುವುದು– ಇತ್ಯಾದಿಗಳಿಂದಾಗಿ ಕೆಲವು ಹದಿಹರೆಯದ ಸಿಐಸಿಎಲ್‌ಗಳಲ್ಲಿ ಅವರ ವರ್ತನೆಗಳ ದೃಷ್ಟಿಯಿಂದ ಅವರು 'ವಯಸ್ಕರು,' 'ಬೆಳೆದವರು' ಎಂಬಂತೆ ತೋರಬಹುದು. ಆದರೆ ವಾಸ್ತವವಾಗಿ ಅವರು ತಮ್ಮದೇ ಬೆಳಣಿಗೆಯ ಹಲವು ಮೈಲುಗಳನ್ನು ಪೂರೈಸಲು ಹೆಣಗಾಡುತ್ತಿರಬಹುದು. ಕೆಟ್ಟ ಭಾಷೆಯನ್ನು ಬಳಸಿ ಬಯ್ಯುವುದು, ಮೂದಲಿಸುವುದು, ಲೈಂಗಿಕವಾಗಿ ಅಪಾಯಸಾಧ್ಯ ನಡವಳಿಕೆಗಳಲ್ಲಿ ತೊಡಗುವುದು, ಯಾವುದಾದರೂ ಸಂಗತಿಗೆ ಸಮಂಜಸಕ್ಕಿಂತ ಹೆಚ್ಚು ಉಗ್ರವಾಗಿ ಅಥವಾ ಹಿಂಸಾತ್ಮಕವಾಗಿ ಪ್ರತಿಕ್ರಿಯಿಸುವುದು ಇತ್ಯಾದಿಗಳು ಸಿಐಸಿಎಲ್ ತಮ್ಮ ಜಗತ್ತಿನ ಕಠೋರ ವಾಸ್ತವಗಳನ್ನು ಎದುರಿಸಿ ಬದುಕುಳಿಯುವ ಹಾದಿಯಲ್ಲಿ ಅಗತ್ಯವೇನೊ ಎಂಬಂತೆ ಬೆಳೆಸಿಕೊಂಡಿರುವ ಪ್ರವೃತ್ತಿಗಳಾಗಿರಬಹುದು; ಆದ್ದರಿಂದ ಇವುಗಳನ್ನು ಸಮಾನುಭೂತಿಯ ಮಾನಸಿಕ ದೃಷ್ಟಿಕೋನದ ಮೂಲಕ ನೋಡಬೇಕೇ ವಿನಾ ಶಿಕ್ಷೆಯ, 'ಅಪರಾಧಿ' ಅಥವಾ 'ವಯಸ್ಕ' ದೃಷ್ಟಿಕೋನದಲ್ಲಿ ಅಲ್ಲ.
- ಇದಲ್ಲದೆ, ಬಾಲ್ಯದ ಪ್ರತಿಕೂಲ ಅನುಭವಗಳು ಮಕ್ಕಳ ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮದ ಮೇಲೆ ಆಳವಾದ ಮತ್ತು ದೀರ್ಘಾವಧಿಯ ಪ್ರಭಾವವನ್ನು ಬೀರುತ್ತದೆ ಎಂಬುದು ಸ್ಥಾಪಿತವಾದ ಸತ್ಯವಾಗಿದೆ; ಅಲ್ಲದೇ ಸಿಐಸಿಎಲ್ ಮಕ್ಕಳಿಗೆ ಪೊಲೀಸರ ಸಂಪರ್ಕದಲ್ಲಿ ಮತ್ತು ಕಾನೂನಿನೊಂದಿಗೆ ಸಂಘರ್ಷದಲ್ಲಿ ಬರುವುದು ಇನ್ನೊಂದು ಹೊಸ ಆಘಾತಕಾರಿ ಜೀವನ ಘಟನೆಯಾಗಿರುತ್ತದೆ; ಇದರಿಂದಾಗಿ ಈಗಾಗಲೇ ಇರುವ ಮಾನಸಿಕ ಅಸ್ವಸ್ಥತೆಯ ಸಮಸ್ಯೆಗಳನ್ನು ಇನ್ನಷ್ಟು ಹದಗೆಡಿಸಬಹುದು. ಹೀಗಾಗಿ, ಎಸ್‌ಐಆರ್, ಸಿಐಸಿಎಲ್ ಅನುಭವಿಸುತ್ತಿರಬಹುದಾದ ಮಾನಸಿಕ ಅಸ್ವಸ್ಥತೆಯ ಸ್ಥಿತಿಗಳ ಕುರಿತು ಜೆಜೆಬಿಯನ್ನು ಎಚ್ಚರಿಸುವಂಥ ಮತ್ತು ತಪಾಸಣೆ ಮತ್ತು ಮೌಲ್ಯಮಾಪನ, ಚಿಕಿತ್ಸೆ, ಆಪ್ತ ಸಮಾಲೋಚನೆ, ಮನೋವೈದ್ಯಕೀಯ ಚಿಕಿತ್ಸೆ ಇತ್ಯಾದಿಗಾಗಿ ಶಿಫಾರಸ್ಸು ಮಾಡಲು ಸಹಾಯಕವಾದಂಥ ಒಂದು ಸತ್ವಯುತ ಸಾಧನವಾಗಿ ಕೆಲಸ ಮಾಡುತ್ತದೆ.
- ಭಾರತದಲ್ಲಿ ಜೆಜೆ ವ್ಯವಸ್ಥೆಯಲ್ಲಿ ಬರುವ ಹೆಚ್ಚಿನ ಮಕ್ಕಳು ಹಿಂದುಳಿದ, ದುರ್ಬಲ ಸಮುದಾಯಗಳಿಂದ ಬಂದವರಾಗಿರುತ್ತಾರೆ, ಮಲೇರಿಯಾ, ರಕ್ತಹೀನತೆ, ಟೈಫಾಯ್ಡ್, ಅಯೋಡಿನ್ ಕೊರತೆ ಇತ್ಯಾದಿಗಳಿಂದ ಬಳಲಿರುತ್ತಾರೆ. ಇದಲ್ಲದೇ ಅಪಪೌಷ್ಟಿಕತೆ, ಹಸಿವು, ಅಸಡ್ಡೆ ಮತ್ತು ಹಲವು ಅಸಮರ್ಥತೆಗಳು ಮತ್ತು ಪತ್ತೆಯಾಗಿರದ, ಹೀಗಾಗಿ ಚಿಕಿತ್ಸೆಯನ್ನು ಒದಗಿಸದೇ ಇರುವ ಅನಾರೋಗ್ಯದ ಸ್ಥಿತಿಗಳನ್ನು ಎದುರಿಸಿರುತ್ತಾರೆ. ಮಗುವಿನ ಆರೋಗ್ಯದ ಆಯಾಮಗಳ ಕುರಿತ ಮಾಹಿತಿಯನ್ನು ಸೆರೆಹಿಡಿಯಲು ಎಸ್‌ಐಆರ್ ಒಂದು ಶಕ್ತಿಯುತ ಸಾಧನವಾಗಿರುತ್ತದೆ.
- ಹೆಚ್ಚಿನ ಸಲ ಸಂವಹನವು, ಮಾತುಗಳಿಗಿಂತ ಹೆಚ್ಚಾಗಿ ಹಾವಭಾವ ಮತ್ತು ಆಂಗಿಕ ಭಾಷೆಯಲ್ಲಿ ನಡೆಯುತ್ತಿರುತ್ತದೆ. ಸೂಕ್ಷ್ಮವಾಗಿ ಅವಲೋಕಿಸುವುದು ಸಾಮಾಜಿಕ ತನಿಖೆಯ ಅವಿಭಾಜ್ಯ ಅಂಗವಾಗಿದೆ, ಇದು ಮಗುವನ್ನು ಹೆಚ್ಚು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಹಾಯಕವಾಗಿದೆ. ಕಾರ್ಯಕರ್ತರು ಮಗುವಿನ ಹಲ್ಲಿನ ಬಣ್ಣ ಬದಲಾಗಿರುವ ಚಿಹ್ನೆಗಳು, ಉಗುರು, ದೇಹದ ಮೇಲೆ ಯಾವುದೇ ರೀತಿಯ ಕಿರುಕುಳ, ಹಲ್ಲೆ ನಡೆದಿರುವ ಗುರುತು, ಮಾದಕ ದ್ರವ್ಯ ಸೇವನೆ, ಸ್ವಯಂ ಹಾನಿ ಇತ್ಯಾದಿ ಸಾಧ್ಯತೆಗಳನ್ನು ಸೂಚಿಸುವ ಯಾವುದೇ ಗುರುತುಗಳಿದ್ದರೆ ಅವುಗಳನ್ನು ಗಮನಿಸಬೇಕು. ಅವರಿಗೆ ಹಸಿವು ಸರಿಯಾಗಿ ಆಗುತ್ತದೆಯೇ, ಮೂಡ್ ಹೇಗಿರುತ್ತದೆ, ನಿದ್ದೆ ಬರುತ್ತದೆಯೇ, ಏನಾದರೂ ದುಸ್ವಪ್ನಗಳು ಬೀಳುತ್ತವೆಯೇ, ದಣಿವಾಗುತ್ತದೆಯೇ, ಏನಾದರೂ ನೆಮ್ಮದಿ ಕೆಡಿಸುವ/ಒತ್ತಡ, ಕ್ಷೋಭೆಯನ್ನು ತರುವ ಆಲೋಚನೆಗಳು ಕಾಡುತ್ತವೆಯೇ (ಆತ್ಮಹತ್ಯೆಯ ಆಲೋಚನೆಗಳೇನಾದರೂ ಇವೆಯೇ ಎಂದು ಪರಿಶೀಲಿಸಲು) ಇತ್ಯಾದಿ ಸಂಗತಿಗಳನ್ನು ತಿಳಿಯಲು ಸೂಕ್ತವಾದ ಪ್ರಶ್ನೆಗಳನ್ನು ಕೇಳುವುದು ಪ್ರಯೋಜನಕಾರಿಯಾಗಿರುತ್ತದೆ; ಇದರಿಂದಾಗಿ ಮಗುವಿಗೆ ಅಗತ್ಯವಾದ ವೈದ್ಯಕೀಯ ಚಿಕಿತ್ಸೆ, ಮನೋವೈದ್ಯಕೀಯ ಚಿಕಿತ್ಸೆ ಮತ್ತು ಆಪ್ತ ಸಮಾಲೋಚನೆಯ ರೂಪದಲ್ಲಿ ನೆರವಾಗಲು ಸಹಾಯಕವಾಗುತ್ತದೆ.
- ಕುಟುಂಬದ ಬಗ್ಗೆ ವಿಚಾರಿಸಿ– ಕುಟುಂಬದಲ್ಲಿರುವ ಜನರ ಸಂಖ್ಯೆ, ತಂದೆತಾಯಂದಿರ ಉದ್ಯೋಗ/ಕಸಬು, ಸೋದರಸೋದರಿಯರು ಮತ್ತು ಅವರ ಉದ್ಯೋಗ, ಕುಟುಂಬದ ಸಾಮಾನ್ಯ ಪರಿಸರ, ಮನೆಯಲ್ಲಿ ಮಾತಾಡುವ ಭಾಷೆ, ಆಚರಿಸಲ್ಪಡುವ ಹಬ್ಬಗಳು ಇತ್ಯಾದಿ.
- ಇದಲ್ಲದೇ, ಮಕ್ಕಳು ಯಾವುದಾದರೂ ಕುಟುಂಬ ದೌರ್ಜನ್ಯದ ಘಟನೆಯಲ್ಲಿ ಒಳಗೊಂಡಿದ್ದರೆ, ಕುಟುಂಬದ ಯಾವುದಾದರೂ ಸದಸ್ಯರಿಗೆ ಯಾವುದಾದರೂ ಅಸಾಮರ್ಥ್ಯ ಇದ್ದರೆ ಕಾರ್ಯಕರ್ತರು ಕೇಳಿ ಅದನ್ನು ಮಕ್ಕಳಿಂದಲೇ ತಿಳಿದುಕೊಳ್ಳಬೇಕು. ಮಗುವಿನ ಕುಟುಂಬವನ್ನು ಸಂಪರ್ಕಿಸುವಾಗ ಈಗಾಗಲೇ ಸಿಕ್ಕಿರುವ ಈ

ಮಾಹಿತಿಯು ಬಹಳ ಸಹಾಯಕವಾಗುತ್ತದೆ. ಕುಟುಂಬದೊಂದಿಗೆ ಹೇಗೆ ಮಾತುಕತೆಯಾಡಬೇಕು ಎನ್ನುವುದರ ಸಿದ್ಧತೆಯನ್ನು ಮಾಡಿಕೊಳ್ಳಲು ಇದು ನೆರವಾಗುತ್ತದೆ. ಮುಂದೆ ಮಗುವಿನ ಕುರಿತು ಏನನ್ನು ಶಿಫಾರಸ್ಸು ಮಾಡಬೇಕು ಎನ್ನುವುದರ ಕುರಿತು, ಕುಟುಂಬವು ಪಡೆಯಬಹುದಾದ ಸರಕಾರಿ ಯೋಜನೆಗಳ ಕುರಿತು ತಕ್ಕ ಮಾಹಿತಿಯನ್ನು ಒದಗಿಸುತ್ತದೆ.

- ಪ್ರತಿಯೊಂದು ಕುಟುಂಬವೂ ಸ್ವಭಾವದಲ್ಲಿ ವಿಭಿನ್ನ. ಉದಾಹರಣೆಗೆ, ಮಗು 'ನನ್ನ ತಾಯಿಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ,' ಎಂದು ಹೇಳಿದರೆ, ಕಾರ್ಯಕರ್ತರು ಅದನ್ನು ಅನುಸರಿಸಿ ತಾಯಿಯ ಜೊತೆ ಆದಷ್ಟು ಪರಿಣಾಮಕಾರಿಯಾಗಿ ಮಾತಾಡಲು ಸಾಧ್ಯವಾಗಬೇಕು. ಕಾರ್ಯಕರ್ತರು ಅದಕ್ಕನುಗುಣವಾಗಿ ಯೋಜಿಸಿಕೊಳ್ಳಬೇಕು. ಪ್ರಕರಣ ವಿಚಾರಣೆಯ ಸಂದರ್ಭದಲ್ಲಿ ಅವರ ಬೆಂಬಲಕ್ಕೆ ಒಬ್ಬ ವ್ಯಕ್ತಿ ಇರಬೇಕು ಎಂದು ಎಸ್‌ಐಆರ್‌ನಲ್ಲಿ ಶಿಫಾರಸ್ಸು ಮಾಡಿರಬೇಕು.
- ಇದರ ಜೊತೆಯಲ್ಲಿ, ಕುಟುಂಬದ ಒಳಗಿನ ಅಂಗವೈಕಲ್ಯಗಳ ಕುರಿತ ಮಾಹಿತಿಯು ಆನುವಂಶಿಕ ಅಂಗವೈಕಲ್ಯದ ಸಾಧ್ಯತೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗಿರುತ್ತದೆ, ಮತ್ತು ಮಗುವಿಗೆ ಅಗತ್ಯವಾದ ಸಹಾಯದ ಕುರಿತು ಶಿಫಾರಸ್ಸು ಮಾಡಲು ಪ್ರಯೋಜನಕಾರಿಯಾಗಿರುತ್ತದೆ. ಜೆಜೆಪಿಯು ಅಗತ್ಯವಿದ್ದರೆ ಸಿಐಸಿಎಲ್‌ನ್ನು ಒಬ್ಬ ಸಿಐಎನ್‌ಸಿಪಿ ಎಂದು ಘೋಷಿಸಲು ಈ ಮಾಹಿತಿಯು ಬಹಳ ಮಹತ್ವದ್ದಾಗಿರುತ್ತದೆ [ಜೆಜೆ ಕಾಯ್ದೆ, ಸೆಕ್ಷನ್ 8(3)(ಜಿ)].
- ಕಾರ್ಯಕರ್ತರು ಮಗುವಿನ ಕುಟುಂಬ ಮತ್ತು ನೆರೆಹೊರೆಯ ಕುರಿತು ವಿಚಾರಿಸಲು ಅವರಲ್ಲಿಗೇ ಹೋಗುವುದು ಕಡ್ಡಾಯವಾಗಿದೆ, ಅದನ್ನು ಬಿಟ್ಟು ಅವರಲ್ಲಿ ಯಾರಿಗಾದರೂ ಫೋನ್ ಮಾಡಿ ಮಾತಾಡಿ ಮುಗಿಸುವಹಾಗಿಲ್ಲ. ಮನೆಗೇ ಹೋಗಿ ಸಂದರ್ಶನ ಮಾಡಿಯೇ ಎಸ್‌ಐಆರ್‌ನ್ನು ತಯಾರಿಸಲು ಸಾಕಷ್ಟು ಸಮಯ, ಹೆಚ್ಚಿನ ವೆಚ್ಚ, ಪ್ರಯತ್ನ ಮತ್ತು ಸಂಯೋಜನೆ ಬೇಕಾಗುತ್ತದೆಯಾದರೂ, ಎಸ್‌ಐಆರ್ ಸಿದ್ಧಪಡಿಸಲು ಅದು ಅತ್ಯಂತ ಸೂಕ್ತವಾದ ಮತ್ತು ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ, ಮತ್ತು ಹೀಗೆ ಸಮಗ್ರವಾಗಿ ತಯಾರಿಸಿದ ಎಸ್‌ಐಆರ್ ಮಗುವಿನ ಹಿತಾಸಕ್ತಿಯನ್ನು ಖಚಿತಪಡಿಸಿಕೊಳ್ಳುತ್ತದೆ.



## ಹಂತ ಹಂತದ ಮಾರ್ಗದರ್ಶಿ

### ಎ. ಮನೆ ಸಂದರ್ಶನಕ್ಕೆ ಹೋಗುವ ಮುಂಚೆ

**(ಈ ಹಂತಕ್ಕೆ ಬೇಕಾಗುವ ಅಂದಾಜು ಸಮಯ: 2 ಗಂಟೆ)**



1. ಕಾರ್ಯಕರ್ತರು ಕುಟುಂಬ/ಪೋಷಕರನ್ನು ಫೋನಿನ ಮೂಲಕ ಸಂಪರ್ಕಿಸಿ ಮನೆಯ ಸರಿಯಾದ ವಿಳಾಸವನ್ನು ಮುಂದಾಗಿ ತಿಳಿದುಕೊಳ್ಳುವುದು ಬಹಳ ಮುಖ್ಯ. ಈ ಹಂತದಲ್ಲಿಯೇ ನೀವು ಹಲವು ತೊಂದರೆಗಳನ್ನು ಅನುಭವಿಸುವ ಸಂಭವ ಇರುತ್ತದೆ– ನಿಮ್ಮ ಬಳಿ ಇರುವ ಫೋನ್ ನಂಬರ್ ಸರಿಯಾಗಿಲ್ಲ, ಫೋನನ್ನು ಯಾರೂ ಉತ್ತರಿಸುತ್ತಿಲ್ಲ, ಅವರು ನಿಮಗೆ ತಪ್ಪು ವಿಳಾಸವನ್ನು ಕೊಡಬಹುದು. ಈ ರೀತಿ ನಡೆದರೆ, ಆ ಪ್ರದೇಶದಲ್ಲಿ ಕೆಲಸ ಮಾಡುತ್ತಿರಬಹುದಾದ ಯಾವುದಾದರೂ ಎನ್‌ಜಿಒವನ್ನು ಸಂಪರ್ಕಿಸುವುದು ಪ್ರಯೋಜನಕಾರಿಯಾಗಬಹುದು, ಅಥವಾ ಆ ವಿಳಾಸವನ್ನು ನಿಮಗೆ ಒದಗಿಸಿದ ಪೊಲೀಸ್ ಸ್ಟೇಷನ್ನನ್ನು ಅಥವಾ ಎಸ್‌ಬಿಆರ್‌ನ್ನು ಸಂಪರ್ಕಿಸಿ, ಸಕ್ರಿಯವಾದ ಫೋನ್ ನಂಬರ್ ಮತ್ತು ಸರಿಯಾದ ವಿಳಾಸವನ್ನು ತಿಳಿದುಕೊಳ್ಳಬೇಕು. ಕುಟುಂಬವನ್ನು ಭೇಟಿಯಾಗಲು ಹೋಗುವ ಮುನ್ನ ಮಗುವಿನೊಂದಿಗೆ ಮಾತಾಡುವುದೂ ಬಹಳ ಪ್ರಯೋಜನಕಾರಿಯಾಗಿರುತ್ತದೆ. ಮಗು ಮನೆಯ ಹತ್ತಿರ ಇರುವ ಅಂಗಡಿ, ದೇವಾಸ್ಥಾನ, ದೊಡ್ಡ ಸೈನ್‌ಬೋರ್ಡ್ ಯಾವುದಾದರೂ ಹೆಗ್ಗುರುತನ್ನು ಹೇಳಿ ಮನೆಯಿರುವ ಸ್ಥಾನವನ್ನು ಸರಿಯಾಗಿ ತಿಳಿಸಬಹುದು. ಮಕ್ಕಳು ನಿಮ್ಮನ್ನು ಹೇಗೆ ಅಚ್ಚರಿಪಡಿಸುತ್ತಾರೆ ಎಂಬುದು ನಿಮಗೆ ತಿಳಿದಿರುವುದಿಲ್ಲ.



2. ಪಾರದರ್ಶಕತೆ: ಮಗುವಿನ ಮನೆಗೆ ಹೋಗಿದ್ದಾಗ, ಕಾರ್ಯಕರ್ತರು ತಮ್ಮ ಭೇಟಿಯ ಉದ್ದೇಶವನ್ನು ಕುಟುಂಬದವರಿಗೆ ತಿಳಿಸಿ, ಅವರು ಅದನ್ನು ಅರ್ಥ ಮಾಡಿಕೊಂಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಕಾರ್ಯಕರ್ತರ ಪಾತ್ರದ ಬಗ್ಗೆಯಾಗಲೀ, ಎಸ್‌ಐಆರ್ ಮಹತ್ವದ ಬಗ್ಗೆಯಾಗಲೀ ಯಾವುದೇ ಗೊಂದಲ ಇರಬಾರದು. ತಮ್ಮ ಮಗುವಿನ ನ್ಯಾಯಿಕ ಪ್ರಕ್ರಿಯೆಯಲ್ಲಿ ಪಿಒ ಅಥವಾ ಸಮಾಜ ಕಾರ್ಯಕರ್ತರು ವಹಿಸುವ ಪಾತ್ರದ ಕುರಿತು ಕುಟುಂಬಕ್ಕೆ ಅರ್ಥಮಾಡಿಸಿರುವುದೇ ಇಲ್ಲ. ಆದ್ದರಿಂದ, ಕಾರ್ಯಕರ್ತರು ಇದನ್ನು ಕುಟುಂಬದವರಿಗೆ ಅರ್ಥ ಮಾಡಿಸುವುದು ಬಹಳ ಮುಖ್ಯ. ಹೆಚ್ಚಿನ ಸಲ ತಂದೆತಾಯಿ/ಪೋಷಕರು ನೀವೊಬ್ಬ ಪೊಲೀಸ್ ಅಧಿಕಾರಿಯೇನೋ ಎಂದು ತಪ್ಪು ತಿಳಿಯುತ್ತಾರೆ, ಹೀಗಾಗಿ ಅವರು ಹೆದರಿ, ಸಂದರ್ಶನ ನೀಡಲು ನಿರಾಕರಿಸಬಹುದು. ಇಂಥ ಸಂದರ್ಭಗಳಲ್ಲಿ, ಕಾರ್ಯಕರ್ತರು, ಸೂಕ್ತ ತಂತ್ರಗಳನ್ನು ಬಳಸಿ, ಕುಟುಂಬವು ನಿರ್ಭಯವಾಗಿ, ಸಮಾಧಾನವಾಗಿ ಇರುವ ಹಾಗೆ ಮಾಡಿ, ಮಗುವಿನ ನ್ಯಾಯಿಕ ಪ್ರಕ್ರಿಯೆಯಲ್ಲಿ ಅವರ ಪಾತ್ರ ಹೇಗೆ ಮುಖ್ಯ, ಮತ್ತು ಮಗುವಿನ ಪ್ರಕರಣದಲ್ಲಿ ಎಸ್‌ಐಆರ್ ಹೇಗೆ ಉಪಯುಕ್ತವಾದದ್ದು ಎಂದು ಅವರಿಗೆ ಮನನ ಮಾಡಿಸುವುದು ನಿರ್ಣಾಯಕ.

3. ಎಸ್‌ಐಆರ್‌ಗಾಗಿ ಮಗುವಿನ ಮನೆಗೆ ಭೇಟಿ ನೀಡುವ ಮುನ್ನ ಕುಟುಂಬ ಮತ್ತು ನೆರೆಹೊರೆಯ ಆರ್ಥಿಕ,

ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಉದಾಹರಣೆಗೆ: ಅದು ಮುಸ್ಲಿಮ್ ಕುಟುಂಬವಾಗಿದ್ದರೆ ಅವರ ಮನೆಗೆ ಶುಕ್ರವಾರ ಹೋಗುವುದನ್ನು ನಿವಾರಿಸಬಹುದು, ಏಕೆಂದರೆ, ಆ ದಿನ, ಕುಟುಂಬದವರು ವಿಶೇಷ ಪ್ರಾರ್ಥನೆಯನ್ನು ಸಲ್ಲಿಸುವ ಸಾಧ್ಯತೆ ಇರುತ್ತದೆ. ಅದೇ ರೀತಿ, ಅದು ಉಪವಾಸವನ್ನು ಅನುಸರಿಸುವ ಸಮುದಾಯವಾಗಿದ್ದರೆ, ಅಂಥವರ ಮನೆಗೆ ಯಾವಾಗ ಬೇಟಿ ನೀಡಬೇಕು ಎನ್ನುವುದರ ಕುರಿತು ಗಮನವಿರಬೇಕು.

4. ಕುಟುಂಬದ ಭಾಷೆ ಮತ್ತು ಅವರು ಮನೆಯಲ್ಲಿ ಮಾತಾಡುವ ಉಪಭಾಷೆ ಬೇರೆಯಾಗಿದ್ದು, ನೀವು ಅವರೊಂದಿಗೆ ಸಂವಹನಿಸುವುದು ಕಷ್ಟವೆಂದು ತೋರಿದರೆ, ಆ ಕುಟುಂಬದ ಭಾಷೆ, ಉಪಭಾಷೆಯ ಪರಿಚಯ ಚೆನ್ನಾಗಿ ಇರುವವರನ್ನು ಜೊತೆಗೆ ಇಟ್ಟುಕೊಳ್ಳುವುದು ಒಳ್ಳೆಯದು.

5. ಮನೆ ಭೇಟಿಗೆ ಹೋಗುವ ಮುನ್ನ ನಮೂನೆ 6ನ್ನು ಓದಿಕೊಂಡಿದ್ದರೆ ವಾಸ್ತವವಾಗಿ ಸಂದರ್ಶನವನ್ನು ನಡೆಸುವಾಗ ಸುಲಭವಾಗುತ್ತದೆ. ಪ್ರಶ್ನೆಗಳನ್ನು ಸರಳವಾಗಿ, ಅವರಿಗೆ ಅರ್ಥವಾಗುವ ರೀತಿಯಲ್ಲಿ ರೂಪಿಸಿಕೊಳ್ಳಲು ಮತ್ತು ಪ್ರಶ್ನೆಗಳು ಮನನವಾಗಿದ್ದು ಅವುಗಳನ್ನು ಒಂದು ಕ್ರಮದಲ್ಲಿ ಕೇಳಲು ಕಾರ್ಯಕರ್ತರಿಗೆ ಸಹಾಯಕವಾಗುತ್ತದೆ. ನಮೂನೆ 6ನ್ನು ಮನನ ಮಾಡಿಕೊಳ್ಳಲು ಕಾರ್ಯಕರ್ತರು ಹೆಚ್ಚು ಸಮಯ ಕಳೆದಷ್ಟು ಅವರು ನಡೆಸುವ ಸಂದರ್ಶನವು ಅಷ್ಟು ಸುಲಭವೂ ಉತ್ತಮವೂ ಆ ಗಿರುತ್ತದೆ.

6. ಯಾವುದೇ ಕಾರಣಕ್ಕಾಗಿ, ನೀವೊಬ್ಬ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸುವಾಗ, ನಿಮ್ಮದೇ ಆದ ವೈಯಕ್ತಿಕ ಆಘಾತಕಾರಿ ಅನುಭವಗಳು, ಒಂದು ವಸ್ತುನಿಷ್ಠವಾದ, ಪೂರ್ವಗ್ರಹನಿರಪೇಕ್ಷವಾದ ವರದಿಯನ್ನು ತಯಾರಿಸುವುದರಲ್ಲಿ ಅಡ್ಡಿಯಾಗುವ ಸಾಧ್ಯತೆ ಇದೆ ಎಂದು ನಂಬುವುದಾದರೆ ನೀವು, ಸಾಮಾಜಿಕ ತನಿಖೆಯನ್ನು ನಡೆಸಬಹುದು ಎಂಬ ಮಾನ್ಯತೆಯನ್ನು ಪಡೆದಿರುವ ಒಬ್ಬ ಸಹೋದ್ಯೋಗಿಯನ್ನು ಜೊತೆಗೆ ಇಟ್ಟುಕೊಂಡು, ಅವರೊಂದಿಗೆ ವರದಿಯನ್ನು ಜಂಟಿಯಾಗಿ ತಯಾರಿಸಬಹುದು.

7. ಮನೆ ಭೇಟಿಗೆ ತೆರಳುವಾಗ ಕಾರ್ಯಕರ್ತರು ಎಸ್ಐಅರ್ ನಮೂನೆ 6ರ ಒಂದು ಪ್ರತಿ ಮತ್ತು ಜೆಜೆಬಿಯಿಂದ ಪಡೆದ ಅಧಿಕೃತ ಆದೇಶವನ್ನು ಜೊತೆಗೆ ತೆಗೆದುಕೊಂಡು ಹೋಗಬೇಕು.



## ಬಿ. ಮನೆ ಭೇಟಿ ಸಂದರ್ಭದಲ್ಲಿ:

(ತೆಗೆದುಕೊಳ್ಳಬಹುದಾದ ಅಂದಾಜು ಸಮಯ: 1–2 ಗಂಟೆಗಳು)

1. ಮಗುವಿನ ಮನೆಯನ್ನು ಹುಡುಕುವುದು ಕಾರ್ಯಕರ್ತರಿಗೆ ಕಷ್ಟದ ಸವಾಲಾಗಬಹುದು. ಮಗುವಿನ ವಿರುದ್ಧ ಆಪಾದಿಸಲಾಗಿರುವ ಪ್ರಕರಣವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಸ್ಥಳದ ಮಾಹಿತಿಯನ್ನು ಹೊಂದಿರುವುದು ಸಹಾಯಕವಾಗಬಹುದು. ಕುಟುಂಬದ ಪ್ರತಿರೋಧವೂ ಸೇರಿದ ಹಾಗೆ ಯಾವುದಾದರೂ ಕಾರಣಕ್ಕೆ ಕಾರ್ಯಕರ್ತರಿಗೆ ಅಸುರಕ್ಷಿತತೆಯ ಭಾವನೆ ಉಂಟಾದರೆ, ಅವರು, ಎಸ್ಐಆರ್‌ನ್ನು ತಯಾರಿಸಲು ಅಧಿಕೃತತೆಯನ್ನು ಪಡೆದಿರುವ ಇನ್ನೊಬ್ಬ ವ್ಯಕ್ತಿಯ ಸಹಾಯವನ್ನು ಪಡೆಯಬಹುದು. ಆದಾಗ್ಯೂ, ಸಹಾಯಕ್ಕೆ ಬರುವ ವ್ಯಕ್ತಿಗೆ ಕಾರ್ಯಕರ್ತರು ನಡೆಸುತ್ತಿರುವ ಕಾರ್ಯದ ಸ್ವಭಾವದ ಕುರಿತು ಅರಿವು ಇರಬೇಕು ಮತ್ತು ಆರೋಪಿತ ಪ್ರಕರಣದ ಕುರಿತು ಪೂರ್ವಗ್ರಹ ಇಲ್ಲದವರಾಗಿರಬೇಕು. ಆಯಾ ಬಡಾವಣೆಯ ಜನರೊಂದಿಗೆ ಪರಿಚಯವಿರುವ ಸ್ಥಳೀಯ ಸಮುದಾಯ ಕಾರ್ಯಕರ್ತರು ಒಳ್ಳೆಯ ಸಹಾಯಕರಾಗುವ ಸಾಧ್ಯತೆಯನ್ನು ಹೊಂದಿರುತ್ತಾರೆ.

2. ಸಮಾಜ ಕಾರ್ಯ ಮತ್ತು ಮನೋವಿಜ್ಞಾನದ ಕ್ಷೇತ್ರದ ಕ್ಷೇತ್ರಾಧರಿತ ತರಬೇತಿಯು ಮನೆ ಭೇಟಿಯ ಇಡೀ ಅವಧಿಯಲ್ಲಿ ಪ್ರಯೋಜನಕ್ಕೆ ಬರುತ್ತದೆ, ಅದನ್ನು ಉಳಿಸಿಕೊಳ್ಳಬೇಕು. ಇದರಲ್ಲಿ, ಸಂದರ್ಶನದ ವೇಳೆಯಲ್ಲಿ ನಾವು ತೊಡುವ ಉಡುಪಿನ ಆಯ್ಕೆ, ನಮ್ಮ ವರ್ತನೆ, ನಡವಳಿಕೆ, ಲಿಂಗತ್ವ, ಜಾತಿ, ಧರ್ಮ ಮತ್ತು ಪ್ರದೇಶಗಳು ಕೆಲಸ ಮಾಡುವ ವಿಶಿಷ್ಟ ರೀತಿಯು ಒಳಗೊಂಡಿರುತ್ತವೆ.

   ಉದಾ: ಸರಳವಾದ ಉಡುಪನ್ನು ತೊಡುವುದು, ದುಬಾರಿಯಾದ ಆಭರಣಗಳನ್ನು ತೊಡದೇ ಇರುವುದು, ಅಗತ್ಯ ಬಿದ್ದರೆ ಅವರ ಮನೆಯ ನೆಲದ ಮೇಲೆಯೇ ಅನಾಯಾಸ ಕುಳಿತುಕೊಳ್ಳಲು ಸಿದ್ಧರಿರುವುದು, ಅವರೇನಾದರೂ ಸೇವಿಸಲು ತಿಂಡಿ, ಚಹಾ ಏನಾದರೂ ಕೊಟ್ಟರೆ, ಸಾಮಾಜಿಕವಾಗಿ ಸಮ್ಮತವಾದ ಪದ್ಧತಿಗಳ ಪ್ರಕಾರ, ಅದರಲ್ಲೂ ಮುಖ್ಯವಾಗಿ ಇತರ ಲಿಂಗತ್ವದ ಸದಸ್ಯರೊಂದಿಗೆ ಸಂಭಾಷಿಸುತ್ತಿರುವಾಗ, ವಿನಯದಿಂದ ಒಪ್ಪಿಕೊಳ್ಳುವುದು.

   ವರ್ತನೆಯಲ್ಲಿ ಸೌಜನ್ಯವನ್ನು ಕಾಪಾಡಿಕೊಳ್ಳುತ್ತಾ, ಅವರು ಒಳಗೆ ಬನ್ನಿ ಎಂದು ಕರೆಯುವವರೆಗೆ ಹೊರಗೆ ಕಾಯುವುದು ಬಹಳ ಮುಖ್ಯ. ನಿಮ್ಮ ಲಿಂಗತ್ವದ ಕುರಿತು ಜಾಗೃತಿ ಇರಲಿ ಮತ್ತು ಸಮಂಜಸವಾದ ಸಾಮಾಜಿಕ ವರ್ತನೆಯನ್ನು ಕಾಪಾಡಿಕೊಳ್ಳಿ.

   ಉದಾ: ನೀವು ಒಬ್ಬ ಪುರುಷ ಕಾರ್ಯಕರ್ತರಾಗಿದ್ದರೆ, ಕುಟುಂಬದ ಮಹಿಳಾ ಸದಸ್ಯರು ಒಬ್ಬರೇ ಅಥವಾ ಮನೆಯ ಏಕಾಂತದಲ್ಲಿ ನಿಮ್ಮೊಂದಿಗೆ ಮಾತಾಡಲು ಮುಜುಗುರಪಟ್ಟುಕೊಳ್ಳಬಹುದು. ಅಂಥ ಸಂದರ್ಭದಲ್ಲಿ, ಮನೆಗೆ ಹೊರಗಡೆಯೇ ಕುಳಿತು ಮಾತಾಡಬಹುದು ಎಂದು ಹೇಳಬಹುದು, ಅಥವಾ ಕುಟುಂಬದ ಇತರ ಸದಸ್ಯರೂ ಮನೆಯಲ್ಲಿ ಇರುವಾಗ ಬರುತ್ತೇನೆ ಎಂದೂ ಹೇಳಬಹುದು. ಒಟ್ಟಾರೆ ಅವರು ಯಾವುದೇ ಮುಜುಗುರ ಇಲ್ಲದೇ ಮಾತಾಡುವುದು ಬಹಳ ಮುಖ್ಯ.


3. ಎಸ್ಐಆರ್‌ನ ಪರಿಕಲ್ಪನೆ ಮತ್ತು ಉದ್ದೇಶದ ಕುರಿತು ಕುಟುಂಬದವರಿಗೆ ಮತ್ತೊಮ್ಮೆ ಮನನ ಮಾಡಿಸಬೇಕು. ಅವರು ಕೇಳಿದರೆ, ಸಂಬಂಧಪಟ್ಟ ಮಾಹಿತಿಯನ್ನು ನೀಡಬೇಕು. ಉದಾಹರಣೆಗೆ:

- ಅವರ ಮಗುವಿಗೆ ಇನ್ನೂ ಶಿಕ್ಷೆಯಾಗಿಲ್ಲ, ಅಥವಾ ಅಪರಾಧಿಯೆಂದು ಘೋಷಿಸಲಾಗಿಲ್ಲ ಎಂಬುದನ್ನು ಅವರಿಗೆ ಮನವರಿಕೆ ಮಾಡಿಸಬೇಕು. 'ತಪ್ಪಿತಸ್ಥ ಎಂದು ಕಂಡುಬರುವುದು' ಮತ್ತು 'ಜಾಮೀನಿಗಾಗಿ ಕಾಯುತ್ತಿರುವುದು' ಇವೆರಡರ ನಡುವೆ ವ್ಯತ್ಯಾಸವೇನು (ಎಸ್ಐಆರ್ ತಯಾರಿಸುತ್ತಿರುವ ಹೊತ್ತಿನಲ್ಲಿ ಅಪರಾಧವು ಕೇವಲ 'ಆಪಾದನೆ'ಯಾಗಿರುತ್ತದೆ ಎಂಬುದು ನೆನಪಿರಲಿ) ಎಂಬುದನ್ನು ಅರ್ಥ ಮಾಡಿಸಬೇಕು.
- ಅವರ ಮಗುವಿಗೆ ಅತ್ಯಂತ ಹಿತಕರವಾದುದನ್ನು ನಿರ್ಧರಿಸಲು ಎಸ್ಐಆರ್ ಸಿದ್ಧಪಡಿಸುವುದು ಬಹಳ ಮುಖ್ಯವೆಂದು ಒತ್ತಿ ಹೇಳುತ್ತಾ, ಆ ಕಾರಣಕ್ಕಾಗಿ ಕೇಳಿದ ಪ್ರಶ್ನೆಗಳಿಗೆ ನಿಜವನ್ನು

ಹೇಳಬೇಕಾದುದು ಮುಖ್ಯ ಎಂದು ಅರ್ಥ ಮಾಡಿಸಬೇಕು. ಉದಾಹರಣೆಗೆ: ನೀವು ಅವರ ಮನೆಗೆ ಭೇಟಿ ಕೊಟ್ಟಿದ್ದರ ಉದ್ದೇಶವನ್ನು, ನೀವು ಪೊಲೀಸರ ಕಡೆಯವರಲ್ಲ ಎನ್ನುವುದನ್ನು ಅವರಿಗೆ ಹೇಳಿ ಅರ್ಥ ಮಾಡಿಸಿದ ನಂತರ, (ಈ ಮಾತುಕತೆ ವಿಶಿಷ್ಟವಾಗಿ ಕ್ರಿಮಿನಲ್ ಪ್ರಕರಣದ ಬಗ್ಗೆಯಲ್ಲ, ಆದರೆ, ಕುಟುಂಬದ ಮತ್ತು ಮಗುವಿನ ಸಾಮಾಜಿಕ–ಆರ್ಥಿಕ ಮತ್ತು ಇತರ ವಾಸ್ತವಗಳ ಕುರಿತಾಗಿ) ನಿಜ ಹೇಳುವುದು ಮಗುವಿನ ಹಿತದಲ್ಲಿಯೇ ಇರುತ್ತದೆ ಎಂಬುದನ್ನು ಅರ್ಥ ಮಾಡಿಸಬೇಕು.

- ಇದೆಲ್ಲದರ ಹೊರತಾಗಿಯೂ, ಕುಟುಂಬದವರಿಗೆ ಕಾನೂನು ಸಲಹೆಯನ್ನಾಗಲೀ ಹುಸಿ ಭರವಸೆಗಳನ್ನಾಗಲೀ ನೀಡಬೇಡಿ. ಇದರಲ್ಲಿ, 'ಮಗುವಿಗೆ ಬೇಗನೇ ಜಾಮೀನು ಸಿಗುತ್ತದೆ/ಸಿಗುವುದಿಲ್ಲ.' ಎನ್ನುವುದೂ ಒಳಗೊಂಡಿರುತ್ತದೆ.





## ಸಿ. ಸಂದರ್ಶನದ ವೇಳೆಯಲ್ಲಿ:

(ಕುಟುಂಬದ ಜೊತೆಗಿನ ಸಂದರ್ಶನಕ್ಕೆ ಸುಮಾರು 1–2 ಗಂಟೆ ಸಮಯ ಬೇಕಾಗಬಹುದು. ಇದರ ನಂತರದ ಶಾಲೆಯೊಂದಿಗೆ (ಶಾಲಾ ದಾಖಲೆ ಇತ್ಯಾದಿಗಳನ್ನು ನೋಡಲು), ಕೆಲಸದ ಜಾಗದಲ್ಲಿ, ಮತ್ತು ನೆರೆಹೊರೆಯಲ್ಲಿ ನಡೆಸಬಹುದಾದ ಸಂದರ್ಶನಕ್ಕೆ ಸುಮಾರು 1–2 ಗಂಟೆ ಬೇಕಾಗಬಹುದು. ಇಲ್ಲಿ ನಮೂದಿಸಲಾಗಿರುವ ಸಮಯದಲ್ಲಿ ಪ್ರಯಾಣದ ಅವಧಿಯನ್ನು ಸೇರಿಸಲಾಗಿಲ್ಲ. ಅದನ್ನು ಆಯಾ ಪ್ರಕರಣಕ್ಕೆ ಸಂಬಂಧಿಸಿದ ಹಾಗೆ ಕಾರ್ಯಕರ್ತರೇ ಲೆಕ್ಕ ಹಾಕಿಕೊಳ್ಳಬೇಕು.)

(ಕುಟುಂಬದ ಜೊತೆಗಿನ ಸಂದರ್ಶನಕ್ಕೆ ಸುಮಾರು 1–2 ಗಂಟೆ ಸಮಯ ಬೇಕಾಗಬಹುದು. ಇದರ ನಂತರದ ಶಾಲೆಯೊಂದಿಗೆ (ಶಾಲಾ ದಾಖಲೆ ಇತ್ಯಾದಿಗಳನ್ನು ನೋಡಲು), ಕೆಲಸದ ಜಾಗದಲ್ಲಿ, ಮತ್ತು ನೆರೆಹೊರೆಯಲ್ಲಿ ನಡೆಸಬಹುದಾದ ಸಂದರ್ಶನಕ್ಕೆ ಸುಮಾರು 1–2 ಗಂಟೆ ಬೇಕಾಗಬಹುದು. ಇಲ್ಲಿ ನಮೂದಿಸಲಾಗಿರುವ ಸಮಯದಲ್ಲಿ ಪ್ರಯಾಣದ ಅವಧಿಯನ್ನು ಸೇರಿಸಲಾಗಿಲ್ಲ. ಅದನ್ನು ಆಯಾ ಪ್ರಕರಣಕ್ಕೆ ಸಂಬಂಧಿಸಿದ ಹಾಗೆ ಕಾರ್ಯಕರ್ತರೇ ಲೆಕ್ಕ ಹಾಕಿಕೊಳ್ಳಬೇಕು.)

1. ನೀವು ಪ್ರಶ್ನೆಗಳನ್ನು ಕೇಳುವ ಧ್ವನಿಯು ಸನ್ನಿವೇಶಕ್ಕೆ ತಕ್ಕ ಹಾಗೆ ಹಿತವಾಗಿರಬೇಕು ಎನ್ನುವುದು ಬಹಳ ಮುಖ್ಯ.
2. ಬಳಸಲಾಗುವ ಭಾಷೆಯೂ ಯಾವಾಗಲೂ ಸರಳವಾಗಿರಬೇಕು, ಅರ್ಥಮಾಡಿಕೊಳ್ಳಲು ಸುಲಭವಾಗಿರಬೇಕು ಮತ್ತು ಗೌರವಯುತವಾಗಿರಬೇಕು.
3. ಪ್ರಶ್ನೆಗಳನ್ನು ಯಾವುದೇ ಗೊಂದಲಕ್ಕೆ ಕಾರಣವಾಗದೇ ಸ್ಪಷ್ಟವಾಗಿ ಅರ್ಥವಾಗುವ ಹಾಗೆ ಕೇಳಬೇಕು.
4. ಸಂದರ್ಶನಗಳಿಗಾಗಿ ಒಂದು ಡೈರಿಯನ್ನು ಇಟ್ಟುಕೊಳ್ಳುವುದು ಸಹಾಯಕವಾಗುತ್ತದೆ.
5. ಆದರೂ, ಸಂದರ್ಶನವನ್ನು ನಡೆಸುವ ವೇಳೆಯಲ್ಲಿ ಅವರು ನೀಡಿದ ಉತ್ತರಗಳನ್ನು ಬರವಣಿಗೆಯಲ್ಲಿ ಟಿಪ್ಪಣಿ ಮಾಡಿಕೊಳ್ಳದೇ ಇರುವುದು ಮಾತುಕತೆ ಸುಗಮವಾಗಿ ನಡೆಯುವುದಕ್ಕೆ ಸಹಾಯಕವಾಗಿರುತ್ತದೆ, ಹೀಗಾಗಿ ಕಾರ್ಯಕರ್ತರು ಮನಸ್ಸಿನಲ್ಲಿಯೇ ಟಿಪ್ಪಣಿ ಮಾಡಿಕೊಳ್ಳುವ ಅಭ್ಯಾಸವನ್ನು ಹಾಕಿಕೊಳ್ಳಬೇಕು. ಸಂದರ್ಶನದ ವೇಳೆಯಲ್ಲಿ ಮುಖವನ್ನು ನೋಡುತ್ತಾ ಮಾತಾಡುತ್ತಿರಬೇಕು, ಸಂಭಾಷಣೆ ಸಹಜವಾಗಿರಬೇಕು.
6. ಮಗು/ಕುಟುಂಬವು ನಿಮ್ಮೊಂದಿಗೆ ಹೇಗೆ ಸಂವಹನಿಸುತ್ತದೆ ಎಂಬುದನ್ನು ಅವಲೋಕಿಸಿ. ಎಂದರೆ, ಅವರು ಏನು ಮಾತಾಡುತ್ತಾರೆ, ಅದನ್ನು ಹೇಗೆ ಮಾತಾಡುತ್ತಾರೆ, ಮಾತಾಡುವಾಗ ಅವರ ಆಂಗಿಕ ಭಾಷೆ, ಅವರು ಬಳಸುವ ಅಂಗಸಂಜ್ಞೆಗಳು, ಅವುಗಳಲ್ಲಿ ಯಾವುದಾದರೂ ದೈಹಿಕ ಸನ್ನೆಗಳು ಮತ್ತೆ ಮತ್ತೆ ಮರುಕಳಿಸುತ್ತವೆಯೇ ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಬೇಕು.
7. ಸಂದರ್ಶನ ಮುಗಿದ ನಂತರ ಕೆಲಹೊತ್ತು ಬಿಡುವಿಗಾಗಿ ವಿನಂತಿಸಿಕೊಳ್ಳಿ. ಅಷ್ಟು ಹೊತ್ತು ಚರ್ಚಿಸಿದ್ದರ ಒಂದು ಕರಡನ್ನು ತಯಾರಿಸಿ. ಅದನ್ನು ಕುಟುಂಬದ ಸದಸ್ಯರಿಗೆ ಓದಿ ಹೇಳಿ, ಮಾಹಿತಿಯನ್ನು ನೀವು ಸರಿಯಾಗಿ ಬರೆದುಕೊಂಡಿದ್ದೀರಿ ಎನ್ನುವುದನ್ನು ಖಚಿತಪಡಿಸಿಕೊಳ್ಳಿ. ಕಾಯ್ದೆಯ ಅಡಿಯಲ್ಲಿ ಅಗತ್ಯವಾದ ಕಾನೂನು ಪ್ರಕ್ರಿಯೆಯ ಅಧಿಕೃತ ಭಾಗವಾಗಿ ನೀವು ಈ ಮಾಹಿತಿಯನ್ನು ಜೆಜೆಬಿಗೆ ಸಲ್ಲಿಸುತ್ತೀರಿ ಎಂಬುದನ್ನು ಅವರಿಗೆ ವಿವರಿಸಿ. ಕುಟುಂಬದ ವತಿಯಿಂದ ಸಮ್ಮತಿಯನ್ನು ಪಡೆಯಲು ಮತ್ತು ನಿಮ್ಮೊಂದಿಗೆ ವಿಶ್ವಾಸದಿಂದ ಹಂಚಿಕೊಂಡಿರುವ ಮಾಹಿತಿಯನ್ನು ಸೂಕ್ಷ್ಮವಾಗಿ ಮತ್ತು ಗೌರವಯುತವಾಗಿ ಬಳಸಲಾಗುವುದು ಎಂಬ ಭರವಸೆಯನ್ನು ಕೊಟ್ಟ ಹಾಗೆಯೂ ಆಗುತ್ತದೆ.
8. ಕಾರ್ಯಕರ್ತರು ಗೋಪ್ಯವನ್ನು ಕಾಪಾಡಿಕೊಳ್ಳುವಲ್ಲಿ ಮತ್ತು ಸಂದರ್ಶನದ ಇಡೀ ಪ್ರಕ್ರಿಯೆಯಲ್ಲಿ ವೃತ್ತಿಪರ ನೈತಿಕತೆಗೆ ಬದ್ಧರಾಗಿರುವ ಕುರಿತು ಜಾಗರೂಕರಾಗಿರಬೇಕು.

## ಗೋಪ್ಯತೆ ಎಂದರೇನು? 'ನಾನು ಈ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ' ಎಂದು ಅರ್ಥವೇ?

ಎಸ್‌ಐಆರ್ ಎಂಬುದು ಒಂದು ಗೋಪ್ಯ ದಾಖಲೆಯಾಗಿದ್ದಾಗ್ಯೂ, ವರದಿಯನ್ನು ಸಿದ್ಧಪಡಿಸುವಾಗ ಕಾರ್ಯಕರ್ತರು ಗೋಪ್ಯತೆಗೆ, 'ಬಹಿರಂಗಪಡಿಸುವಿಕೆ' ಮತ್ತು ಗೋಪ್ಯತೆಗೆ 'ವಿನಾಯಿತಿ' –ಇವುಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯ.

- 'ಗೋಪ್ಯತೆ' ಎಂದರೆ, ವರದಿಯಲ್ಲಿನ ಯಾವುದನ್ನು ಯಾರೊಂದಿಗೂ ಹಂಚಿಕೊಳ್ಳುವುದೇ ಇಲ್ಲ **ಎನ್ನುವ ಅರ್ಥವಲ್ಲ** ಎಂಬುದನ್ನು ಮಗು/ಕುಟುಂಬಕ್ಕೆ ತಿಳಿಸಬೇಕು.
- ಕಾರ್ಯಕರ್ತರು ಅವರು ನೀಡಿರುವ ಮಾಹಿತಿಯನ್ನು ಯಾರೊಂದಿಗೆ (ಎಂದರೆ ಜೆಜೆಬಿಯೊಂದಿಗೆ) ಹಂಚಿಕೊಳ್ಳಲಾಗುವುದು ಎಂಬುದನ್ನು ಅವರಿಗೆ ಮನನ ಮಾಡಿಸಬೇಕು.
- POCSOನಂಥ ಕಡ್ಡಾಯ ವರದಿ ಮಾಡುವಿಕೆಯ ಪ್ರಕರಣದಲ್ಲಾದರೆ, **ಅದು ಗೋಪ್ಯತೆಯ ವ್ಯಾಪ್ತಿಗೆ ಬರುವುದಿಲ್ಲ**.

## ಡಿ. ಸಂದರ್ಶನದ ನಂತರ

(ಸಂದರ್ಶನಗಳಲ್ಲಿ ಸಂಗ್ರಹಿಸಲಾದ ಮಾಹಿತಿಯ ವಿಶ್ಲೇಷಣೆ ಮತ್ತು ಎಸ್‌ಐಆರ್ ಬರವಣಿಗೆಗೆ ಸುಮಾರು 2 ಗಂಟೆ ಬೇಕಾಗಬಹುದು. ಮಗುವಿನ ಪ್ರಕರಣಕ್ಕಾಗಿ ಇತರ ವೃತ್ತಿಪರರನ್ನು ಸಂಪರ್ಕಿಸಬೇಕಾಗಿ ಬಂದರೆ ಅದಕ್ಕೆ ತೆಗೆದುಕೊಳ್ಳುವ ಸಮಯ ಇದರಲ್ಲಿ ಸೇರಿಲ್ಲ.)

1. ಪ್ರತಿಯೊಂದು ಸಂದರ್ಶನ ಮುಗಿದ ನಂತರ ಮಾಹಿತಿಯನ್ನು **ಸಂಕ್ಷಿಪ್ತವಾದ ಟಿಪ್ಪಣಿಗಳಲ್ಲಿ ದಾಖಲಿಸಿಟ್ಟುಕೊಳ್ಳುವುದು** ಒಳ್ಳೆಯದು.
2. ಮಾಹಿತಿಯನ್ನು ವಿವಿಧ ಅಧ್ಯಯನ ಕ್ಷೇತ್ರಗಳ ಪರಿಣತರೊಂದಿಗೆ (ಉದಾ: ಮಕ್ಕಳ ಮನೋವಿಜ್ಞಾನಿಗಳು, ಅನುಭವಿ ಸಮಾಜ ಕಾರ್ಯಕರ್ತರು ಇತ್ಯಾದಿ) ಚರ್ಚಿಸುವುದರಿಂದ ಸತ್ಯಾಂಶಗಳನ್ನು ಸಂಸ್ಕರಿಸುವಲ್ಲಿ ಮತ್ತು ದತ್ತಾಂಶಗಳ ವಿಶ್ಲೇಷಿಸುವಲ್ಲಿ ಸಹಾಯಕವಾಗುತ್ತದೆ. ಈ ಒಂದು ಹಂತವು ವರದಿಯನ್ನು ತಯಾರಿಸುವುದರಲ್ಲಿ ಹಲವು ವಿಧದಲ್ಲಿ ಪ್ರಯೋಜನಕಾರಿಯಾಗುತ್ತದೆ. ಒಂದು ಪರಿಣಾಮಕಾರಿಯಾದ ವರದಿಯನ್ನು ತಯಾರಿಸುವಲ್ಲಿ ವಿಭಿನ್ನ ದೃಷ್ಟಿಕೋನಗಳ ಪ್ರಯೋಜನವನ್ನು ಪಡೆದಂತಾಗುತ್ತದೆ.

   ಎಸ್‌ಐಆರ್ ಒಂದು **ಸವಿವರವಾದ ವರದಿಯಾಗಿರಬೇಕು**. ನಮೂನೆಯು ಸರಳವಾದ ಹೌದು/ಅಲ್ಲ ಎಂಬ ಉತ್ತರಗಳ ಸರಳವಾದ ದಾಖಲೆಯಾಗಿ ತೋರಬಹುದು, ಆದರೆ, ಸಾಮಾಜಿಕ ತನಿಖೆಯಿಂದ ಹೊಮ್ಮಿದ ಎಲ್ಲಾ ಮಹತ್ವದ ಮಾಹಿತಿಯು ಬರೀ ಹೌದು/ಅಲ್ಲ ಉತ್ತರಗಳ ರೂಪದಲ್ಲಿ ಪ್ರತಿಬಿಂಬಿತವಾಗುವುದು ಅಸಾಧ್ಯವೇ ಸರಿ. ಆದ್ದರಿಂದ, ಆ ಮಾಹಿತಿಯನ್ನು ಆಧರಿಸಿ ನೀವು **ವಿಸ್ತೃತವಾದ, ಎಲ್ಲ ವಿವರಗಳನ್ನು ಒಳಗೊಂಡ ವರದಿಯನ್ನು ಬರೆಯಬೇಕು.**



3. ಎಸ್‌ಐ ವರದಿಯು ಸತ್ಯಾಂಶಗಳನ್ನು ಆಧರಿಸಿರಬೇಕೇ ವಿನಾ ಅಭಿಪ್ರಾಯಗಳಿಂದ ಪ್ರಭಾವಿತವಾಗಿರುವುದಲ್ಲ ಎಂಬುದನ್ನು ಕಾರ್ಯಕರ್ತರು ನೆನಪಿಡುವುದು ಬಹಳ ಮುಖ್ಯ.
4. ಯಾವಾಗಲೂ ವಿವರವಾದ ವಿವರಣೆ ಮತ್ತು ಕಾರಣಗಳನ್ನು ನೀಡಿ. ನಿಮ್ಮ ವರದಿಯ ಮೂಲಕ ಮಗುವಿನ ವಾಸ್ತವವನ್ನು ಅರ್ಥ ಮಾಡಿಕೊಳ್ಳಲು ಅದು ಜೆಜೆಬಿಗೆ ಸಹಾಯಕವಾಗುತ್ತದೆ. ನೆನಪಿರಲಿ, ನೀವು ಖುದ್ದಾಗಿ ಭೇಟಿಯಾಗಿ ಮಗುವಿನ ಕುರಿತು ಅರಿತಿರುವ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಚೌಕಟ್ಟನ್ನು ಅರ್ಥ ಮಾಡಿಕೊಳ್ಳಲು ಜೆಜೆಬಿ ಇರುವ ಒಂದೇ ಒಂದು ಮಾರ್ಗ ಎಂದರೆ ನಿಮ್ಮ ವರದಿ ಎಂಬುದು ನೆನಪಿರಲಿ!

ಉದಾಹರಣೆಗೆ: ನಮೂನೆ 6ರ ಪ್ರಶ್ನೆ 39ನ್ನು ನೋಡೋಣ:

39. ಮಗುವನ್ನು ಯಾವುದಾದರೂ ಗ್ಯಾಂಗು ಅಥವಾ ವಯಸ್ಕರು ಅಥವಾ ವಯಸ್ಕರ ಗುಂಪು ಬಳಸಿಕೊಂಡಿದೆಯೇ ಅಥವಾ ಮಗುವನ್ನು ಮಾದಕ ದ್ರವ್ಯದ ಕಳ್ಳಸಾಗಣೆಗೆ ಬಳಸಿಕೊಳ್ಳಲಾಗಿದೆಯೇ:

| ✓ ಹೌದು | ಅಲ್ಲ |
|---|---|

ಇದನ್ನು ಎರಡು ಬಗೆಯಲ್ಲಿ ಉತ್ತರಿಸಬಹುದು:

ಆಯ್ಕೆ 1:

39. ಮಗುವನ್ನು ಯಾವುದಾದರೂ ಗ್ಯಾಂಗು ಅಥವಾ ವಯಸ್ಕರು ಅಥವಾ ವಯಸ್ಕರ ಗುಂಪು ಬಳಸಿಕೊಂಡಿದೆಯೇ ಅಥವಾ ಮಗುವನ್ನು ಮಾದಕ ದ್ರವ್ಯದ ಕಳ್ಳಸಾಗಣೆಗೆ ಬಳಸಿಕೊಳ್ಳಲಾಗಿದೆಯೇ:

| ✓ ಹೌದು | ಅಲ್ಲ |
|---|---|

*ಅದಕ್ಕಿಂತ ಭಿನ್ನವಾಗಿ*

ಆಯ್ಕೆ 2

ಇದನ್ನು ಇನ್ನೊಂದು ಬಗೆಯಲ್ಲಿ ಬರೆಯಬಹುದೇ ಎಂದು ನೋಡೋಣ.

39. ಮಗುವನ್ನು ಯಾವುದಾದರೂ ಗ್ಯಾಂಗು ಅಥವಾ ವಯಸ್ಕರು ಅಥವಾ ವಯಸ್ಕರ ಗುಂಪು ಬಳಸಿಕೊಂಡಿದೆಯೇ ಅಥವಾ ಮಗುವನ್ನು ಮಾದಕ ದ್ರವ್ಯದ ಕಳ್ಳಸಾಗಣೆಗೆ ಬಳಸಿಕೊಳ್ಳಲಾಗಿದೆಯೇ:

| ✓ ಹೌದು | ಅಲ್ಲ |
|---|---|

*ಹೌದು. ಮಗು ಮಾದಕ ದ್ರವ್ಯಗಳ ಕಳ್ಳಸಾಗಾಣಿಕೆಯಲ್ಲಿ ಯಾವಾಗಲೂ ತೊಡಗುವುದಿಲ್ಲವಾದರೂ, ಆತನ ಸೋದರಿ ಗಂಭೀರವಾಗಿ ಅಸ್ವಸ್ಥಳಾಗಿದ್ದು, ಆಕೆಯನ್ನು ಒಳ್ಳೆಯ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಾಯಿಯ ಬಳಿ ಹಣವಿಲ್ಲದೇ ಇದ್ದಾಗ, ಮಗು ತನ್ನ ಬಡಾವಣೆಯ ಹಿರಿಯ ಸ್ನೇಹಿತರ ಬಳಿ ಹೋಗಿ ಸ್ವಲ್ಪ ಹಣ ಬೇಕು, ಸಾಲವಾಗಿ ಎಂದು ಕೇಳುತ್ತದೆ; ಅದಕ್ಕುತ್ತರವಾಗಿ ಆ ದೊಡ್ಡ ಹುಡುಗರು ಈ ಮಗುವನ್ನು ಹಣದ ಬದಲಿಗೆ ಮಾದಕ ದ್ರವ್ಯಗಳನ್ನು ಕಳ್ಳಸಾಗಣೆ ಮಾಡಲು ಹೇಳುತ್ತಾರೆ.*

ಇಲ್ಲಿ ನೀಡಿರುವ ವಿವರಣೆಯಿಂದಾಗಿ ಮಗುವಿನ ಸಂಧರ್ಭವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಎಷ್ಟೊಂದು ವ್ಯತ್ಯಾಸವಾಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಆದ್ದರಿಂದ, ನಮೂನೆಯಲ್ಲಿ ಯಾವುದೇ ಪ್ರಶ್ನೆಗೆ ಆಯ್ಕೆ ಮಾಡಿಕೊಂಡಿರುವ ಉತ್ತರಕ್ಕೆ ಒಂದು ವಿವರಣೆಯನ್ನೂ ಬರೆಯಿರಿ.

5. ನಮೂನೆಯಲ್ಲಿ, ನೀವು ಮಾಡಿರುವ ಅವಲೋಕನದ ವಿವರಗಳನ್ನು ಮತ್ತು ವಾಸ್ತವಾಂಶಗಳನ್ನು ಬರೆಯಲು ಬೇಕಾದರೆ ನೀವು ಹೆಚ್ಚುವರಿ ಪುಟಗಳನ್ನು ಲಗತ್ತಿಸಬಹುದು. ಆದರೂ, 'ಮಗು ಸುಧಾರಣೆ ಸಾಧ್ಯವಿಲ್ಲದಷ್ಟು ಕೆಟ್ಟುಹೋಗಿದೆ' ಎನ್ನುವ ರೀತಿಯ ತೀವ್ರವಾದ ಹೇಳಿಕೆಗಳನ್ನು ನೀಡಬೇಡಿ. ಈ ತರಹದ ತೀರ್ಮಾನಗಳು ಕಾರ್ಯಕರ್ತರ ಪರಿಣತಿಯ ವ್ಯಾಪ್ತಿಗಿಂತ ಹೊರಗಿರುತ್ತವೆ.
6. ಎಸ್ಐಆರ್ ಜೊತೆಗೆ ಕೆಲವು ಫೋಟೋಗಳನ್ನೂ ಲಗತ್ತಿಸಬೇಕು. ಇವುಗಳಲ್ಲಿ ಮಗುವಿನ ಪ್ರಸ್ತುತ ಬದುಕಿನ ಸ್ಥಿತಿಗಳು, ಮಗುವಿನ ಬಾಲ್ಯದ ಫೋಟೋಗಳು, ಮಗು ಯಾವುದೋ ಬಹುಮಾನವನ್ನು ಸ್ವೀಕರಿಸುತ್ತಿರುವ ಫೋಟೋ ಇತ್ಯಾದಿ. ಇಂಥ ಚಿತ್ರಗಳು, ಆಪಾದಿತ ಅಪರಾಧದ ಆಚೆ ಅಥವಾ ಒಂದು ಪೋಲೀಸ್ ಸ್ಟೇಷನ್ನಿನಲ್ಲಿನ ಒಂದು ಪ್ರಕರಣ ಸಂಖ್ಯೆಗಿಂತ ಆಚೆ ಮಗುವಿನಲ್ಲಿ ಇರಬಹುದಾದ ಸತ್ವಗಳು, ಕೌಶಲಗಳು, ಸಾಮರ್ಥ್ಯಗಳು ಮತ್ತು ಬೆಳವಣಿಗೆಯ ಸಾಧ್ಯತೆಗಳನ್ನು ಗುರುತಿಸಲು ಜೆಜೆಬಿಗೆ ನೆರವಾಗುತ್ತವೆ.

*ದಯವಿಟ್ಟು ಗಮನಿಸಿ:* ಫೋಟೋವನ್ನು ಕುಟುಂಬದವರಿಂದ ಪಡೆಯುವಾಗ ಅಥವಾ ಅವುಗಳನ್ನು ನಿಮ್ಮ ಕ್ಯಾಮರಾದಿಂದ ನೀವೇ ತೆಗೆದುಕೊಳ್ಳುವಾಗ ಅದಕ್ಕಾಗಿ ಸಂಬಂಧಪಟ್ಟವರ ಅನುಮತಿಯನ್ನು ತೆಗೆದುಕೊಳ್ಳಿ ಮತ್ತು ಆ ಫೋಟೋಗಳನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತದೆ ಎಂಬುದನ್ನು ಅವರಿಗೆ ವಿವರಿಸಿ.

### ಇ. ವರದಿಯನ್ನು ಸಲ್ಲಿಸುವಿಕೆಯ ಪ್ರಕ್ರಿಯೆ

1. ಕಾರ್ಯಕರ್ತರು ಒಂದು ಎನ್‌ಜಿಒನಿಂದ ಬಂದ ಸಮಾಜ ಕಾರ್ಯಕರ್ತರಾಗಿದ್ದರೆ, ಅವರು ವರದಿಯನ್ನು ಪಿಒಅವರಿಗೆ ಸಲ್ಲಿಸಬೇಕು.
2. ಮಗುವಿನ ಸುನಾವಣೆಯ ದಿನದಂದು, ಜೆಜೆಬಿಯು ಕಾರ್ಯಕರ್ತರು ಸಲ್ಲಿಸಿದ ಎಸ್‌ಐಆರ್‌ನ್ನು ಪರಿಗಣಿಸುತ್ತಿರುವಾಗ, ಕೆಲವು ಜೆಜೆಬಿಗಳು ಎಸ್‌ಐಆರ್‌ನ್ನು ತಯಾರಿಸಿದ ಕಾರ್ಯಕರ್ತರು ಅಲ್ಲಿ ಹಾಜರಿರಬೇಕು ಎಂದು ಬಯಸುತ್ತವೆ. ವರದಿಯಲ್ಲಿ ನಮೂದಿಸಲಾದ ಸತ್ಯಾಂಶಗಳ ಸ್ಥಿರೀಕರಣಕ್ಕೆ ಇದು ಅಗತ್ಯ ಎಂದು ಭಾವಿಸಲಾಗುತ್ತದೆ. ಎಸ್‌ಐಆರ್‌ನಲ್ಲಿ ಬರೆದಿರುವುದನ್ನು ಕುಟುಂಬವು ಖಂಡಿತವಾಗಿ ವಿರೋಧಿಸಬಹುದು. ಅದನ್ನು ತಯಾರಿಸಿದ ಪ್ರಕ್ರಿಯೆಯ ಕುರಿತು ಅಥವಾ ವರದಿಯಲ್ಲಿ ಮಾಡಲಾಗಿರುವ ಹೇಳಿಕೆಗಳ ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕುಟುಂಬಕ್ಕೆ ಅವಕಾಶವನ್ನು ನೀಡಲಾಗುವುದು. ಕುಟುಂಬದವರು ಹೀಗೇನಾದರೂ ಆಕ್ಷೇಪವನ್ನು ಎತ್ತಿದರೆ ಅದಕ್ಕೆ ಉತ್ತರಿಸುವಂತೆ ಜೆಜೆಬಿಯು ವರದಿಯನ್ನು ಸಲ್ಲಿಸಿದ ಕಾರ್ಯಕರ್ತರನ್ನು ಕೇಳಬಹುದು.

   ಎಸ್‌ಐಆರ್‌ನಲ್ಲಿರುವ ಸಾಮಗ್ರಿಯನ್ನು ಆಧರಿಸಿ, ಅದರಲ್ಲಿ ಮಾಡಲಾಗಿರುವ ಶಿಫಾರಸ್ಸುಗಳನ್ನು ಒತ್ತಿಹೇಳುತ್ತಾ, ಎಂದರೆ, ಪುನರ್ವಸತಿ ಮತ್ತು ಜಾಮೀನಿಗಾಗಿ ಮಾಡಲಾಗಿರುವ ಶಿಫಾರಸ್ಸುಗಳನ್ನು ಕಾರಣಸಹಿತ ಸಮರ್ಥಿಸಿಕೊಳ್ಳುವುದು, ಮಗು/ಕುಟುಂಬಕ್ಕಾಗಿ ಲಭ್ಯವಾಗುವಂತೆ ಮಾಡಬಹುದಾದ ಕಾರ್ಯಯೋಜನೆಗಳು, ಮಗುವಿಗೆ ಪ್ರಯೋಜನಕಾರಿಯಾಗಬಹುದಾದ ವೃತ್ತಿ ತರಬೇತಿಗಳು ಇತ್ಯಾದಿಗಳ ಕುರಿತು ಜೆಜೆಬಿ ಎದುರು ಮೌಖಿಕ ಸಲ್ಲಿಕೆಗಳನ್ನು ಮಾಡಲು ಪಿಒ ಸಿದ್ಧರಿರಬೇಕು.


   ಆದ್ದರಿಂದ, ಎಸ್‌ಐಆರ್‌ನ್ನು *ಸಲ್ಲಿಕೆ* ಮಾಡುವಷ್ಟೇ ಸಾಮಾಜಿಕ ತನಿಖೆಯನ್ನು ನಡೆಸುವ, ನಂತರ ಅದರ ಕುರಿತು *ವರದಿಯನ್ನು ತಯಾರಿಸುವ ಪ್ರಕ್ರಿಯೆಯೂ ಮುಖ್ಯ* ಎಂಬುದು ಇಲ್ಲಿ ಗೊತ್ತಾಗುತ್ತದೆ.

> ಒಂದು ಉದಾಹರಣೆಯಾಗಿ, ಮಂಗಳವಾರ ಬೆಳಗ್ಗೆ 7 ಗಂಟೆಗೆ ವಶಕ್ಕೆ ಪಡೆದ ತೇಜಸ್‌ನ ಕುರಿತು ಎಸ್‌ಐಆರ್‌ನ್ನು ತಯಾರಿಸಲು ಬೇಕಾಗಬಹುದಾದ ಸಮಯದ ಒಂದು ಮಾದರಿ ಚಿತ್ರಣ ಇಲ್ಲಿದೆ.
>
> ಮಂಗಳವಾರ ಬೆಳಗ್ಗೆ 7 ಗಂಟೆ– ತೇಜಸ್‌ನನ್ನು ಒಎಚ್‌ಗೆ ಸೇರಿಸುವುದು
> ಮಂಗಳವಾರ ಬೆಳಗ್ಗೆ 11 ಗಂಟೆ– ತೇಜಸ್‌ನನ್ನು ಮೊದಲ ಸಲ ಜೆಜೆಬಿ ಎದುರು ಹಾಜರುಪಡಿಸುವುದು
> ಮಂಗಳವಾರ ಮಧ್ಯಾಹ್ನ 12 ಗಂಟೆ– ತೇಜಸ್‌ನ ಎಫ್‌ಐಆರ್ ಮತ್ತು ಎಸ್‌ಬಿಆರ್ ಇವುಗಳನ್ನು ಓದುವುದು
> ಮಂಗಳವಾರ ಮಧ್ಯಾಹ್ನ 2 ಗಂಟೆ– ತೇಜಸ್‌ನೊಂದಿಗೆ ಮಾತಾಡಿ ಆತ್ಮೀಯತೆಯನ್ನು ಬೆಳೆಸಿಕೊಳ್ಳುವುದು
> ಬುಧವಾರ ಬೆಳಗ್ಗೆ 11 ಗಂಟೆ– ಎಸ್‌ಐಆರ್‌ಗಾಗಿ ತೇಜಸ್‌ನೊಂದಿಗೆ ಸಂದರ್ಶನ ಮಾಡುವುದು
> ಬುಧವಾರ ಮಧ್ಯಾಹ್ನ 2 ಗಂಟೆ– ತೇಜಸ್‌ನ ಕುಟುಂಬದೊಂದಿಗೆ ಮಾತಾಡುವುದು
> ಬುಧವಾರ ಮಧ್ಯಾಹ್ನ 3 ಗಂಟೆ– ಮನೆ ಭೇಟಿಗಾಗಿ ಸಿದ್ಧತೆಯ ಆರಂಭ
> ಗುರುವಾರ ಬೆಳಗ್ಗೆ 10 ಗಂಟೆ– ಮನೆ ಭೇಟಿ
> ಗುರುವಾರ ಮಧ್ಯಾಹ್ನ 3–4/ ಶುಕ್ರವಾರ ಬೆಳಗ್ಗೆ 10 ಗಂಟೆ– ತೇಜಸ್‌ನೊಂದಿಗೆ ಎರಡನೆ ಸಂದರ್ಶನ
> ಶುಕ್ರವಾರ ಮಧ್ಯಾಹ್ನ 12 ಗಂಟೆ– ದತ್ತಾಂಶಗಳ ವಿಶ್ಲೇಷಣೆ ಮತ್ತು ವರದಿಯ ಸಿದ್ಧತೆ
> ಶುಕ್ರವಾರ ಮಧ್ಯಾಹ್ನ 3 ಗಂಟೆ/ಸೋಮವಾರ ಬೆಳಗ್ಗೆ 10 ಗಂಟೆ– ತೇಜಸ್‌ನ ಎಸ್‌ಐಆರ್ ಸಲ್ಲಿಕೆ

> (ಮಗು ಅಥವಾ ಕುಟುಂಬದೊಂದಿಗೆ ನಡೆಸುವ) ಸಂದರ್ಶನದ ವೇಳೆಯಲ್ಲಿ, ಕಾರ್ಯಕರ್ತರು ಮಗುವಿನಲ್ಲಿ ಆತ್ಮಹತ್ಯಾ ಪ್ರವೃತ್ತಿಗಳು, ಸ್ವನಿಂದನೆ, ದೂಷಣೆ, ಸ್ವಹಾನಿಯಂಥ ಚಿಹ್ನೆಗಳನ್ನು ಗಮನಿಸಿದರೆ, ಅದನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ(ಡಿಸಿಪಿಒ)ಅವರಿಗೆ ವರದಿ ಮಾಡುವುದು ಬಹಳ ಮುಖ್ಯ.

## ಅಧ್ಯಾಯ 6

# ನಮೂನೆ 6ರ ಅಧ್ಯಯನ ಯಾತ್ರೆ




ಎ.

**ಈ ಪ್ರಶ್ನೆ ಈ ನಮೂನೆಯಲ್ಲಿ ಏಕೆ ಇದೆ?** – ನಮೂನೆಯಲ್ಲಿರುವ ಪ್ರಶ್ನೆಯ ಉದ್ದೇಶ ಮತ್ತು ಜೆಜೆಬಿಗೆ ನೆರವಾಗುವುದರಲ್ಲಿ ಅದರ ಮಹತ್ವ

ಬಿ.

**ಈ ಪ್ರಶ್ನೆಯ ಅರ್ಥವೇನು?** – ಈ ಒಂದು ಪ್ರಶ್ನೆಯು ಒಳಗೊಂಡಿರುವ ವಿಭಿನ್ನ ಅಂಶಗಳ ವಿವರಿಸಿದ ಆವೃತ್ತಿ

ಸಿ.

**ನನಗೆ ಈ ಮಾಹಿತಿ ಹೇಗೆ ಸಿಗುತ್ತದೆ?** – ಈ ಪ್ರಶ್ನೆಗೆ ಉತ್ತರವನ್ನು ದಾಖಲಿಸಲು ಯಾರನ್ನು ಸಂಪರ್ಕಿಸಬೇಕು–ಮಗು, ಕುಟುಂಬ, ನೆರೆಹೊರೆ, ಶಾಲೆ ಅಥವಾ ಉದ್ಯೋಗದಾತರು. ಪ್ರಶ್ನೆಯ ಉದ್ದೇಶವನ್ನು ಅನುಸರಿಸಿ ಇದು ಬೇರೆಯಾಗುತ್ತದೆ.

ಈ ಅಧ್ಯಾಯದಲ್ಲಿ ಒಂದೊಂದೇ ಪ್ರಶ್ನೆಯ ಸ್ವಭಾವ, ಮಹತ್ವವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವಾಗ ಅದು ಸರಿಯಾಗಿ ಯಾವ ವರ್ಗದಲ್ಲಿ ಬರುತ್ತದೆ ಎಂಬುದನ್ನೂ ಸೂಚಿಸಲಾಗಿದೆ. ಹೀಗೆ ಮಾಡುವ ಮೂಲಕ, ಕೈಪಿಡಿಯು ಪ್ರತಿಯೊಂದು ಪ್ರಶ್ನೆಯ ವಿಶಾಲವಾದ ಉದ್ದೇಶವನ್ನು ಗುರುತಿಸಲು, ಆ ಮೂಲಕ ಇಡೀ ನಮೂನೆಯ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಕಾರ್ಯಕರ್ತರಿಗೆ ನೆರವಾಗುತ್ತದೆ.

**ನಮೂನೆ 6**

**[ನಿಯಮ 10(9), 11(2), 59(3)(ಎ)]**

**ಸಾಮಾಜಿಕ ತನಿಖಾ ವರದಿ (ಎಸ್ಐಆರ್)**

**ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗಾಗಿ**

ಕ್ರಮ ಸಂಖ್ಯೆ: . ..................................

ಮಕ್ಕಳ ನ್ಯಾಯ ಮಂಡಳಿಗೆ ಸಲ್ಲಿಸಲಾಗಿದೆ....................................... (ವಿಳಾಸ)

ಪ್ರೊಬೇಷನ್ ಅಧಿಕಾರಿ/ಸ್ವಯಂ ಸೇವಾ ಸಂಸ್ಥೆ/ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ......................... (ಹೆಸರು)

ಎಫ್.ಐ.ಆರ್ ಸಂಖ್ಯೆ: .......................................

ಯಾವ ಕಲಂಗಳ ಅಡಿಯಲ್ಲಿ: .......................................

ಪೊಲೀಸ್ ಠಾಣೆ: .......................................

ಆಪಾದಿಸಲಾದ ದೂರಿನ ಸ್ವರೂಪ: ಲಘು______ ಗಂಭೀರ ______ ಘೋರ ______

1. ಹೆಸರು: .......................................
2. ವಯಸ್ಸು/ದಿನಾಂಕ/ಹುಟ್ಟಿದ ವರ್ಷ: .......................................
3. ಲಿಂಗ: .......................................
4. ಜಾತಿ: .......................................
5. ಧರ್ಮ: .......................................
6. ತಂದೆಯ ಹೆಸರು: ....................................
7. ತಾಯಿಯ ಹೆಸರು: ....................................
8. ಪೋಷಕರ ಹೆಸರು (guardian): ....................................
9. ಖಾಯಂ ವಿಳಾಸ: ....................................
10. ವಿಳಾಸದ ಹೆಗ್ಗುರುತು (landmark): ....................................
11. ಕೊನೆಯ ವಾಸ್ತವ್ಯದ ವಿಳಾಸ: ....................................
12. ತಂದೆಯ/ತಾಯಿಯ/ಕುಟುಂಬದ ಸದಸ್ಯರ ಸಂಪರ್ಕ ಸಂಖ್ಯೆ: ....................................

- ಶೀರ್ಷಿಕೆಯು ನಮೂನೆಯ ವಿವರವನ್ನು ನೀಡುತ್ತದೆ, ಎಂದರೆ, ನಮೂನೆಯ ಸಂಖ್ಯೆ ಮತ್ತು ಯಾವ ನಿಮಯಗಳ ಅಡಿಯಲ್ಲಿ ಈ ನಮೂನೆಯ ಬಳಕೆಯನ್ನು ನಿಗದಿಪಡಿಸಲಾಗಿದೆ. ಈ ನಮೂನೆಯನ್ನು ಕೇವಲ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಾಮಾಜಿಕ ತನಿಖಾ ವರದಿಗಾಗಿ ಮಾತ್ರ ಬಳಸಬೇಕು, ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಅಲ್ಲ ಎಂಬುದನ್ನು ಕಾರ್ಯಕರ್ತರು ಗಮನಿಸಬೇಕು.
- ಕ್ರ.ಸಂ........... ಸಾಮಾನ್ಯವಾಗಿ ಇದು ಈ ಒಂದು ಎಸ್ಐಆರ್‌ಗೆ ಪಿಒ ನೀಡಿದ ಕ್ರಮಸಂಖ್ಯೆಯಾಗಿರುತ್ತದೆ. ಆದರೂ, ಎಫ್ಐಆರ್‌ನ್ನು ದಾಖಲಿಸುವಾಗ ಪೊಲೀಸರಿಂದ ಪ್ರಕರಣಕ್ಕೆ ನೀಡಲ್ಪಟ್ಟ ಅಪರಾಧ ಸಂಖ್ಯೆಯನ್ನು ಇಲ್ಲಿ ಬರೆಯುವುದು ವಾಡಿಕೆ. ಪಿಒ ಅಥವಾ ಎಸ್ಐಆರ್‌ನ್ನು ತಯಾರಿಸುವ ಸಮಾಜ ಕಾರ್ಯಕರ್ತರು ಇದನ್ನು ತುಂಬಬೇಕು.
- ಮಕ್ಕಳ ನ್ಯಾಯ ಮಂಡಳಿಗೆ ಸಲ್ಲಿಸಲಾಗಿದೆ...... ಕಾರ್ಯಕರ್ತರು ಜೆಜೆಬಿಯ ವಿವರಗಳನ್ನು ಇಲ್ಲಿ ನಮೂದಿಸಬೇಕು.
- ಪ್ರೊಬೇಷನ್ ಅಧಿಕಾರಿ...... ಕಾರ್ಯಕರ್ತರ ಹೆಸರನ್ನು ಇಲ್ಲಿ ಬರೆಯಬೇಕು. ಕಾರ್ಯಕರ್ತರು ಒಂದು ಎನ್‌ಜಿಒ/ಸ್ವಯಂಸೇವಾ ಸಂಸ್ಥೆಯಿಂದ ಬಂದವರಾದರೆ, ಸ್ಪಷ್ಟತೆಗಾಗಿ ಅದನ್ನೂ ಇಲ್ಲಿ ನಮೂದಿಸಬೇಕು.
- ಎಫ್ಐಆರ್ ಸಂ....... ಮೊದಲ ಮಾಹಿತಿ ವರದಿ (ಎಫ್ಐಆರ್) ಸಂಖ್ಯೆಯನ್ನು ಎಸ್‌ಜೆಪಿಯು ಫೈಲು ಮಾಡಿದ ಸಾಮಾಜಿಕ ಹಿನ್ನೆಲೆ (ಎಸ್‌ಬಿಆರ್) ವರದಿಯಿಂದ ತೆಗೆದುಕೊಳ್ಳಬೇಕು. ಕೆಲವು ಪ್ರಕರಣಗಳಲ್ಲಿ ಎಫ್ಐಆರ್ ಸಂಖ್ಯೆ ಇರುವುದಿಲ್ಲ ಎಂಬುದನ್ನು ನೀವು ಗಮನಿಸುತ್ತೀರಿ ಬದಲಿಗೆ ಡಿಡಿ ಸಂಖ್ಯೆ ಎಂದಿರುತ್ತದೆ. ಇವೆರಡರ ನಡುವಿನ ವ್ಯತ್ಯಾಸವೇನು?
  ಡಿಡಿ ಸಂಖ್ಯೆಯು ಡೇಲಿ ಡೈರಿ ಎಂಟ್ರಿ ಸಂಖ್ಯೆಯನ್ನು ಸ್ರಚಿಸುತ್ತದೆ. ಡೇಲಿ ಡೈರಿ ಎಂಬುದು, ಎಫ್ಐಆರ್‌ನ್ನು ಫೈಲು ಮಾಡುವ ಮುಂಚೆ, ದೈನಂದಿನ ಆಧಾರದ ಮೇಲೆ ಅವರು ಸ್ವೀಕರಿಸುವ ಮತ್ತು ದಾಖಲಿಸುವ ದೂರುಗಳಿಗಾಗಿ ಪೊಲೀಸರು ಇಡುವ ಒಂದು ದಾಖಲೆಯಾಗಿದೆ.

*ಜೆಜೆ ನಿಯಮಗಳು, 2016ರ ನಿಯಮ 8(1)ರ ಪ್ರಕಾರ ಲಘುವಾದ ಮತ್ತು ಗಂಭೀರವಾದ ಸ್ವಭಾವದ ಅಪರಾಧಗಳಿಗಾಗಿ ಪೊಲೀಸರು ಎಫ್‌ಐಆರ್‌ನ್ನು ದಾಖಲಿಸುವುದಿಲ್ಲ. ಎಫ್‌ಐಆರ್‌ನ್ನು ಘೋರವಾದ ಅಪರಾಧಗಳ ಸಂದರ್ಭದಲ್ಲಿ ಮಾತ್ರ ದಾಖಲಿಸಲಾಗುವುದು. ಯಾವ ಅಪರಾಧಗಳು, ಲಘು, ಗಂಭೀರ ಅಥವಾ ಘೋರ ವರ್ಗಗಳಲ್ಲಿ ಪರಿಗಣಿತವಾಗುತ್ತವೆ ಎಂಬುದರ ಕುರಿತು ಹೆಚ್ಚು ತಿಳಿಯಲು ಜೆಜೆ ಕಾಯ್ದೆಯ ಸೆಕ್ಷನ್ 2(45), (54), (33) ನೋಡಿ.*

- ಪೊಲೀಸ್ ಸ್ಟೇಷನ್....... ಕಾರ್ಯಕರ್ತರಿಗೆ ಮಾಹಿತಿಯು ಎಸ್‌ಜೆಪಿಯು ಸಲ್ಲಿಸಿದ ಸಾಮಾಜಿಕ ಹಿನ್ನೆಲೆ (ಎಸ್‌ಬಿಆರ್) ವರದಿಯಿಂದ ದೊರೆಯುತ್ತದೆ. ಇದನ್ನು **'ಪಿಎಸ್'** (ಪೊಲೀಸ್ ಸ್ಟೇಷನ್) ಎಂದು ಸೂಚಿಸಬೇಕು. ಉದಾಹರಣೆಗೆ ಪಿಎಸ್ ಆಡುಗೋಡಿ, ಪಿಎಸ್ ಕೊಡಿಗೇಹಳ್ಳಿ ಇತ್ಯಾದಿ. (ಆದರೂ, ಹಲವು ಸಲ, ಎಸ್‌ಬಿಆರ್ ಲಭ್ಯವಿಲ್ಲದೇ ಇರಬಹುದು ಅಥವಾ ಪೂರ್ಣವಾಗಿರದೇ ಇರಬಹುದು.)

**ಮಗುವಿನ ಜೀವನ ವಿವರಗಳು (ಪ್ರಶ್ನೆ 1–13)**

- ಪ್ರಶ್ನೆ 1–13, ಮಗುವಿನ ಸಾಮಾನ್ಯ ಜೀವನ ವಿವರಗಳಿಗಾಗಿ ಕೇಳಲಾಗುತ್ತದೆ. ಇದನ್ನು ಮಗುವನ್ನು ಸಂದರ್ಶನ ಮಾಡಿದ ನಂತರ, ಮತ್ತು ಮನೆ ಭೇಟಿ ಮುಗಿಸಿದ ನಂತರ ತುಂಬಬೇಕು. ಎಸ್‌ಐಆರ್‌ನ್ನು ಸಲ್ಲಿಸುವಾಗ ನೀವು ಇಲ್ಲಿ ನಮೂದಿಸಬೇಕಾದ ಮಾಹಿತಿಗಾಗಿ ಯಾವುದೇ ಪುರಾವೆಗಳನ್ನು ಕೇಳಬೇಕಾಗಿಲ್ಲ ಎಂಬುದನ್ನು ನೆನಪಿರಲಿ. ಉದಾಹರಣೆಗೆ, ಮಗು ತನಗೆ 17 ವರ್ಷವಾಗಿದೆ ಎಂದು ಹೇಳಿದರೆ, ಅದು ನಿಜವಲ್ಲ ಎಂದು ನಂಬಲು ಬೇರೇ ಕಾರಣಗಳು ಇಲ್ಲದೇ ಇದ್ದಲ್ಲಿ ಕಾರ್ಯಕರ್ತರು ಅದನ್ನೇ ವರದಿಯಲ್ಲಿ ತುಂಬಬೇಕು.
- ಮಗುವಿನ ಲಿಂಗದ ಕುರಿತ ಕಲಮನ್ನು ತುಂಬುವಾಗ, ವಯಸ್ಕರ ಹಾಗೆಯೇ ಮಗುವೂ **ವಿವಿಧ ಲಿಂಗತ್ವ ಗುರುತುಗಳನ್ನು** ಹೊಂದಿರಬಹುದು, ಮತ್ತು ಹೊಂದಿರುತ್ತದೆ ಎಂಬುದು ಕಾರ್ಯಕರ್ತರಿಗೆ ಗೊತ್ತಿರುವುದು ಬಹಳ ಮುಖ್ಯ. **ಮಗುವಿನ ಲಿಂಗವನ್ನು ನೀವೇ ಊಹಿಸಿಕೊಳ್ಳದೇ, ಆ ಕುರಿತು ಮಗುವೇ ಅದನ್ನು ಅಭಿವ್ಯಕ್ತಿಸಲು ಅವಕಾಶ ಮಾಡಿಕೊಡಿ.** ಈ ಕುರಿತು ಮಗುವಿಗೆ ಬೆಂಬಲದ ಅಗತ್ಯವಿದೆ ಎಂದು ಕಾರ್ಯಕರ್ತರಿಗೆ ಅನ್ನಿಸಿದರೆ, ಈ ಕುರಿತು ಒಬ್ಬ **ಆಪ್ತ ಸಮಾಲೋಚಕರ ಅಗತ್ಯ ಇರುವುದನ್ನು ಎಸ್‌ಐಆರ್‌ನಲ್ಲಿ** ನಮೂದಿಸುವುದು ಮುಖ್ಯ.
- ವಿವಿಧ ಹಕ್ಕುಗಳು, ಸಂಪನ್ಮೂಲಗಳು ಮತ್ತು ಅವಕಾಶಗಳ ಲಭ್ಯತೆಯ ಮೇಲೆ ಮಕ್ಕಳು ಮತ್ತು ಕುಟುಂಬದ ಜಾತಿಯ ಪ್ರಭಾವ ಮಹತ್ವದ್ದಾಗಿರುತ್ತದೆ. ಉದಾಹರಣೆಗೆ, ಮಾದಿಗ ಸಮುದಾಯದ ಮಗುವು, ಜಾತಿ ಆಧಾರದ ಮೇಲೆ ತಾರತಮ್ಯದ ಕಾರಣದಿಂದ ಉಂಟಾದ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಗಾಗಿ ಶಿಕ್ಷಣವನ್ನು ನಿಲ್ಲಿಸಿರುವ ಹೆಚ್ಚು ಸಾಧ್ಯತೆ ಇರುತ್ತದೆ. ಒಂದು ಮಗುವನ್ನು ಅರ್ಥ ಮಾಡಿಕೊಳ್ಳಲು, ಅದರ ಅತ್ಯುತ್ತಮ ಹಿತಾಸಕ್ತಿ ಯಾವುದು ಎಂಬುದನ್ನು ನಿರ್ಧರಿಸಲು ಕಾರ್ಯಕರ್ತರು ನಿರೂಪಣೆಯಲ್ಲಿ ಸೇರಿಸಬಹುದಾದ ಮುಖ್ಯವಾದ ವಿಶ್ಲೇಷಣಾ ಅಂಶಗಳಾಗಿವೆ.
- ತಾವು ಹುಟ್ಟಿರುವ ಜಾತಿ ಯಾವುದು ಎಂದು ಕೆಲವೊಮ್ಮೆ ಮಕ್ಕಳಿಗೆ ಸ್ಪಷ್ಟವಾಗಿ ಗೊತ್ತಿರದೇ ಇರುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಸಾಮಾಜಿಕ ತನಿಖೆಯನ್ನು ಮಾಡುವ ಕಾರ್ಯಕರ್ತರಿಗೆ ಮಗುವಿನ ಸಮುದಾಯದ ಜಾತಿ ವ್ಯವಸ್ಥೆಯ ಕುರಿತು ಪೂರ್ವಭಾವಿ ಮಾಹಿತಿ ಇರುವುದು ಸಹಕಾರಿಯಾಗುತ್ತದೆ.
- ಪ್ರಶ್ನೆ 5–12, ಮಗುವಿನ ಸಂದರ್ಶನದ ಮೂಲಕ ಮತ್ತು ಮನೆ ಭೇಟಿಯ ನಂತರ ಉತ್ತರಿಸಬಹುದು.

## ಪ್ರಶ್ನೆ 13

13. ಮಗುವು ವಿಭಿನ್ನ ಸಾಮರ್ಥ್ಯವುಳ್ಳ ಮಗುವೇ: ಹೌದು/ಇಲ್ಲ

(i) ಶ್ರವಣದೋಷ

(ii) ಮಾತಿನ ದೋಷ

(iii) ದೈಹಿಕವಾಗಿ ಅಸಮರ್ಥರು

(iv) ಮಾನಸಿಕವಾಗಿ ಅಸಮರ್ಥರು

(v) ಇತರೆ (ದಯವಿಟ್ಟು ನಿರ್ದಿಷ್ಟವಾಗಿ ಬರೆಯಿರಿ)

ಇದು ಉತ್ತರಿಸಲು ಕಷ್ಟಕರವಾದ ಪ್ರಶ್ನೆಯಾಗಿದೆ, ಏಕೆಂದರೆ, ಇದಕ್ಕಾಗಿ ಕಾರ್ಯಕರ್ತರು ಸೂಕ್ಷ್ಮ ಅವಲೋಕನ ಮತ್ತು ಆಘಾತದ ಕುರಿತು ಅರಿವು ಇರುವ ವಿಧಾನವನ್ನು ಬಳಸುವ ಅಗತ್ಯವಿರುತ್ತದೆ. ಇದನ್ನು ತಿಳಿದುಕೊಳ್ಳಲು ಇರುವ ಒಂದು ವಿಧಾನವೆಂದರೆ, ಮಗುವಿನ ಆರೋಗ್ಯದ ಇತಿಹಾಸದ ಕುರಿತು ತಂದೆತಾಯಿ/ಶಿಕ್ಷಕರನ್ನು ಕೇಳುವುದಾಗಿದೆ. ಮಗು ಬಾಲ್ಯದಲ್ಲಿ ಅನುಭವಿಸಿರಬಹುದಾದ

ವಿಶಿಷ್ಟ ಕಾಯಿಲೆಗಳ ಕುರಿತು ವಿಚಾರ ಮಾಡುವ ಮೂಲಕ ಇದನ್ನು ತಿಳಿಯಬಹುದು. ಈ ಹಿಂದೆ ಮಗುವನ್ನು ಡಾಕ್ಟರ್ ಬಳಿ ಕರೆದುಕೊಂಡು ಹೋಗಿದ್ದರೇ, ಹೋಗಿದ್ದರೆ ಕಾರಣವೇನು, ಡಾಕ್ಟರ್ ಏನು ಹೇಳಿದರು, ಏನಾದರೂ ಶಸ್ತ್ರಚಿಕಿತ್ಸೆಯಾಗಿದೆಯೇ, ಆಸ್ಪತ್ರೆಗೆ ಸೇರಿಸಿದ್ದ ಉದಾಹರಣೆಗಳು ಇವೆಯೇ– ಇತ್ಯಾದಿ. ಈ ತರಹದ ಪ್ರಶ್ನೆಗಳನ್ನು ಕೇಳಿದಾಗ ತಂದೆತಾಯಿಯರಿಗೆ ಮಗುವಿನ ದೈಹಿಕ ಅಥವಾ ನರಸಂಬಂಧಿ ಬೆಳವಣಿಗೆಯ ಸಮಸ್ಯೆಗಳಿದ್ದರೆ ಅವುಗಳ ಕುರಿತು ಮಾತಾಡಲು ಸುಲಭವಾಗುತ್ತದೆ. ತಂದೆತಾಯಂದಿರ ಪ್ರತಿಕ್ರಿಯೆಗಳನ್ನು ಆಧರಿಸಿ, ಕಾರ್ಯಕರ್ತರು ಅವರ ಬಳಿ ಮಗುವಿನ ಅಸಾಮರ್ಥ್ಯದ ಪ್ರಮಾಣಪತ್ರ ಇದೆಯೇ ಅಥವಾ ಅಸಾಮರ್ಥ್ಯ ಕಾರ್ಡು ಇದೆಯೇ ಎಂದು ಕೇಳಬಹುದು.

ಮಗು/ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ದೋಷ/ಅಸಾಮರ್ಥ್ಯ ಇರುವ ಸಾಧ್ಯತೆಯೂ ಇರುತ್ತದೆ ಎನ್ನುವುದನ್ನು ಕಾರ್ಯಕರ್ತರು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು.

### ಮಗುವಿನ ಕೌಟುಂಬಿಕ ಸಂಬಂಧಗಳು (ಪ್ರಶ್ನೆ 14–17)

14. **ಕುಟುಂಬದ ವಿವರ:**

| ಕ್ರ. ಸಂ (1) | ಹೆಸರು ಮತ್ತು ಸಂಬಂಧ (2) | ವಯಸ್ಸು (3) | ಲಿಂಗ (4) | ಶಿಕ್ಷಣ (5) | ಉದ್ಯೋಗ (6) | ಆದಾಯ (7) | ಆರೋಗ್ಯದ ಸ್ಥಿತಿ (8) | ಮಾನಸಿಕ ಅಸ್ವಸ್ಥತೆಯ ಇತಿಹಾಸ (ಇದ್ದರೆ) (9) | ಚಟಗಳು (ಇದ್ದರೆ) (10) |
|---|---|---|---|---|---|---|---|---|---|
| | | | | | | | | | |

15. ಒಂದು ವೇಳೆ ಮಗು ಅಥವಾ ವ್ಯಕ್ತಿಯು ಮದುವೆಯಾಗಿದ್ದಲ್ಲಿ, ಸಂಗಾತಿಯ ಮತ್ತು ಮಕ್ಕಳ ಹೆಸರು ವಯಸ್ಸು ಮತ್ತು ವಿವರಗಳು: ..............................................................................................................

16. ಕುಟುಂಬದ ಸದಸ್ಯರ ನಡುವಿನ ಸಂಬಂಧ:

| | | |
|---|---|---|
| 1. ತಂದೆ ಮತ್ತು ತಾಯಿ | ಆತ್ಮೀಯ/ಆತ್ಮೀಯವಲ್ಲದ/ತಿಳಿದಿಲ್ಲ | ಆತ್ಮೀಯ/ಆತ್ಮೀಯವಲ್ಲದ –ಇದಕ್ಕೆ ಆಧಾರ ಸಹಿತ ಬರೆಯಬೇಕು. ಸುಮ್ಮನೆ ಟಿಕ್ ಮಾಡುವುದಲ್ಲ.<br><br>ತಿಳಿದಿಲ್ಲ ಎಂದರೆ, ಏಕೆ ಎಂಬ ಕಾರಣ ಬರೆಯಬೇಕು. |
| 2. ತಂದೆ ಮತ್ತು ಮಗು | ಆತ್ಮೀಯ/ಆತ್ಮೀಯವಲ್ಲದ/ತಿಳಿದಿಲ್ಲ | |
| 3. ತಾಯಿ ಮತ್ತು ಮಗು | ಆತ್ಮೀಯ/ಆತ್ಮೀಯವಲ್ಲದ/ತಿಳಿದಿಲ್ಲ | |
| 4. ತಂದೆ ಮತ್ತು ಒಡಹುಟ್ಟಿದವರು | ಆತ್ಮೀಯ/ಆತ್ಮೀಯವಲ್ಲದ/ತಿಳಿದಿಲ್ಲ | |
| 5. ತಾಯಿ ಮತ್ತು ಒಡಹುಟ್ಟಿದವರು | ಆತ್ಮೀಯ/ಆತ್ಮೀಯವಲ್ಲದ/ತಿಳಿದಿಲ್ಲ | |
| 6. ಮಗು ಮತ್ತು ಒಡಹುಟ್ಟಿದವರು | ಆತ್ಮೀಯ/ಆತ್ಮೀಯವಲ್ಲದ/ತಿಳಿದಿಲ್ಲ | |
| 7. ಮಗು ಮತ್ತು ಅಜ್ಜಿ ಆಜ್ಜಂದಿರು (ತಂದೆ ಮತ್ತು ತಾಯಿಯ ಪೋಷಕರು) | ಆತ್ಮೀಯ/ಆತ್ಮೀಯವಲ್ಲದ/ತಿಳಿದಿಲ್ಲ | |

**17. ಕುಟುಂಬದ ಸದಸ್ಯರು ಅಪರಾಧಿಕ ಕೃತ್ಯಗಳಲ್ಲಿ ಭಾಗಿಯಾದ ಹಿನ್ನೆಲೆ, ಯಾವುದಾದರೂ ಇದ್ದಲ್ಲಿ:**

| ಕ್ರ. ಸಂ | ಸಂಬಂಧ | ಅಪರಾಧದ ಸ್ವರೂಪ | ಪ್ರಕರಣದ ಕಾನೂನು ಸ್ಥಿತಿ | ಬಂಧಿಸಲಾಗಿತ್ತೇ | ಸೆರೆವಾಸದ ಅವಧಿ | ವಿಧಿಸಲಾದ ಶಿಕ್ಷೆ |
|---|---|---|---|---|---|---|
| 1 | ತಂದೆ | | | | | |
| 2 | ಮಲತಂದೆ | | | | | |
| 3 | ತಾಯಿ | | | | | |
| 4 | ಮಲತಾಯಿ | | | | | |
| 5 | ಸಹೋದರ | | | | | |
| 6 | ಸಹೋದರಿ | | | | | |
| 7 | ಇತರೆ (ಅಂಕಲ್/ಆಂಟಿ/ಅಜ್ಜ/ಅಜ್ಜಿ) | | | | | |

## ಪ್ರಶ್ನೆ 14

### ಈ ಪ್ರಶ್ನೆ ಏಕೆ?

ಮಕ್ಕಳ ಬೆಳವಣಿಗೆಯ ಹಂತದಲ್ಲಿ ಅವರ ನಂಬಿಕೆಗಳು, ಆಯ್ಕೆಗಳು ಮತ್ತು ಗ್ರಹಿಕೆಗಳ ಹಾದಿಗಳನ್ನು ನಿರೂಪಿಸುವಲ್ಲಿ ಕುಟುಂಬ ಬಹಳ ಸಮಗ್ರವಾಗಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ವಿಭಾಗದಲ್ಲಿರುವ ಪ್ರಶ್ನೆಗಳು ಕುಟುಂಬದ ಸದಸ್ಯರದ ನಡುವೆ, ಹಾಗೂ ಈ ಸದಸ್ಯರು ಮತ್ತು ಮಗುವಿನ ನಡುವೆ ಸಂಬಂಧವು ಯಾವ ತರಹ ಇತ್ತು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಜೆಜೆಬಿಗೆ ನೆರವಾಗುತ್ತದೆ.

### ಇದರ ಅರ್ಥವೇನು?

ಕಾಲಮ್ ಸಂಖ್ಯೆ (1)ರಿಂದ (7) ಸ್ವಯಂ ವಿವರಣಾತ್ಮಕವಾಗಿವೆ, ನಾವು ಇಲ್ಲಿ ಕಾಲಮ್ (8) ಮತ್ತು (9)ಗಳನ್ನು ಅರ್ಥ ಮಾಡಿಕೊಳ್ಳೋಣ.

'ಆರೋಗ್ಯದ ಸ್ಥಿತಿ'ಯ ಕುರಿತು ಕಾಲಮ್ (8)ರಲ್ಲಿ ಕಾರ್ಯಕರ್ತರು ಕುಟುಂಬದ ಸದಸ್ಯರು/ಪೋಷಕರು ದೈಹಿಕವಾಗಿ ಆರೋಗ್ಯವಾಗಿದ್ದಾರೆಯೇ ಎಂಬುದನ್ನು ಹೇಳಬೇಕಾಗುತ್ತದೆ. ಅವರಿಗೆ ಸಕ್ಕರೆ ಕಾಯಿಲೆ, ಎಚ್‌ಐವಿ ಪಾಸಿಟಿವ್, ರಕ್ತದೊತ್ತಡ ಇತ್ಯಾದಿಗಳಿದ್ದರೂ ಇಲ್ಲಿ ಸೂಚಿಸಬೇಕು.

ಇದಲ್ಲದೆ, (ಸಂದರ್ಶನದ ವೇಳೆಯಲ್ಲಿ ಅವರು ಎದುರಿಗಿದ್ದರೆ) ಅವರು ದೈಹಿಕವಾಗಿ ಹೇಗೆ ಕಾಣುತ್ತಾರೆ ಎಂಬುದನ್ನೂ ಕಾರ್ಯಕರ್ತರು ಗಮನಿಸಬೇಕು, ಎಂದರೆ ಅವರು ಸದೃಢರಾಗಿ ಕಾಣುತ್ತಿದ್ದಾರೆಯೇ ಅಥವಾ ದುರ್ಬಲರಾಗಿ ಕಾಣುತ್ತಿದ್ದಾರೆಯೇ ಎನ್ನುವುದು.

ಕಾಲಮು (9), ನಮೂದಿಸಬಹುದಾದ ಕೆಲವು ಮಾನಸಿಕ ಅಸ್ವಸ್ಥತೆಗಳು ಹೀಗಿವೆ:

- ತಮಗೆ ತಾವೇ ದೈಹಿಕವಾಗಿ ಹಾನಿ ಮಾಡಿಕೊಳ್ಳುವ, ಆತ್ಮಹತ್ಯೆ ಮಾಡಿಕೊಳ್ಳುವ ಪ್ರವೃತ್ತಿಗಳನ್ನು ತೋರಿದ ಘಟನೆಗಳು,
- ಹಸಿವೆ ಆಗುವುದರಲ್ಲಿ ಏನಾದರೂ ಬದಲಾವಣೆ,
- ವಿಶೇಷ ದಣಿವು.
- ಇದ್ದಕ್ಕಿದ್ದ ಹಾಗೆ ಕೋಪ ಅಥವಾ ಹಿಂಸೆಯ ಆಸ್ಫೋಟ,
- ಮನಸ್ಥಿತಿಯ ಏರುಪೇರು.

### ಹೇಗೆ ಮತ್ತು ಯಾರನ್ನು ಕೇಳುವುದು?

ಮನೆ ಭೇಟಿಯ ಸಂದರ್ಭದಲ್ಲಿ, ಕುಟುಂಬ/ಪೋಷಕರು ಜೊತೆ ಸಂದರ್ಶನ ಮುಗಿಸಿದ ನಂತರ ಈ ಕಾಲಮನ್ನು ತುಂಬಬೇಕು. ಈ ಪ್ರಶ್ನೆಯ ಮುಖ್ಯವಾದ ಭಾಗಗಳಲ್ಲಿ ಕುಟುಂಬದ ಸದಸ್ಯರು/ಪೋಷಕರನ್ನು ಭೇಟಿ ಮಾಡುವುದು ಬಹಳ ಮುಖ್ಯ. ಕೇವಲ ಫೋನಿನ ಮೇಲೆ ಸಂದರ್ಶನ ಮಾಡಿದರೆ ಅದು ಈ ಪ್ರಶ್ನೆಯ ಉದ್ದೇಶವನ್ನು ಪರಿಪೂರ್ಣವಾಗಿಸುವುದಿಲ್ಲ, ಪ್ರತ್ಯಕ್ಷ ಸಂದರ್ಶನ ಅನಿವಾರ್ಯ.

## ಪ್ರಶ್ನೆ 15

ಈ ಭಾಗವನ್ನು ಪ್ರಾಥಮಿಕವಾಗಿ ಮಗುವಿನೊಂದಿಗೆ ಸಂದರ್ಶನವನ್ನು ಮುಗಿಸಿದ ನಂತರ ಮತ್ತು ಕುಟುಂಬದೊಂದಿಗೆ ಅದನ್ನು ಪರಿಶೀಲಿಸಿದ ನಂತರ ತುಂಬಬೇಕು.

### ಈ ಪ್ರಶ್ನೆ ಏಕೆ?

ಮಗುವಿನ ಕುರಿತು ತೆಗೆದುಕೊಳ್ಳಬೇಕಾದ ಅತ್ಯುತ್ತಮ ಕ್ರಮವನ್ನು ನಿರ್ಧರಿಸಲು ಈ ಮಾಹಿತಿಯು ಜೆಜೆಬಿಗೆ ನೆರವಾಗುತ್ತದೆ. ಎಂದರೆ, ಮಗು ಕುಟುಂಬದ ಸದಸ್ಯರೊಬ್ಬರನ್ನು ಬೆಂಬಲಿಸುತ್ತಿದ್ದರೆ, ಆಗ ಜೆಜೆಬಿಯು ಮಗುವಿನ ಯೋಗಕ್ಷೇಮಕ್ಕಾಗಿ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ.



## ಪ್ರಶ್ನೆ 16

### ಈ ಪ್ರಶ್ನೆ ಏಕೆ?

ಈ ವಿಭಾಗವಿರುವುದು ಮಗುವಿನೊಂದಿಗೆ ಕುಟುಂಬದ ಸದಸ್ಯರ ಅಥವಾ ಪೋಷಕರ ಸಂಬಂಧ ಹೇಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ. ಕುಟುಂಬದ ಸದಸ್ಯರು ಮಗುವಿನೊಂದಿಗೆ ಜೈವಿಕ ಸಂಬಂಧವನ್ನು ಹೊಂದಿರದೇ ಇದ್ದರೂ, ಮಗುವನ್ನು ವಾಸ್ತವವಾಗಿ ನೋಡಿಕೊಳ್ಳುತ್ತಿರುವವರು ಅವರೇ ಆಗಿದ್ದರೆ, ಈ ವಿಭಾಗವನ್ನು ಅದಕ್ಕನುಸಾರವಾಗಿ ತುಂಬಬೇಕು. ಈ ಮಾಹಿತಿಯು, ಮಗು ಎಂಥ ಪರಿಸರದಲ್ಲಿ ಬೆಳೆಯಿತು ಅಥವಾ ಬಿಡುಗಡೆಯ ನಂತರ ಅಥವಾ ಜಾಮೀನಿನ ಅವಧಿಯಲ್ಲಿ ಎಂಥ ಪರಿಸರದಲ್ಲಿ ಇರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಜೆಜೆಬಿಗೆ ಸಹಾಯಕವಾಗುತ್ತದೆ.

ಈ ವಿಭಾಗದ ಆರಂಭದಲ್ಲಿ, ಒಂದು ಮಗುವಿನ ಬದುಕಿನ ಸ್ಥಿರತೆಯಲ್ಲಿ ಕುಟುಂಬವು ಎಷ್ಟು ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಓದಿದೆವು. ಅಲ್ಲದೇ ಮಗುವಿಗೆ ಅತ್ಯಂತ ಸುರಕ್ಷಿತವಾದ ತಾಣ ಎಂದರೆ ಅದರ ಕುಟುಂಬ ಎಂದು ದೃಢವಾಗಿ ನಂಬಲಾಗುತ್ತದೆ. ಆದರೂ, ಹೆಚ್ಚಿನ ಪ್ರಕರಣಗಳಲ್ಲಿ ಕುಟುಂಬವೂ ಮಗುವಿನ ಮಟ್ಟಿಗೆ ದಮನಕಾರಿ ಅಥವಾ ಪರಸ್ಪರ ಸದಸ್ಯರ ನಡುವೆ ವೈಷಮ್ಯಕಾರಿಯೂ ಆಗಿರಬಹುದು. ಎಸ್‌ಐಆರ್‌ನ ಈ ವಿಭಾಗವು ಇಂಥ ವಿವರಗಳನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡುತ್ತದೆ.

### ಇದರ ಅರ್ಥವೇನು?

'ಸೌಹಾರ್ದಯುತ' ಸಂಬಂಧ ಎಂದರೇನು? ವ್ಯಕ್ತಿಗಳ ನಡುವೆ ಪರಸ್ಪರ ಸ್ನೇಹ, ಆತ್ಮೀಯತೆ ಮತ್ತು ಗೌರವ ಇದ್ದರೆ ಅಂಥ ಸಂಬಂಧವನ್ನು ಸಾಮಾನ್ಯವಾಗಿ 'ಸೌಹಾರ್ದಯುತ' ಎಂದು ಭಾವಿಸಲಾಗುತ್ತದೆ.

'ಸೌಹಾರ್ದಯುತವಲ್ಲದ' ಎಂದರೇನು? ಅವರು ಪರಸ್ಪರೊಂದಿಗೆ ಅಸಭ್ಯವಾಗಿ, ಆಕ್ರಮಣಕಾರಿಯಾಗಿ ನಡೆದುಕೊಳ್ಳುತ್ತಿದ್ದರೆ, ಯಾವಾಗಲೂ ನಿಂದನೆ, ಅವಮಾನ, ನಿರ್ಲಕ್ಷ್ಯ ಮಾಡುತ್ತಿದ್ದರೆ ಅದನ್ನು 'ಸೌಹಾರ್ದಯುತವಲ್ಲದ' ಸಂಬಂಧ ಎನ್ನಬಹುದು.

ಪದೇ ಪದೇ ಪ್ರಯತ್ನಿಸಿದ ಹೊರತಾಗಿಯೂ ಈ ಕುರಿತು ಸರಿಯಾದ ಮಾಹಿತಿ ದೊರಕದೇ ಇದ್ದರೆ ಕಾರ್ಯಕರ್ತರು 'ಗೊತ್ತಿಲ್ಲ' ಎಂಬ ಆಯ್ಕೆಯನ್ನು ಗುರುತಿಸಬಹುದು.

### ಹೇಗೆ ಮತ್ತು ಯಾರಿಗೆ ಕೇಳುವುದು?

ಸಾಧ್ಯವಾದಷ್ಟು ಮೊದಲು ಮಗುವನ್ನು ಸಂದರ್ಶನ ಮಾಡಬೇಕು. ಮನೆ ಭೇಟಿಯಲ್ಲಿ ಕುಟುಂಬದ ಸದಸ್ಯರೊಂದಿಗೆ ಮಾತಾಡುವಾಗಲೂ ಮಗುವಿನ ಕುರಿತು ಮಾಹಿತಿಯನ್ನು ಕೇಳಬಹುದು.

ಮಗುವಿನೊಂದಿಗೆ ಅವರ ಸಂಬಂಧ ಹೇಗಿದೆ ಎನ್ನುವುದನ್ನು ತಿಳಿಯಲು ಅದರ ಸೊದರ ಸೋದರಿಯರೊಂದಿಗೆ ಮಾತಾಡಬಹುದು.

ಕುಟುಂಬದ ಸದಸ್ಯರ ನಡುವೆ ಇರುವ ಸಂಬಂಧದ ಸ್ವಭಾವನ್ನು ವಿಶ್ಲೇಷಿಸಲು ಕಾರ್ಯಕರ್ತರು ಬಳಸಬಹುದಾದ ಕೆಲವು ಸೂಚಿಗಳೆಂದರೆ:

- ಕುಟುಂಬದ ಸದಸ್ಯರ ನಡುವೆಯೇ ಒಳಜಗಳ– ಉದಾ: ತಂದೆ ಮತ್ತು ತಾಯಿ ಮತ್ತೆ ಮತ್ತೆ ಜಗಳಾಡುತ್ತಾರೆಯೇ? ಅದು ಹಿಂಸೆಗೆ ತಿರುತ್ತದೆಯೇ? ಕಾರ್ಯಕರ್ತರು ಉದಾಹರಣೆಗಳಿಗಾಗಿ ಮತ್ತು ಸನ್ನಿವೇಶಗಳಿಗಾಗಿ ಕೇಳುತ್ತಾ ಈ ವಿಚಾರವನ್ನು ತಿಳಿದುಕೊಳ್ಳುವ ಉಪಾಯವನ್ನು ಬಳಸುವುದು ಒಳ್ಳೆಯದು.
- ಶಾಲೆಯಿಂದ ಹಿಂದಿರುಗಿದ ನಂತರ ಕುಟುಂಬದ ಸದಸ್ಯರು ಮಗುವಿನ ಹೋಮ್‌ವರ್ಕ್‌ನಲ್ಲಿ ನೆರವಾಗುತ್ತಾರೆಯೇ?
- ತನ್ನ ಕುಟುಂಬದ ಸದಸ್ಯರು ಮತ್ತು ಅವರ ಸಂಬಂಧಗಳಲ್ಲಿ ಮಗು ಕಂಡ ಸಕಾರಾತ್ಮಕ ಅಂಶಗಳೇನು?
- ಮಗು ಶಾಲೆಯಿಂದ ಅಥವಾ ಕೆಲಸದಿಂದ ಹಿಂದಿರುಗಿದ ನಂತರ ತಂದೆತಾಯಿ ಏನು ಮಾಡುತ್ತಾರೆ?
- ತಂದೆ ಅಥವಾ ತಾಯಿ ಮಗುವಿನ ಒಡಹುಟ್ಟಿದವರನ್ನು ಹೊಡೆಯುತ್ತಾರೆಯೇ?
- ಮಗು ತನ್ನ ಸೋದರ ಸೋದರಿಯರು ಅಥವಾ ಅಪ್ಪಅಮ್ಮಂದಿರ ಜೊತೆ ಇರುವಾಗ ಹೇಗೆ ಅನುಭವಿಸುತ್ತದೆ. ಮಗುವಿಗೆ ಪ್ರೀತಿಯ/ಕಾಳಜಿಯ ಭಾವನೆಯ ಅನುಭವ ಆಗುತ್ತದೆಯೇ? ಮಗುವಿಗೆ ಭಯವಾಗುತ್ತದೆಯೇ? (ಮಗು ತಂದೆತಾಯಿ/ಒಡಹುಟ್ಟಿದವರಿಂದ ಅಸಡ್ಡೆಗೆ ಒಳಗಾಗಿದ್ದರೆ ಈ ಪ್ರಶ್ನೆಗಳಿಂದ ಅದು ಗೊತ್ತಾಗುತ್ತದೆ.)
- (ಮಗು ದೈಹಿಕವಾಗಿ ಹೇಗೆ ಕಾಣುತ್ತದೆ, ಶಾಲೆಯಲ್ಲಿ ಅದು ಎಷ್ಟು ಅಂಕ ಗಳಿಸುತ್ತದೆ, ಇನ್ಯಾವುದೇ ಮಾನಸಿಕ ಅಥವಾ ದೈಹಿಕ ಅಸಾಮರ್ಥ್ಯದ ಕುರಿತು) ತಂದೆತಾಯಿ/ಒಡಹುಟ್ಟಿದವರು ಇತರರ ಎದುರಿನಲ್ಲಿ ಮಗುವನ್ನು ಗೇಲಿ ಮಾಡುವುದು ಅಥವಾ ನಿಂದಿಸಿ ಬಯ್ದದ್ದು ಇದೆಯೇ? ಅದು ಮಗುವಿಗೆ ಹೇಗೆ ಅನ್ನಿಸಿತು? (ತಂದೆತಾಯಿ/ಒಡಹುಟ್ಟಿದವರಿಂದ ಅವಮಾನವನ್ನು ಅನುಭವಿಸಿತೇ ಎನ್ನುವುದನ್ನು ಇದು ಸೂಚಿಸುತ್ತದೆ.)

• ಕುಟುಂಬದ ಸದಸ್ಯರು ಚಾಕು, ಲೋಹ ಇತ್ಯಾದಿ ವಸ್ತುಗಳನ್ನು ಬಳಸಿ ಒಬ್ಬರು ಇನ್ನೊಬ್ಬರಿಗೆ ಹಾನಿ ಮಾಡಿದ್ದಿದೆಯೇ?

ಮಗು ಮತ್ತು ಕುಟುಂಬದ ಸದಸ್ಯರು ವಿವರಿಸಿರಬಹುದಾದ ನಿದರ್ಶನಗಳನ್ನು ಜಾಗರೂಕತೆಯಿಂದ ವಿಶ್ಲೇಷಣೆ ಮಾಡಿದ ನಂತರವೇ ಕಾರ್ಯಕರ್ತರು ಈ ಪ್ರಶ್ನೆಗಳಿಗೆ ಉತ್ತರಗಳನ್ನು ತುಂಬುವುದು ಬಹಳ ಮುಖ್ಯ. ಇದನ್ನು ಆಧರಿಸಿಯೇ, ಕಾರ್ಯಕರ್ತರು ಪರಸ್ಪರ ಸಂಬಂಧಗಳು ಸೌಹಾರ್ದಯುತವಾಗಿಯೇ ಇಲ್ಲವೇ ಎಂಬುದನ್ನು ಸೂಚಿಸಬೇಕು.

ಸಂದರ್ಶಿತರು ತಮ್ಮ ಉತ್ತರಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುವ ಹಾಗೆ ಕಾರ್ಯಕರ್ತರು ಅವರಿಗೆ ಕಾರಣಗಳನ್ನು ನೀಡುವುದು ಮತ್ತು ಅಗತ್ಯ ಮಾಹಿತಿಯನ್ನು ಒದಗಿಸುವುದು ಮುಖ್ಯ.

## ಪ್ರಶ್ನೆ 17

ಮಗುವಿನ ಕುಟುಂಬದ ಯಾವುದೇ ಸದಸ್ಯರು ಈ ಹಿಂದೆ ಯಾವಾಗಲಾದರೂ ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದ ಸಂದರ್ಭಗಳೇನಾದರೂ ಇದ್ದವೇ ಎನ್ನುವುದರ ಕುರಿತು ಅರ್ಥ ಮಾಡಿಕೊಳ್ಳಲು ಜೆಜೆಬಿಗೆ ಸಹಾಯಕವಾಗಿರುತ್ತದೆ. ಈ ಪ್ರಶ್ನೆಯು ಮಗುವಿನ ಕುರಿತು ಪೂರ್ವಗ್ರಹ ತೋರಬಹುದಾದ ಸಾಧ್ಯತೆಯನ್ನು ಹೊಂದಿದೆ, ಆದ್ದರಿಂದ ಕಾರ್ಯಕರ್ತರು ಬೇರೊಂದು ರೀತಿಯಲ್ಲಿ ಅದನ್ನೇ ಹೆಚ್ಚು ಆಳವಾಗಿ ಕಾಣುವ ಪ್ರಯತ್ನವನ್ನು ಮಾಡಬಹುದು.

ಕಾರ್ಯಕರ್ತರು, ಸಿಐಸಿಎಲ್ ಕೆಳಗಿನ ಯಾವುದನ್ನಾದರೂ ಎದುರಿಸುತ್ತದೆಯೇ ಎಂದು ವಿಚಾರಿಸಬಹುದು:

- ಯಾವುದಾದರೂ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿರುವ ವಯಸ್ಕರ ಗ್ಯಾಂಗಿನವರು ತನ್ನನ್ನು ಅವರ ಜೊತೆ ಸೇರಿಸಿಕೊಳ್ಳಬಹುದಾದ ಅಪಾಯ, ಅಥವಾ
- ಗ್ಯಾಂಗುಗಳಿಂದ ದೈಹಿಕವಾಗಿ ಹಾನಿಗೆ ಒಳಗಾಗಬಹುದಾದ ಭಯ.
- ಕುಟುಂಬದಲ್ಲಿ ಅಪರಾಧದ ಆಪಾದನೆಯನ್ನು ಹೊತ್ತಿರಬಹುದಾದ ಒಬ್ಬ ವಯಸ್ಕರನ್ನು ತಲುಪಲು ಪೊಲಿಸರು ಮಗುವನ್ನು ಬಳಸಿದ್ದರೆ.
- ಕಾರ್ಯಕರ್ತರು ಪರಿಣಾಮಕಾರಿಯಾದ ಸಾಮಾಜಿಕ ತನಿಖೆಯ ಮೂಲಕ ಈ ಪ್ರಶ್ನೆಯನ್ನು ಮಗುವಿಗಾಗಿ ಒಂದು ರಕ್ಷಣೆಯ ಕ್ರಮವನ್ನಾಗಿ ಬಳಸಬಹುದು.

**ಈ ಪ್ರಶೆಯ ಅರ್ಥವೇನು?**

ಈ ವಿವಿಧ ಕಾಲಮುಗಳ ಶ್ರೀರ್ಷಿಕೆಗಳು ಏನನ್ನು ಹೇಳುತ್ತವೆ ಎಂಬುದನ್ನು ಸ್ವಲ್ಪ ಹತ್ತಿರದಿಂದ ನೋಡೋಣ.

- ಅಪರಾಧದ ಸ್ವಭಾವ: ಇದು ಕುಟುಂಬದ ಸದಸ್ಯರ ಮೇಲೆ ಹೊರಿಸಲಾಗಿರುವ ಆಪಾದನೆ ಏನು ಎಂಬುದನ್ನು ಕೇಳುತ್ತದೆ. ಇದರಲ್ಲಿ ಉದಾಹರಣೆಗೆ, ಕಳ್ಳತನ, ಕೊಲೆ. ಅಪಹರಣ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯಗಳ ತಡೆ) ಕಾಯ್ದೆಯಡಿಯಲ್ಲಿ ಅಪರಾಧ ಇತ್ಯಾದಿ ಒಳಗೊಳ್ಳುತ್ತವೆ. ಅವರ ಮೇಲೆ ಯಾವ ಅಪರಾಧದ ಆರೋಪವನ್ನು ಹೊರಿಸಲಾಗಿದೆ ಎಂದು ಕುಟುಂಬದ ಸದಸ್ಯರಿಗೆ ಕಾರ್ಯಕರ್ತರು ಕೇಳಬಹುದು.
- ಕಾನೂನು ಸ್ಥಿತಿ: ಇದು ಪ್ರಕರಣವು ಇನ್ನೂ ನಡೆದಿದೆಯೇ ಅಥವಾ ಮುಕ್ತಾಯವಾಗಿದೆಯೇ ಎಂಬುದನ್ನು ಕೇಳುತ್ತದೆ.
- ಬಂಧಿಸಲಾಗಿತ್ತೇ: ವ್ಯಕ್ತಿಯನ್ನು ಬಂಧಿಸಲಾಗಿತ್ತೇ ಎಂಬುದನ್ನು ಇಲ್ಲಿ ಕೇಳಲಾಗಿದೆ, ಇದರಲ್ಲಿ ಎಷ್ಟು ವ್ಯಕ್ತಿಗಳು ಒಳಗೊಂಡಿದ್ದರು, ಎಷ್ಟು ಜನರು ಬಂಧಿತರಾದರು, ಅವರಲ್ಲಿ ಎಷ್ಟು ಜನ ವಯಸ್ಕರು ಮತ್ತು ಎಷ್ಟು ಮಕ್ಕಳು, ಇತ್ಯಾದಿ.
- ಸೆರೆವಾಸದ ಅವಧಿ: ಇದರಲ್ಲಿ ವ್ಯಕ್ತಿ ಎಷ್ಟು ದಿನ/ವಾರ/ತಿಂಗಳು/ವರ್ಷ ಸೆರೆವಾಸದಲ್ಲಿದ್ದರು ಎಂಬುದನ್ನು ಸೂಚಿಸಬೇಕು.
- ನೀಡಲಾದ ಶಿಕ್ಷೆ: ಕುಟುಂಬದ ಸದಸ್ಯರಿಗೆ ನ್ಯಾಯಾಲಯವು ನೀಡಿದ ಶಿಕ್ಷೆಯನ್ನು ಇಲ್ಲಿ ಸೂಚಿಸಬೇಕು. ಆದರೆ, ವ್ಯಕ್ತಿಯನ್ನು ಬಿಡುಗಡೆ ಮಾಡಿದ್ದರೆ (ಆಪಾದನೆಯಿಂದ ನ್ಯಾಯಾಲಯವು ಮುಕ್ತರನ್ನಾಗಿ ಮಾಡಿದ್ದರೆ) 'ಎನ್.ಎ.'/ 'ಅನ್ವಯಿಸುವುದಿಲ್ಲ' ಎಂದು ನಮೂದಿಸಬೇಕು. ಜೊತೆಗೆ 'ವ್ಯಕ್ತಿಯನ್ನು ಆರೋಪಗಳಿಂದ ಮುಕ್ತಗೊಳಿಸಲಾಯಿತು,' ಎಂದು ಬರೆಯಬೇಕು.

**ಹೇಗೆ ಮತ್ತು ಯಾರನ್ನು ಕೇಳುವುದು?**

ಈ ಮಾಹಿತಿಗಾಗಿ ಕುಟುಂಬದ ಸದಸ್ಯರನ್ನು ವಿಚಾರಿಸಬೇಕು.

*ಇದನ್ನು ಚರ್ಚಿಸೋಣ:*

*ಕಾವ್ಯ (ಹೆಸರು ಬದಲಾಯಿಸಿದೆ), ವಯಸ್ಸು 15 ವರ್ಷ, ಬಿಎನ್‌ಎಸ್ ಸೆಕ್ಷನ್ 103, 105, 329 ಅಡಿಯಲ್ಲಿ ಅಪರಾಧ ಮಾಡಿದ್ದಾಳೆ ಎಂದು ಆಪಾದಿಸಲಾಗಿದೆ. ಒಂದು ರೂಮು ಮತ್ತು ಅಡುಗೆ ಮನೆ ಇರುವ ಮನೆಯಲ್ಲಿ ಆಕೆ ತನ್ನ ಮಲತಾಯಿ, ತಂದೆ ಮತ್ತು ಅಜ್ಜಿಯೊಂದಿಗೆ ವಾಸಿಸುತ್ತಿದ್ದಳು. ತಂದೆ ಮತ್ತು ತಾಯಿ ಇಬ್ಬರೂ ಕೆಲಸ ಮಾಡುತ್ತಾರೆ, ಅಜ್ಜಿ ಕಾವ್ಯಳನ್ನು ನೋಡಿಕೊಂಡಿದ್ದರು. ಕಾವ್ಯಳ ಮಾತಿನಲ್ಲಿ ಹೇಳುವುದಾದರೆ, 'ಅಜ್ಜಿ ನನಗಾಗಿ ಮಾಡೋ ಮುದ್ದೆ ಜಗತ್ತಿನಲ್ಲಿಯೇ ಬೆಸ್ಟೆಸ್ಟ್.'*

*ತಂದೆ ಹೆಚ್ಚಿನ ಸಲ ಮನೆಗೆ ಬರುವಾಗ ಕುಡಿದೇ ಬರುತ್ತಾರೆ, ಮಲತಾಯಿ ಪ್ರಕಾರ ಕಾವ್ಯ ಮನೆಗೊಂದು 'ಹೊರೆ'. ಮಕ್ಕಳು ಮನೆ ಹೊರಗೆ ರಸ್ತೆಯ ಮೇಲೆ ಅತ್ತಿಂದತ್ತ ಅಪಾಯವನ್ನು ಲೆಕ್ಕಿಸದೇ ಓಡುತ್ತಿದ್ದವು. ಕಾವ್ಯ ಕೆಲವೊಮ್ಮೆ ತನ್ನ ತಂದೆಯ ಬಳಿ ಏನನ್ನಾದರೂ ಕೇಳಲೂ ಹೆದರುತ್ತಿದ್ದಳು, ಏಕೆಂದರೆ, ಆಕೆಯ ತಂದೆ ಯಾವಾಗ ನೋಡಿದರೂ ಆಕೆಯ ಮಲತಾಯಿ ಮೇಲೆ ಕೂಗಾಡುತ್ತಲೇ ಇರುತ್ತಿದ್ದರು.*

*ಎಸ್‌ಐಆರ್ ಪ್ರಕಾರ ಪ್ರ.ಸಂ.16ರ ಮುಖ್ಯ ವಿಷಯಾಂಶಗಳು ಯಾವುವು?*

*ಉತ್ತರ:*

*1. ಕುಟುಂಬದ ಸದಸ್ಯರ ನಡುವೆ ಸಂಬಂಧಗಳು:*

| | |
|---|---|
| i. ತಂದೆ ಮತ್ತು ತಾಯಿ | ಸೌಹಾರ್ದಯುತ/[ಸೌಹಾರ್ದಯುತವಾಗಿಲ್ಲ ✓]/ಗೊತ್ತಿಲ್ಲ: *ಸೌಹಾರ್ದಯುತವಾಗಿಲ್ಲ (ತಂದೆ ಮತ್ತು ಮಲತಾಯಿ ಯಾವಾಗ ನೋಡಿದರೂ ಕಿತ್ತಾಡುತ್ತಿರುತ್ತಾರೆ, ತಂದೆ ಮಲತಾಯಿಯ ಮೇಲೆ ಕೂಗಾಡುತ್ತಿರುತ್ತಾರೆ. ತಂದೆ ದಿನವೂ ಕುಡಿದು ಮನೆಗೆ ಬರುವುದಕ್ಕಾಗಿ ಅವರ ಮೇಲೆ ಮಲತಾಯಿಯೂ ತಾನೂ ಏನೂ ಕಡಿಮೆ ಇಲ್ಲ ಎನ್ನುವ ಹಾಗೆ ಕೂಗಾಡುತ್ತಿರುತ್ತಾರೆ.)* |
| ii. ತಂದೆ ಮತ್ತು ಮಗು | ಸೌಹಾರ್ದಯುತ/[ಸೌಹಾರ್ದಯುತವಾಗಿಲ್ಲ ✓]/ಗೊತ್ತಿಲ್ಲ: *ಸೌಹಾರ್ದಯುತವಾಗಿಲ್ಲ (ತಂದೆಯ ಬಳಿ ಹೋಗಲು ಮಗುವಿಗೆ ಬಹಳ ಭಯ, ತಂದೆ ತನ್ನನ್ನು ಬೆಂಬಲಿಸುತ್ತಾರೆ, ಅಥವಾ ತನ್ನ ಕುರಿತು ಕಾಳಜಿ ವಹಿಸುತ್ತಾರೆ ಎಂದು ಆಕೆಗೆ ಅನ್ನಿಸುವುದಿಲ್ಲ. ಅವರಿಬ್ಬರ ನಡುವೆ ಸಂವಹನ ಹೆಚ್ಚುಕಡಿಮೆ ಇಲ್ಲವೇ ಇಲ್ಲ.)* |
| iii. ತಾಯಿ ಮತ್ತು ಮಗು | ಸೌಹಾರ್ದಯುತ/[ಸೌಹಾರ್ದಯುತವಾಗಿಲ್ಲ ✓]/ಗೊತ್ತಿಲ್ಲ: *ಸೌಹಾರ್ದಯುತವಾಗಿಲ್ಲ (ಮಲತಾಯಿ ಎಲ್ಲದಕ್ಕೂ ತನ್ನ ಮಲಮಗಳನ್ನೇ ದೂಷಿಸುತ್ತಾಳೆ. ಆಕೆ ಒಂದು ಹೊರೆ ಎಂದು ಮೂದಲಿಸುತ್ತಾಳೆ. ಆದ್ದರಿಂದ, ಮಗು ತನ್ನ ಮಲತಾಯಿಯ ಎದುರು ಇರುವುದನ್ನೇ ಇಷ್ಟ ಪಡುವುದಿಲ್ಲ.* |
| iv. ತಂದೆ ಮತ್ತು ಮಗುವಿನ ಒಡಹುಟ್ಟಿದವರು | ಸೌಹಾರ್ದಯುತ/ಸೌಹಾರ್ದಯುತವಾಗಿಲ್ಲ/ಗೊತ್ತಿಲ್ಲ: *ಇದು ಅನ್ವಯವಾಗುವುದಿಲ್ಲ (ಏಕೆಂದರೆ ಕಾವ್ಯಳಿಗೆ ಒಡಹುಟ್ಟಿದವರು ಯಾರೂ ಇಲ್ಲ.)* |
| v. ತಂದೆ ಮತ್ತು ಮಗುವಿನ ಒಡಹುಟ್ಟಿದವರು | ಸೌಹಾರ್ದಯುತ/ಸೌಹಾರ್ದಯುತವಾಗಿಲ್ಲ/ಗೊತ್ತಿಲ್ಲ: *ಇದು ಅನ್ವಯವಾಗುವುದಿಲ್ಲ (ಏಕೆಂದರೆ ಕಾವ್ಯಳಿಗೆ ಒಡಹುಟ್ಟಿದವರು ಯಾರೂ ಇಲ್ಲ.)* |
| vi. ಮಗು ಮತ್ತು ಒಡಹುಟ್ಟಿದವರು | ಸೌಹಾರ್ದಯುತ/ಸೌಹಾರ್ದಯುತವಾಗಿಲ್ಲ/ಗೊತ್ತಿಲ್ಲ: *ಇದು ಅನ್ವಯವಾಗುವುದಿಲ್ಲ (ಏಕೆಂದರೆ ಕಾವ್ಯಳಿಗೆ ಒಡಹುಟ್ಟಿದವರು ಯಾರೂ ಇಲ್ಲ.)* |
| vii. ಮಗು ಮತ್ತು ಅಜ್ಜ, ಅಜ್ಜಿ | [ಸೌಹಾರ್ದಯುತ ✓]/ಸೌಹಾರ್ದಯುತವಾಗಿಲ್ಲ/ಗೊತ್ತಿಲ್ಲ: *ಸೌಹಾರ್ದಯುತ (ಕಾವ್ಯ ಮತ್ತು ಆಕೆಯ ಅಜ್ಜಿಯ ಬಾಂಧವ್ಯ ತುಂಬಾ ಆತ್ಮೀಯ. ಆಕೆ ಏನಾದರೂ ಮನದಾಳದ ಮಾತನ್ನು ಹೇಳಬೇಕು ಎಂದರೆ ಅದನ್ನು ಅಜ್ಜಿಯ ಬಳಿ ಮಾತ್ರ ಹೇಳುತ್ತಾಳೆ. ಆಕೆಯ ದೈನಂದಿನ ದಿನಚರಿಯ ಬಹುದೊಡ್ಡ ಭಾಗ ಅಜ್ಜಿಯೊಂದಿಗೆ ಮಾತಾಡುವುದು; ಆಕೆಯೊಂದಿಗೆ ತನ್ನ ಬದುಕಿನ ಎಲ್ಲವನ್ನೂ ಮಾತಾಡುವುದು. ತನಗೆ ಅಜ್ಜಿಯ ಬೆಂಬಲವಿದೆ, ಆಕೆ ತನ್ನ ಕುರಿತು ಕಾಳಜಿ ವಹಿಸುತ್ತಾಳೆ ಎಂದು ಕಾವ್ಯಳಿಗೆ ಗೊತ್ತು.* |

## ಪ್ರಶ್ನೆ 18

| |
|---|
| 18. ಮಗು ಮತ್ತು ಕುಟುಂಬದವರಿಗೆ ಧರ್ಮದ ಕುರಿತು ಇರುವ ಮನೋಭಾವ......... |

ಈ ಪ್ರಶ್ನೆಯ ಮೂಲಕ ಮಗು ಮತ್ತು ಕುಟುಂಬದವರಿಗೆ ಧರ್ಮದ ಕುರಿತು ಇರುವ ಭಾವನೆ ಅರ್ಥವಾಗುತ್ತದೆ; ಇದರಿಂದಾಗಿ ಅವರ ಮೌಲ್ಯ ವ್ಯವಸ್ಥೆಯಲ್ಲಿ ಧರ್ಮವು ಒಂದು ಮಹತ್ವದ ಪಾತ್ರವನ್ನು ವಹಿಸುತ್ತದೆಯೇ ಎಂಬುದು ಗೊತ್ತಾಗುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ಪಡೆಯುವಾಗ ಕಾರ್ಯಕರ್ತರು ಧರ್ಮಗಳ ಕುರಿತು ತಮ್ಮ ಅಂತರಂಗದ ವೈಯಕ್ತಿಕ ಪೂರ್ವಗ್ರಹಗಳ ಕುರಿತು ಬಹಳ ಜಾಗರೂಕರಾಗಿರಬೇಕು.

ಜೊತೆಗೆ, ಈ ಪ್ರಶ್ನೆಯಿಂದ ಧರ್ಮದೊದಿಗೆ ಮಗುವಿನ ಸಂಬಂಧವೇನು, ಧರ್ಮದಿಂದ ಮಗುವಿಗೆ ಏನಾದರೂ ಬೆಂಬಲ ದೊರೆಯುತ್ತಿದೆಯೇ ಎಂಬುದು ಅರ್ಥವಾಗುತ್ತದೆ.

## ಪ್ರಶ್ನೆ 19

| |
|---|
| 19. ಪ್ರಸ್ತುತ ವಾಸ್ತವ್ಯದ ಸ್ಥಿತಿ......... |

### ಈ ಪ್ರಶ್ನೆ ಏಕೆ ಇದೆ?

ಈ ಮಾಹಿತಿಯಿಂದ ಮಗುವಿನ ಒಟ್ಟಾರೆ ಯೋಗಕ್ಷೇಮದಲ್ಲಿ ಅದರ ಬದುಕುವ ಪರಿಸರವು ಎಷ್ಟರ ಮಟ್ಟಿಗೆ ಸ್ಥಿರತೆಯನ್ನು ನೀಡುತ್ತಿದೆ ಎಂಬುದನ್ನು ನಿರ್ಧರಿಸಲು ಜೆಜೆಬಿಗೆ ನೆರವಾಗುತ್ತದೆ.

ಮಗುವಿನ ಬೆಳವಣಿಗೆಯಲ್ಲಿ ಅತ್ಯಂತ ನಿರ್ಣಾಯಕವಾದ ಒಂದು ಅಂಶವೆಂದರೆ ಅದರ ಬೆಳೆಯುತ್ತಿರುವ ವಯಸ್ಸಿನಲ್ಲಿ ಅದಕ್ಕೆ ಎಷ್ಟೊಂದು ಸ್ಥಿರತೆ ಕುಟುಂಬದಿಂದ ಒದಗಿದೆ ಎನ್ನುವುದಾಗಿದೆ. ಇದು ಭಾವನಾತ್ಮಕ ಮತ್ತು ಭೌತಿಕ ಪರಿಸರ ಎರಡು ಬಗೆಯ ಸ್ಥಿರತೆಯನ್ನು ಒಳಗೊಂಡಿದೆ. ಈ ಮಾಹಿತಿಯನ್ನು ಆಧರಿಸಿ, ಜೆಜೆಬಿ, ಮಗುವಿನ ಆರೈಕೆ, ರಕ್ಷಣೆ, ಬೆಳವಣಿಗೆ ಮತ್ತು ಒಟ್ಟಾರೆ ಯೋಗಕ್ಷೇಮಕ್ಕೆ ಅದರ ಮನೆ ಮತ್ತು ಪರಿಸರವು ಪೂರಕವಾಗಿದೆಯೇ ಎಂಬುದನ್ನು ನಿರ್ಧರಿಸಲು ನೆರವಾಗುತ್ತದೆ.

### ಈ ಪ್ರಶ್ನೆಯ ಅರ್ಥವೇನು?

ಇಲ್ಲಿ, ಒಂದು ಭೌತಿಕ ರಚನೆಯಾಗಿ ಅವರ ಮನೆಯ (ಕಚ್ಚಾ ಮನೆ/ಪಕ್ಕಾ ಮನೆ, ಮನೆಯ ಅಂದಾಜು ಚದರಳತೆ, ನೋಡುವುದಕ್ಕೆ ಎಷ್ಟು ರೂಮು ಕಾಣುತ್ತವೆ, ಮನೆಯ ಕುರಿತು ಏನಾದರೂ ವೈಶಿಷ್ಟ್ಯವಿದೆಯೇ) ವಿವರ ನೀಡುವುದಲ್ಲದೇ ಕಾರ್ಯಕರ್ತರು ಆ ಮನೆ ಇರುವ ಪರಿಸರದ ಬಗ್ಗೆಯೂ ಬರೆಯಬೇಕು. ಅದು ಯಾವ ತರಹದ ಪ್ರದೇಶದಲ್ಲಿದೆ ಎಂಬುದನ್ನು ನಮೂನೆಯಲ್ಲಿ ಸೂಚಿಸಬೇಕು.

ಉದಾಹರಣೆಗೆ:
ಅದು ಕಚ್ಚಾ ಅಥವಾ ಪಕ್ಕಾ ಮನೆಯೇ?
ಅದು ತಾತ್ಕಾಲಿಕ ವಾಸ್ತಸ್ಥಳವೇ?
ಸ್ವಂತದ್ದೇ ಬಾಡಿಗೆಯದೇ?
ರಸ್ತೆ ಬದಿ ಇದೆಯೇ? ಮಗುವಿಗೆ ಅದು ಸುರಕ್ಷಿತವಾಗಿದೆಯೇ?
ತನ್ನ ನೆರೆಹೊರೆಯ ಸಂಭವನೀಯ ಅಪಾಯಕಾರಿ ಅಥವಾ ಅಪಾಯಸಾಧ್ಯ ಸಂಗತಿಗಳಿಂದ ಅದು ಮಗುವನ್ನು ರಕ್ಷಿಸುತ್ತದೆಯೇ?
ಈ ಮನೆಯಲ್ಲಿ ಎಷ್ಟು ಜನ ವಾಸಿಸುತ್ತಾರೆ?
ಶುದ್ಧ ನೀರು ಸಿಗುವ ಸ್ಥಿತಿ ಎಷ್ಟರ ಮಟ್ಟಿಗೆ ಇದೆ?
ವಿದ್ಯುತ್ ಇದೆಯೇ?
ಶೌಚ ವ್ಯವಸ್ಥೆ ಇದೆಯೇ?
ಏಕಾಂತತೆಯ ಮಟ್ಟ?
ಸಾರಿಗೆ ಸಿಗುತ್ತದೆಯೇ?
ಕುಟುಂಬದ ಸಾಮಾಜಿಕ ಸಂಪರ್ಕ ಹೇಗಿದೆ? ಕುಟುಂಬವು ಉಳಿದ ನೆರೆಹೊರೆಯಿಂದ ಪ್ರತ್ಯೇಕವಾಗಿದೆಯೇ? ತಮ್ಮ ಜಾತಿ ಅಥವಾ ಇನ್ನಾವುದೇ ಕಾರಣಕ್ಕಾಗಿ ಕುಟುಂಬವು ಗ್ರಾಮದ ಹೊರಗೆ ಬದುಕುತ್ತಿದೆಯೇ?

ಇಂಥ ವಿವರವಾದ ವಿಶ್ಲೇಷಣೆಯು, ಜೆಜೆಬಿಯು ಮಗುವಿನ ಹೆಚ್ಚು ಉತ್ತಮವಾದ ಸ್ಥಿರತೆ ಮತ್ತು ಸುರಕ್ಷಿತತೆಯನ್ನು ಖಚಿತಪಡಿಸಿಕೊಳ್ಳುವ ಕ್ರಮವಾಗಿ ಆದೇಶವನ್ನು ಜಾರಿ ಮಾಡುವಾಗ, ಸದ್ಯದ ಮಗುವಿನ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಸ್ಥಿರತೆಯ ಸ್ವಭಾವದ ಬಗ್ಗೆ ಮತ್ತು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡುತ್ತದೆ.

**ಹೇಗೆ ಮತ್ತು ಯಾರನ್ನು ಕೇಳುವುದು?**

ಈ ಪ್ರಶ್ನೆಗೆ ಪ್ರತಿಕ್ರಿಯೆಯನ್ನು ಕಾರ್ಯಕರ್ತರು ನಡೆಸುವ ಅವಲೋಕನದ ಮೂಲಕವೇ ರೂಪಿಸಬೇಕಾಗುತ್ತದೆ.

## ಪ್ರಶ್ನೆ 20

20. ಪ್ರಾಮುಖ್ಯತೆಯ ಇತರ ಅಂಶಗಳು, ಇದ್ದಲ್ಲಿ:.........

ಈ ವರೆಗೆ ಪ್ರಶ್ನೆಗಳಿಗೆ ಉತ್ತರಗಳ ರೂಪದಲ್ಲಿ ತಿಳಿದು ಬಂದಿರುವ ಅಂಶಗಳ ಹೊರತಾಗಿ ಜೆಜೆಬಿಯವರು ಮಗುವಿನ ಕುರಿತು ತೆಗೆದುಕೊಳ್ಳುವ ನಿರ್ಧಾರಕ್ಕೆ ನೇರವಾಗಿ ಪೂರಕವಾಗಬಹುದು ಎಂದು ಕಾರ್ಯಕರ್ತರಿಗೆ ಅನ್ನಿಸಿದ ಅಂಶಗಳನ್ನು ಇಲ್ಲಿ ಬರೆಯಬಹುದಾಗಿದೆ. ಇದರಲ್ಲಿ, ಮಗುವನ್ನು ಯಾವಾಗಲಾದರೂ ಆಸ್ಪತ್ರೆಗೆ ಸೇರಿಸಲಾಗಿತ್ತೇ, ಸೇರಿಸಿದ್ದರೆ ಎಷ್ಟು ಸಮಯ, ಮಗು ಕುಟುಂಬದ ಯಾವುದಾದರೂ ಸದಸ್ಯರ ಜೊತೆಯಲ್ಲಿ ಅಥವಾ ಶಿಕ್ಷಕರೊಂದಿಗೆ ಭಾವನಾತ್ಮಕ ನಂಟನ್ನು ಹೊಂದಿದೆಯೇ ಇತ್ಯಾದಿ ಒಳಗೊಳ್ಳಬಹುದು. ಇವೆಲ್ಲವೂ ಜೆಜೆಪಿಯು ಮಗುವನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ಸಹಾಯಕವಾಗುತ್ತವೆ.

**ಮಗುವಿನ ವೈಯಕ್ತಿಕ ಗುಣಗಳು (ಪ್ರಶ್ನೆ 21–22)**

## ಪ್ರಶ್ನೆ 21

21. (i) ಮಗುವಿನ ಅಭ್ಯಾಸಗಳು (ಇರುವುವನ್ನು ಟಿಕ್ ಮಾಡಿ)

| ಎ | ಬಿ |
|---|---|
| (ಎ) ಧೂಮಪಾನ | (ಜಿ) ಟಿವಿ/ಸಿನಿಮಾ ನೋಡುವುದು |
| (ಬಿ) ಮದ್ಯಪಾನ | (ಎಚ್) ಒಳಾಂಗಣ/ಹೊರಾಂಗಣ ಆಟ |
| (ಸಿ) ಮಾದಕ ದ್ರವ್ಯ ಸೇವನೆ (ನಿರ್ದಿಷ್ಟವಾಗಿ) | (ಐ) ಪುಸ್ತಕ ಓದುವುದು |
| (ಡಿ) ಜೂಜಾಟ | (ಜೆ) ಧಾರ್ಮಿಕ ಚಟುವಟಿಕೆ |
| (ಇ) ಭಿಕ್ಷೆ ಬೇಡುವುದು | (ಕೆ) ಡ್ರಾಯಿಂಗ್/ಪೇಂಟಿಂಗ್/ ಅಭಿನಯ/ಹಾಡುವುದು |
| (ಎಫ್) ಇತರೆ (ನಿರ್ದಿಷ್ಟವಾಗಿ) | (ಎಲ್) ಇತರೆ (ನಿರ್ದಿಷ್ಟವಾಗಿ) |

(ii) ಪಠ್ಯೇತರ ಆಸಕ್ತಿಗಳು..............................

(iii) ಅಸಾಧಾರಣ ಗುಣಲಕ್ಷಣಗಳು ಮತ್ತು ವ್ಯಕ್ತಿತ್ವದ ಲಕ್ಷಣಗಳು..........................

ಈ ಪ್ರಶ್ನೆಯನ್ನು ಅವರ ಪರಿಚಯವನ್ನು ಮಾಡಿಕೊಳ್ಳುವ ಕ್ರಮವಾಗಿ ಸಂದರ್ಶನದ ಆರಂಭದಲ್ಲಿಯೇ ಕೇಳಬಹುದು. ಇದನ್ನು ಕಾರ್ಯಕರ್ತರು ಆರಾಮವಾಗಿ, ಸಾಧಾರಣ ಸಂಭಾಷಣೆಯ ಶೈಲಿಯಲ್ಲಿ ಕೇಳಬೇಕು. ಈ ಪ್ರಶ್ನೆಗಳನ್ನು ಕಾರ್ಯಕರ್ತರು ಹೇಗೆ ಕೇಳಬಹುದು ಎನ್ನುವುದಕ್ಕೆ ಕೆಲವು ಉದಾಹರಣೆಗಳು: “ನಿಮ್ಮ ಹವ್ಯಾಸಗಳ ಬಗ್ಗೆ ಹೇಳ್ತೀರಾ?”, “ಬಿಡುವಿನ ಸಮಯದಲ್ಲಿ ನೀವೂ ನಿಮ್ಮ ಸ್ನೇಹಿತರು ಏನು ಮಾಡುತ್ತೀರಿ?” “ನಿಮಗೆ ಡಾನ್ಸ್/ಆಟ ಆಡುವುದು/ ಹಾಡುವುದು ಏನಾದರೂ ಇಷ್ಟನಾ?” “ನಿಮ್ಮ ಬದುಕಿನಲ್ಲಿ ಒಂದು ಸಾಧಾರಣ ದಿನ ಹೇಗಿರುತ್ತೆ?” “ಯಾವ ತರಗತಿಯಲ್ಲಿ ಓದುತ್ತಿದ್ದೀರಿ?” “ಶಾಲೆಗೆ ಹೋಗೋದು ನಿಮಗೆ ಇಷ್ಟನಾ?” “ನಿಮ್ಮ ಫೋನಿನ ಮೇಲೆ ಗೇಮ್ಸ್ ಆಡೋದು ಇಷ್ಟನಾ?” “ಅದರ ಮೇಲೆ ಸುಮಾರು ಎಷ್ಟು ಸಮಯ ಕಳೀತೀರಿ?” “ಇನ್ಸ್‌ಟಾಗ್ರಾಮ್ ಗೊತ್ತಾ?”

### ಈ ಪ್ರಶ್ನೆ ಏಕೆ?

ಈ ಪ್ರಶ್ನೆಗಳು ಇರುವುದು ಮಗುವಿನ ಆಸಕ್ತಿಗಳು, ಕೌಶಲಗಳು, ಇಷ್ಟಗಳ ಕುರಿತು ತಿಳಿಯಲು. ಉದಾಹರಣೆಗೆ, ಮಗುವಿಗೆ ಕರಕುಶಲದಲ್ಲಿ ಅಥವಾ ಮರದ (ಬಡಗಿ) ಕೆಲಸದಲ್ಲಿ ವಿಶೇಷ ಆಸಕ್ತಿ, ಕೌಶಲ ಇದೆ, ಆದರೆ, ಅದನ್ನು ಮಾಡಿ ನೋಡಲು, ಮುಂದುವರೆಸಲು ಸರಿಯಾದ ಅವಕಾಶವಿಲ್ಲ ಎಂದಿಟ್ಟುಕೊಳ್ಳಿ. ಮಗುವಿನ ಕುರಿತು ಈ ಮಾಹಿತಿಯು ಜೆಜೆಪಿಗೆ, ಮಗುವಿನ ಕುರಿತು ಆದೇಶಗಳನ್ನು ಜಾರಿ ಮಾಡುವಾಗ ಬಹಳ ಉಪಯುಕ್ತವಾಗಿರುತ್ತದೆ ಮತ್ತು ಇದನ್ನೇ ನಂತರದ ಮಗುವಿನ ಫ್ಲಾಲೋಅಪ್ ಮತ್ತು ಐಸಿಪಿ ಯೋಜನೆಯನ್ನು ರೂಪಿಸುವುದರಲ್ಲಿ ಬಳಸಿಕೊಳ್ಳಬಹುದು. ಈ ಪ್ರಶ್ನೆಗೆ ಸಿಗುವ ವಿವರಗಳು ಜೆಜೆಪಿಗೆ ಮಗುವಿಗೆ, ಚಟ(ವ್ಯಸನ)ವನ್ನು ಬಿಡಿಸುವ ಅಥವಾ ಪುನರ್ವಸತಿ ಮಾಡುವ ರೂಪದಲ್ಲಿ ಏನಾದರೂ ಕಾರ್ಯಾಚರಣೆಗಳು ಬೇಕೇ ಎಂದು ಗುರುತಿಸಲು ಸಹಾಯಕವಾಗಿರುತ್ತವೆ.

**ಗಮನಿಸಿ: ಇಲ್ಲಿ ಕಾರ್ಯಕರ್ತರು ತಮ್ಮ ಪೂರ್ವಗ್ರಹ (ಅಬಿಪ್ರಾಯ) ಪ್ರಭಾವ ಬೀರದ ಹಾಗೆ ಎಚ್ಚರಿಕೆ ವಹಿಸುವುದು ಬಹಳ ಮುಖ್ಯ. ಈ ಪ್ರಶ್ನೆಗೂ ಆರೋಪಿತ ಅಪರಾಧಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ಈ ಎಚ್ಚರಿಕೆಯನ್ನು ಪ್ರಶ್ನೆಗಳನ್ನು ಕೇಳುವಾಗಷ್ಟೇ ಅಲ್ಲ, ಅವುಗಳಿಗೆ ಮಗುವಿನಿಂದ ಬಂದ ಪ್ರತಿಕ್ರಿಯೆಗಳನ್ನು ವರದಿಯಲ್ಲಿ ದಾಖಲಿಸುವಾಗಲೂ ವಹಿಸಬೇಕು. ವರದಿಯು ಕೇವಲ ಸತ್ಯಾಂಶಗಳು ಮತ್ತು ಅವುಗಳಿಗೆ ಇರುವ ಕಾರಣಗಳನ್ನಷ್ಟೆ ಹೇಳಬೇಕು.**
**ಈ ಪ್ರಶ್ನೆಯನ್ನು ಕೇಳುವ ಒಂದು ವಿಧಾನವಾಗಿ, ಮಗುವಿಗೆ ಇರಬಹುದಾದ ಚಟ ಅಥವಾ ವ್ಯಸನದಿಂದ ಹೊರಬರಲು ಸಹಾಯ ಅಥವಾ ಬೆಂಬಲವೇನಾದರೂ ಸ್ವತಃ ಮಗುವಿಗೆ ಬೇಕೇ ಎಂದು ವಿಚಾರಿಸಬಹುದು. ಜೆಜೆಬಿ ಎದುರು, ಮಗುವಿನ ಅತ್ಯಧಿಕ ಆಸಕ್ತಿಯಲ್ಲಿ ಇರುವ ರೀತಿಯ ಶಿಫಾರಸ್ಸುಗಳನ್ನು ಗುರುತಿಸುವಲ್ಲಿ ಕಾರ್ಯಕರ್ತರಿಗೆ ಈ ಪ್ರಶ್ನೆ ಸಹಾಯಕವಾಗುತ್ತದೆ.**

### ಹೇಗೆ ಮತ್ತು ಯಾರಿಗೆ ಕೇಳಬೇಕು?

ಈ ಮಾಹಿತಿಗಾಗಿ ಸ್ವತಃ ಮಗುವೇ ಬಹು ದೊಡ್ಡ ಆಕರ. ಮಗುವಲ್ಲದೇ, ಈ ಮಾಹಿತಿಗಾಗಿ ಕಾರ್ಯಕರ್ತರು ಕುಟುಂಬದಲ್ಲಿ ಅಥವಾ ಶಾಲೆಯಲ್ಲಿ ವಿಚಾರಿಸಬಹುದು. ಈ ಪ್ರಶ್ನೆಗೆ ಪ್ರತಿಕ್ರಿಯೆಗಾಗಿ ಕೇಳುವಾಗ ಕಾರ್ಯಕರ್ತರು ಇದಕ್ಕೆ ಕಾರಣಗಳನ್ನು ಸೂಚಿಸಬೇಕು.

21 (ii) ಪಠ್ಯೇತರ ಚಟುವಟಿಕೆಗಳನ್ನು ಸೂಚಿಸುತ್ತದೆ.

ಈ *'ಪಠ್ಯೇತರ ಚಟುವಟಿಕೆ'* ಎಂಬ ಪದವನ್ನು ಸ್ವಲ್ಪ ಗಮನಿಸೋಣ.

ಪಠ್ಯೇತರ ಚಟುವಟಿಕೆ ಎಂದರೆ, ಶಾಲೆಯ ಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳ *ಹೊರತಾಗಿ* ಮಗುವು ಆಸಕ್ತಿಯನ್ನು ತೋರಿಸಿರಬಹುದಾದ, ಅಥವಾ ತಾನೇ ತೊಡಗಿರುವ ಯಾವುದೇ ಚಟುವಟಿಕೆ ಎಂದರ್ಥ.

ಜೆಜೆ ವ್ಯವಸ್ಥೆಯಲ್ಲಿ ಒಳಗೊಳ್ಳುವ ಮಕ್ಕಳಲ್ಲಿ ಹಲವು ಮಕ್ಕಳು ಶಾಲೆಗೆ ಹೋಗಿರದೇನೇ ಇರಬಹುದು ಅಥವಾ ಶಾಲೆಗೆ ಹೋಗಿದ್ದರೂ ಪ್ರಾಥಮಿಕ, ಮಾಧ್ಯಮಿಕ ಅಥವಾ ಪ್ರೌಢ ಶಾಲೆಯ ಮಟ್ಟದಲ್ಲಿ ಶಾಲೆಯನ್ನು ಬಿಟ್ಟಿರಬಹುದು ಎಂಬುದನ್ನು ಮನಸ್ಸಿನಲ್ಲಿರಿಸಿಕೊಳ್ಳಿ.

ಮಗುವಿನೊಂದಿಗೆ ಸಂಭಾಷಣೆಯನ್ನು ನಡೆಸುತ್ತಲೇ ಇದನ್ನು ಗುರುತಿಸಬೇಕಾಗಿರುವುದರಿಂದ ಈ ಪ್ರಶ್ನೆಯು ಕಾರ್ಯಕರ್ತರಿಗೆ ಕ್ಲಿಷ್ಟವಾಗಬಹುದು. ಈ ಕುರಿತು ಮಾಹಿತಿಯನ್ನು ಪಡೆಯಲು ಮಗುವಿನ ತಂದೆತಾಯಿ ಮತ್ತು ಶಿಕ್ಷಕರನ್ನೂ ಕೇಳಬಹುದು.

ಇದರಲ್ಲಿ ಕೆಳಗಿನ ಕೆಲವು ಉದಾಹರಣೆಗಳು ಒಳಗೊಳ್ಳಬಹುದು:

- ಟೈಲರಿಂಗ್ ಅಥವಾ ಪೇಂಟಿಂಗ್ ಕಲಿಯಬೇಕೆಂಬ ಬಯಕೆ
- ಪ್ಲಂಬಿಂಗ್ ಅಥವಾ ಗಾರ್ಡನಿಂಗ್ ತರದ ಕಸುಬುಗಳಲ್ಲಿ ಆಸಕ್ತಿ

ಮಗುವಿನ ಪುನರ್ವಸತಿಯ ಕುರಿತು ಆದೇಶಗಳನ್ನು ಜಾರಿ ಮಾಡುವಾಗ ಜೆಜೆಬಿಗೆ ಈ ಮಾಹಿತಿಯು ಪ್ರಯೋಜನಕಾರಿಯಾಗಿರುತ್ತದೆ.

*'ಇತರ ಅಸಾಧಾರಣ ಗುಣಲಕ್ಷಣಗಳು'* ಎನ್ನುವುದರ ಕೆಲವು ಉದಾಹರಣೆಗಳು ಎಂದರೆ:

- ಹಣವನ್ನು ಸಮರ್ಥವಾಗಿ ನಿರ್ವಹಿಸುವಂಥ ಕೌಶಲ.
- ಮಹಾತ್ವಾಕಾಂಕ್ಷೆ
- ದೃಢ ನಿರ್ಧಾರ
- ಪ್ರಕೃತಿಯಲ್ಲಿ ವಿಶೇಷ ಆಸಕ್ತಿ ಅಥವಾ ಪ್ರಾಣಿಗಳ ಮೇಲೆ ಪ್ರೀತಿ
- ಆಟೋಟ ಮತ್ತು ದೇಹದಾರ್ಢ್ಯದಲ್ಲಿ ಆಸಕ್ತಿ

ವ್ಯಕ್ತಿತ್ವದ ಕೆಲವು ವಿಶಿಷ್ಟ ಲಕ್ಷಣಗಳಿಗೆ ಕೆಲವು ಉದಾಹರಣೆಗಳು ಎಂದರೆ:

- (ಕಡಿಮೆ/ಮಧ್ಯಮ/ಅಧಿಕ) ಪ್ರಮಾಣದ ನಾಚಿಕೆ ಸ್ವಭಾವ/ಸ್ನೇಹಪರತೆ,
- ಭಾವನೆಗಳು ಅಥವಾ ವಿಚಾರಗಳನ್ನು ಮೆಚ್ಚಿಕೊಳ್ಳುವ ಅಥವಾ ಗುರುತಿಸುವ ಮುಕ್ತ ಮನೋಭಾವ,
- ಎಚ್ಚರಿಕೆಯನ್ನು ವಹಿಸುವ ಸಹಜ ಪ್ರವೃತ್ತಿ (ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು, ಸಮಯ ನಿಷ್ಠೆ ಇತ್ಯಾದಿ),
- ಕೋಪದಂಥ ಭಾವನೆಗಳ ಕುರಿತು ಸೂಕ್ಷ್ಮತೆ,
- ಅಭಿಪ್ರಾಯದಲ್ಲಿ ದೃಢತೆ,
- ತಮ್ಮ ಸ್ವಮೌಲ್ಯಗಳು, ಪ್ರಾಮುಖ್ಯತೆ ಮತ್ತು ಸಾಮರ್ಥ್ಯಗಳು/ ತೋರಿಸಿಕೊಳ್ಳುವುದು/ ಭವ್ಯತೆಯಲ್ಲಿ ಉತ್ಪ್ರೇಕ್ಷಿತ ಭಾವ

## ಪ್ರಶ್ನೆ 22

22. ಮನೆಯಲ್ಲಿನ ಶಿಸ್ತಿನ ಕುರಿತು ಮಗುವಿನ ಅಭಿಪ್ರಾಯ/ಪ್ರತಿಕ್ರಿಯೆ:

### ಈ ಪ್ರಶ್ನೆ ಏಕೆ?

ಜೆಜೆಬಿ ಮಗು ಮತು ಕುಟುಂಬದ ನಡುವಿನ ಸಂಬಂಧದ ಸ್ವಭಾವವನ್ನು ಅರ್ಥ ಮಾಡಿಕೊಳ್ಳಲು ಈ ಪ್ರಶ್ನೆ ಅತ್ಯಗತ್ಯ. ಕುಟುಂಬಕ್ಕೆ ಆಪ್ತ ಸಮಾಲೋಚನೆ ಒದಗಿಸುವಂತೆ ಕಾರ್ಯಕರ್ತರು ಜೆಜೆಬಿಗೆ ಶಿಫಾರಸ್ಸು ಮಾಡಲು ಇದು ಮೂಲಭೂತ ಅಂಶವಾಗುತ್ತದೆ.

### ಈ ಪ್ರಶ್ನೆಯ ಅರ್ಥವೇನು?

ಇದು ಬಹಳ ಸೂಕ್ಷ್ಮವಾದ ಪ್ರಶ್ನೆ. ಇದನ್ನು ಜಾಗರೂಕತೆಯಿಂದ ನಿರ್ವಹಿಸಿದೇ ಇದ್ದರೆ ಇದು ತಪ್ಪು ಅರ್ಥಕ್ಕೆ ಎಡೆಮಾಡಿಕೊಟ್ಟು, ಮಗುವಿನ ಯೋಗಕ್ಷೇಮಕ್ಕೆ ಮಾರಕವಾಗಬಹುದು. ಕಾರ್ಯಕರ್ತರು ಮಗುವಿನ ಪಾಲನೆಯ ಕುರಿತು ಗಮನ ಹರಿಸಬೇಕು. ಈ ಕುರಿತು ಗಮನಿಸಬೇಕಾದ ಕೆಲವು ಅಂಶಗಳು ಎಂದರೆ:

ಮಗು ಏನಾದರೂ ತಪ್ಪು ಮಾಡಿದಾಗ ತಂದೆತಾಯಿ ಹೇಗೆ ಪ್ರತಿಕ್ರಿಯಿಸುತ್ತಾರೆ? ಅವರು ಮಗುವಿನೊಂದಿಗೆ ಕುಳಿತು ಆ ಸಮಸ್ಯೆಯ ಕುರಿತು ಚರ್ಚಿಸುತ್ತಾರೆಯೇ? ತನ್ನ ತಪ್ಪಿನ ಕುರಿತು ಮಗು ತಂದೆತಾಯಿಯೊಂದಿಗೆ ಮುಕ್ತವಾಗಿ ಮಾತಾಡುತ್ತದೆಯೇ? (ಇದನ್ನು, *'ಸಮಾನಾತ್ಮಕ ಪಾಲನೆ'* ಎನ್ನುತ್ತಾರೆ).

ತಂದೆತಾಯಿ ಮಗುವಿನ ಮಾತನ್ನು ಲೆಕ್ಕಿಸದೇ ಅದರ ಮೇಲೆ ಶಿಸ್ತನ್ನು ಹೇರುತ್ತಾರೆಯೇ? ತನ್ನ ತಪ್ಪಿನ ಕುರಿತು ತನ್ನ ಅಭಿಪ್ರಾಯವನ್ನು ಹೇಳಲು ಮಗು ಭಯಪಡುತ್ತದೆಯೇ? (ಇದನ್ನು, *'ಸರ್ವಾಧಿಕಾರಿ ಪಾಲನೆ'* ಎನ್ನುತ್ತಾರೆ).

ತಂದೆತಾಯಿ ಮಗುವಿನೊಂದಿಗೆ ಅದರ ಬೆಸ್ಟ್ ಫ್ರೆಂಡ್ ತರಹ ವರ್ತಿಸುತ್ತಾರೆಯೇ? ಮಗು ತನ್ನ ನಿರ್ಧಾರವನ್ನು ತಾನೇ ಮಾಡುವುದಕ್ಕೆ ಬಿಡುತ್ತಾರೆಯೇ? ತಮ್ಮ ಮೇಲೆ ಅದು ಹೆಚ್ಚುವರಿ ಕೆಲಸವಾಗಿದ್ದರೂ ತಂದೆತಾಯಿ ಮಗು ಬಯಸಿದ್ದನ್ನೆಲ್ಲಾ ಒದಗಿಸುತ್ತಾರೆಯೇ? (ಇದನ್ನು, *'ಅನಿರ್ಬಂಧಿತ ಪಾಲನೆ'* ಎನ್ನುತ್ತಾರೆ).

ತನ್ನ ಅಗತ್ಯದ ಕುರಿತು ತಂದೆತಾಯಿ ಪೂರ್ಣ ಅಲಕ್ಷಿಸುತ್ತಾರೆ ಎಂದು ಮಗುವಿಗೆ ಅನ್ನಿಸುತ್ತದೆಯೇ? ತಂದೆತಾಯಿ ಮಗುವಿಗಾಗಿ ಅಡುಗೆ ಮಾಡುವುದನ್ನೂ, ಅಥವಾ ದಿನಸಿಯನ್ನು ಖರೀದಿಸುವುದನ್ನು ಮರೆತು, ಮಗು ತನ್ನ ವ್ಯವಸ್ಥೆಯನ್ನು ತಾನೇ ನೋಡಿಕೊಳ್ಳುವ ಸಂದರ್ಭಗಳು ಇದ್ದವೇ? (ಇದನ್ನು *'ನಿರ್ಲಕ್ಷ್ಯದ ಪಾಲನೆ'* ಎನ್ನುತ್ತಾರೆ).

ಮಗುವನ್ನು 'ಶಿಸ್ತುಬದ್ಧಗೊಳಿಸುವ' ಸಲುವಾಗಿ ಅದರ ಮೇಲೆ ದೈಹಿಕ ಹಿಂಸೆಯ ವಿಧಾನವನ್ನು ಅನುಸರಿಸಿದ ಉದಾಹರಣೆಗಳು ಇವೆಯೇ ಎಂಬುದನ್ನು ಕಾರ್ಯಕರ್ತರು ಪರಿಶೀಲಿಸಬೇಕು. ಎಂದರೆ, ಇದಕ್ಕಾಗಿ ಮಗುವಿಗೆ ಊಟ ಕೊಟ್ಟಿರಲಿಲ್ಲವೇ, ಅಥವಾ ಇತರ ಯಾವುದಾದರೂ ಮೂಲಭೂತ ಅಗತ್ಯವನ್ನು ನಿರಾಕರಿಸಿದ್ದರೇ ಎಂಬುದನ್ನು ತಿಳಿಯಬೇಕು.

### ಈ ಪ್ರಶ್ನೆಯನ್ನು ಯಾರಿಗೆ ಕೇಳಬೇಕು?

ಈ ಪ್ರಶ್ನೆಯನ್ನು ಮಗುವಿಗೂ ಕೇಳಬೇಕು, ಮತ್ತು ಮನೆ ಭೇಟಿಯ ಸಂದರ್ಭದಲ್ಲಿ ಕುಟುಂಬದವರಿಗೂ ಕೇಳಬೇಕು.

### ಮಗುವಿನ ಉದ್ಯೋಗ ಸಂಬಂಧಿ ಇತಿಹಾಸ (ಪ್ರಶ್ನೆ 23–25)

23. ಮಗುವಿನ ಉದ್ಯೋಗದ ವಿವರ, ಇದ್ದರೆ.....................................

24. ಆದಾಯದ ಬಳಕೆಯ ವಿವರ ಮತ್ತು ಸ್ವಭಾವ.................................

25. ಕೆಲಸದ ದಾಖಲೆ (ಉದ್ಯೋಗದ ಆಸಕ್ತಿಯನ್ನು ಕೈಬಿಟ್ಟಿದ್ದಕ್ಕೆ ಕಾರಣಗಳು, ಕೆಲಸ ಅಥವಾ ಉದ್ಯೋಗದ ಕುರಿತು ಧೋರಣೆ.....................................

## ಪ್ರಶ್ನೆ 23

### ಈ ಪ್ರಶ್ನೆ ಏಕೆ ಬೇಕು?

ಈ ವಿಭಾಗದಲ್ಲಿನ ಪ್ರಶ್ನೆಗಳ ಉದ್ದೇಶ ಮಗು ನಿರ್ವಹಿಸಿದ ಜವಾಬ್ದಾರಿಗಳನ್ನು, ಮಗು ಹಣವನ್ನು ಹೇಗೆ ಬಳಸಿತು/ಉಳಿಸಿತು, ಮತ್ತು ಕೆಲಸದೊಂದಿಗೆ ಅದರ ಸಂಬಂಧ– ಇದರ ಕುರಿತು ತಿಳಿದುಕೊಳ್ಳುವುದಾಗಿದೆ.

### ಈ ಪ್ರಶ್ನೆಯ ಅರ್ಥವೇನು?

ಕಾರ್ಯಕರ್ತರು ಬಾಲ ಮತ್ತು ಹರೆಯದ ಕಾರ್ಮಿಕತೆ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಕುರಿತು ತಿಳಿದುಕೊಂಡಿರಬೇಕು.

ಮಗುವಿನ ವಯಸ್ಸು 14 ವರ್ಷಕ್ಕಿಂತ ಕಡಿಮೆಯಾಗಿದ್ದರೆ ಮತ್ತು ಆ ಮಗುವನ್ನು ಕಾಯ್ದೆಯ ಸೆಕ್ಷನ್ 3(2)ರ ಅಡಿಯಲ್ಲಿ ಹೇಳಿರುವುದಕ್ಕಿಂತ ಭಿನ್ನವಾದ ಯಾವುದಾದರೂ ಉದ್ಯೋಗದಲ್ಲಿ ಅಥವಾ ಪ್ರಕ್ರಿಯೆಯಲ್ಲಿ ನೇಮಕ ಮಾಡಿದ್ದರೆ, ಅದನ್ನು ಬಾಲ ಕಾರ್ಮಿಕತೆಯ ವಿರುದ್ಧದ ಮಗುವಿನ ಹಕ್ಕಿನ ಉಲ್ಲಂಘನೆ ಎಂದು ಪರಿಗಣಿಸಲಾಗುವುದು. ಹದಿಹರೆಯದವರನ್ನೂ (14ರಿಂದ 18ರ ಒಳಗಿನ ವಯಸ್ಸಿನವರು) ಅಪಾಯಕಾರಿ ಕೆಲಸಗಳು ಮತ್ತು ಪ್ರಕ್ರಿಯೆಗಳಲ್ಲಿ ನೇಮಕ ಮಾಡಬಾರದು.

ಕಾರ್ಯಕರ್ತರಿಗೆ ಅಂಥ ನಿದರ್ಶನಗಳು ಕಂಡುಬಂದಲ್ಲಿ, ಅದನ್ನು ಎಸ್‌ಐಆರ್‌ನಲ್ಲಿ ಹೇಳಬೇಕು ಮತ್ತು ಕಾಯ್ದೆಯ ಉಲ್ಲಂಘನೆ ಹೇಗೆ ಆಗಿದೆ ಎಂಬುದರ ವಿವರಗಳನ್ನೂ ಬರೆಯಬೇಕು. ಇಲ್ಲಿ ಇರುವ ಮಗುವನ್ನು ಇನ್ನು ಮುಂದೆ ಸಿಐಎನ್‌ಸಿಪಿ ಎಂಬ ವರ್ಗದಲ್ಲಿರಿಸಿ ನೋಡಲಾಗುವುದು. ಇದು ಬಹಳ ಮುಖ್ಯ, ಏಕೆಂದರೆ, ಜೆಜೆಬಿಯು ಸಿಡಬ್ಲ್ಯುಸಿ ಜೊತೆ ಕೆಲಸ ಮಾಡಿ ಮಗುವನ್ನು (ಜೆಜೆ ಕಾಯ್ದೆಯ ಸೆಕ್ಷನ್ 8(ಜಿ) ಅನ್ವಯ) ಸಿಐಎನ್‌ಸಿಪಿ ಎಂದು ಘೋಷಿಸಲು ಅಗತ್ಯವಾದ ಕ್ರಮವನ್ನು ಕೈಗೊಳ್ಳಬಹುದು.

ಮಗುವನ್ನು ಸಂದರ್ಶಿಸುವ ಹೊರತಾಗಿ, ಕಾರ್ಯಕರ್ತರು ಮಗು ಕೆಲಸ ಮಾಡುವ ಸ್ಥಳಕ್ಕೆ ಭೇಟಿ ನೀಡಿ, ಉದ್ಯೋಗದಾತರ ವಿವರಗಳನ್ನು ಸಂಗ್ರಹಿಸಬೇಕು.

### ಈ ಪ್ರಶ್ನೆಯನ್ನು ಕೇಳುವುದು ಹೇಗೆ?

ಮಗು ಏಕೆ, ಹೇಗೆ ಮತ್ತು ಯಾವ ವಯಸ್ಸಿನಲ್ಲಿ ಕೆಲಸವನ್ನು ಮಾಡತೊಡಗಿತು ಎಂದು ಕೇಳುವುದು ಬಹಳ ಮುಖ್ಯ. ಆ ವಯಸ್ಸಿನಲ್ಲಿ ಮಗುವ ದುಡಿಮೆಗೆ ತೊಡಗಿದ್ದು ಏಕೆ ಎಂದು ತಿಳಿಯುವುದೂ ಬಹಳ ಮುಖ್ಯ. ವಿಚಾರಿಸಬೇಕಾದ ಕೆಲವು ಅಂಶಗಳು ಹೀಗಿವೆ:

- ಮಗು ಕೆಲಸದ ಸ್ಥಳವನ್ನು ಸೇರಲು ಬಲವಂತ ಮಾಡಲಾಗಿತ್ತೇ?
- ಮಗು ಕುಟುಂಬಕ್ಕೆ ನೆರವಾಗಲು ದುಡಿಮೆಗೆ ಸೇರಬೇಕಾಯಿತೇ? ಅಥವಾ
- ತನ್ನ ಶಾಲೆಯ ಶುಲ್ಕವನ್ನು ನೀಡಲು ಅಥವಾ ಶಾಲಾ ಪರಿಸರ ಸರಿಹೋಗದೇ ಕೆಲಸವನ್ನು ಸೇರಬೇಕಾಗಿ ಬಂತೇ? ಅಥವಾ
- ಮಗು ಮನೆಯ ಹಿಂಸಾತ್ಮಕ ವಾತಾವರಣದಿಂದ ದೂರವಿರಲು ಕೆಲಸಕ್ಕೆ ಸೇರಬೇಕಾಯಿತೇ?

## ಪ್ರಶ್ನೆ 24

ಆದಾಯದ ಬಳಕೆಯ ಪ್ರಶ್ನೆಯನ್ನು ಉತ್ತರಿಸುವಾಗ, ಕಾರ್ಯಕರ್ತರು ಅದನ್ನು ಕಾರಣಗಳಿಂದ ಸಮರ್ಥಿಸುವುದು ಮುಖ್ಯ. ಉದಾಹರಣೆಗೆ, ತನ್ನ ದುಡಿಮೆಯಿಂದ ಬಂದ ಆದಾಯವನ್ನು ಮನೆಗೆ ಅಗತ್ಯವಾದ ವಸ್ತುಗಳನ್ನು ಖರೀದಿಸಲು ಮತ್ತು ಸಿನಿಮಾ ನೋಡಲು ಬಳಸಲಾಗುತ್ತದೆ ಎಂದು ಮಗು ಹೇಳಿದರೆ, ಕಾರ್ಯಕರ್ತ, ಯಾವುದೇ ಪೂರ್ವಗ್ರಹವಿಲ್ಲದೆ, ಅದಕ್ಕೆ ಕಾರಣಗಳಿಗಾಗಿ ವಿಚಾರಿಸಬೇಕು. ಅದು, ತಮ್ಮ ಬದುಕಿನ ಕಠೋರ ವಾಸ್ತವತೆಯಿಂದ ತಪ್ಪಿಸಿಕೊಳ್ಳುವ ಮಗುವಿನ ವಿಧಾನವಾಗಿರಬಹುದು. ಮಗು ತಮ್ಮದೇ ಆದ ಕಾರಣಗಳನ್ನು ಹೇಳುವವರೆಗೆ ಕಾರ್ಯಕರ್ತರು ಈ ಕುರಿತು ಯಾವುದೇ ತೀರ್ಮಾನಗಳನ್ನು **ಮಾಡದೇ ಇರುವುದು** ಬಹಳ ಮುಖ್ಯ.

## ಪ್ರಶ್ನೆ 25

ಕೆಲಸದ ದಾಖಲೆಯ ಸ್ಥಿತಿಯ ಕುರಿತು ಕೇಳಿದಾಗ, ಕಾರ್ಯಕರ್ತ ಅದನ್ನು ಈ ಕೆಳಗಿನಂತೆ ತುಂಬಬಹುದು–

- ನಿಯತಕಾಲಿಕ,
- ಅನಿಯತಕಾಲಿಕ,
- ಕೆಲಸದಿಂದ ಗೈರುಹಾಜರು

ಆದಾಗ್ಯೂ, ಇವುಗಳಿಗೆ ಇರುವ ಕಾರಣಗಳನ್ನು ದಾಖಲಿಸಬೇಕು.

**ಮಗುವಿನ ಶೈಕ್ಷಣಿಕ ಹಿನ್ನೆಲೆ (ಪ್ರಶ್ನೆ 26–31)**

## ಪ್ರಶ್ನೆ 26

**26. ಮಗುವಿನ ಶಿಕ್ಷಣದ ವಿವರ:**

(i) ಅನಕ್ಷರಸ್ಥ

(ii) 5ನೇ ತರಗತಿವರೆಗೆ ಓದಿದೆ

(iii) 5ನೇ ತರಗತಿವರೆಗೆ ಆದರೆ 8ನೇ ತರಗತಿಗಿಂತ ಕಡಿಮೆ ಓದಿದೆ

(iv) 8ನೇ ತರಗತಿಗಿಂತ ಹೆಚ್ಚು ಆದರೆ 10ನೇ ತರಗತಿಗಿಂತ ಕಡಿಮೆ ಓದಿದೆ

(v) 10ನೇ ತರಗತಿಗಿಂತ ಹೆಚ್ಚು ಓದಿದೆ

**27. ಮಗುವಿನ ಕುರಿತು ಸಹಪಾಠಿಗಳ ಧೋರಣೆ..................................**

**28. ಮಗುವಿನ ಕುರಿತು ಶಿಕ್ಷಕರು ಮತ್ತು ಸಹಪಾಠಿಗಳ ಧೋರಣೆ..................................**

**29. ಶಾಲೆಯನ್ನು ಬಿಟ್ಟಿದ್ದಕ್ಕೆ ಕಾರಣ (ಅನ್ವಯವಾಗುವ ಹಾಗೆ, ಹೌದು/ಇಲ್ಲ ಟಿಕ್ ಮಾಡಿ)**

| | |
|---|---|
| (i) ಕಡೆಯದಾಗಿ ಓದಿದ ತರಗತಿಯಲ್ಲಿ ಅನುತ್ತೀರ್ಣ | ಹೌದು/ಇಲ್ಲ |
| (ii) ಶಾಲಾ ಚಟುವಟಿಕೆಯಲ್ಲಿ ನಿರಾಸಕ್ತಿ | ಹೌದು/ಇಲ್ಲ |
| (iii) ಶಿಕ್ಷಕರ ಅಸಡ್ಡೆಯ ಮನೋಭಾವ | ಹೌದು/ಇಲ್ಲ |
| (iv) ಸಹವರ್ತಿಗಳ ಪ್ರಭಾವ | ಹೌದು/ಇಲ್ಲ |
| (v) ದುಡಿದು ಕುಟುಂಬವನ್ನು ಬೆಂಬಲಿಸುವುದು | ಹೌದು/ಇಲ್ಲ |
| (vi) ತಂದೆತಾಯಿಯರ ಹಠಾತ್ ಮರಣ | ಹೌದು/ಇಲ್ಲ |
| (vii) ಶಾಲೆಯಲ್ಲಿ ಆಗುವ ದಬ್ಬಾಳಿಕೆ | ಹೌದು/ಇಲ್ಲ |
| (viii) ಶಾಲೆಯ ಅತಿ ಕಟ್ಟುನಿಟ್ಟಿನ ವಾತಾವರಣ | ಹೌದು/ಇಲ್ಲ |
| (ix) ಮತ್ತೆ ಮತ್ತೆ ಗೈರುಹಾಜರಿ, ಅದರ ನಂತರ ಶಾಲೆಯಿಂದ ಓಡಿಹೋಗುವುದು ಹತ್ತಿರದಲ್ಲಿ | ಹೌದು/ಇಲ್ಲ |
| (x) ಹತ್ತಿರದಲ್ಲಿ ವಯಸ್ಸಿಗೆ ಸರಿಯಾದ ಶಾಲೆಯಿಲ್ಲ | ಹೌದು/ಇಲ್ಲ |
| (xi) ಶಾಲೆಯಲ್ಲಿ ದುರಾಚಾರ | ಹೌದು/ಇಲ್ಲ |
| (xii) ಶಾಲೆಯಲ್ಲಿ ಅಪಹಾಸ್ಯ | ಹೌದು/ಇಲ್ಲ |
| (xiii) ದೈಹಿಕ ಶಿಕ್ಷೆ (ಕಾರ್ಪರಲ್ ಪನಿಷ್‌ಮೆಂಟ್) | ಹೌದು/ಇಲ್ಲ |
| (xiv) ಕಲಿಸುವ ಮಾಧ್ಯಮ | ಹೌದು/ಇಲ್ಲ |
| (xv) ಇತರೆ (ನಿರ್ದಿಷವಾಗಿ ಸೂಚಿಸಿ) | ಹೌದು/ಇಲ |

**ಈ ಪ್ರಶ್ನೆಗಳು ಏಕೆ?**

ಈ ವಿಭಾಗದಲ್ಲಿನ ಪರಿಣಾಮಕಾರಿ ಪ್ರತಿಕ್ರಿಯೆಗಳು ಮಗುವಿನ ಶೈಕ್ಷಣಿಕ ಹಿನ್ನೆಲೆ ಮಾತ್ರವಲ್ಲ, ಎಂದರೆ ಮಗು ಎಷ್ಟನೇ ತರಗತಿವರೆಗೆ ಶಾಲೆಯಲ್ಲಿ ಓದಿದೆ ಎನ್ನುವುದಷ್ಟೆ ಅಲ್ಲ, ಮಗುವಿಗೆ ಇರಬಹುದಾದ ತಿಳಿವಳಿಕೆಯ ಮಟ್ಟ, ಮಗುವಿಗೆ ಆಸಕ್ತಿ ಇದ್ದರೆ ಶಿಕ್ಷಣವನ್ನು ಮುಂದುವರೆಸುವುದು ಅಥವಾ ಮಗುವಿನ ಭವಿಷ್ಯದ ಉದ್ಯೋಗದ ಅವಕಾಶಗಳನ್ನು ಉತ್ತಮಗೊಳಿಸುವ ಪರ್ಯಾಯ ಆಯ್ಕೆಗಳು– ಇವುಗಳ ಕುರಿತು ಅರ್ಥ ಮಾಡಿಕೊಳ್ಳಲು ಜೆಜೆಬಿಗೆ ಸಹಾಯಕವಾಗುತ್ತವೆ.

**ಈ ಪ್ರಶ್ನೆಯ ಅರ್ಥವೇನು?**

ಈ ಪ್ರಶ್ನೆಯು, 'ಅನಕ್ಷರಸ್ಥ', '5ನೇ ತರಗತಿವರೆಗೆ ಓದಿದೆ' ಇತ್ಯಾದಿ ವರ್ಗಗಳನ್ನು ಸ್ಥೂಲವಾದ ವರ್ಗಗಳನ್ನು ಸ್ಥಾಪಿಸುತ್ತದೆ.

ಇಲ್ಲಿ, 'ಅನಕ್ಷರಸ್ಥ' ಎಂದರೆ ಮಗು ಔಪಚಾರಿಕ ಶಿಕ್ಷಣವನ್ನು ಪಡೆದೇ ಇಲ್ಲ ಎಂದು ಅರ್ಥ ಎಂಬುದನ್ನು ಕಾರ್ಯಕರ್ತರು ಗಮನಿಸಬೇಕು.

❖ 26ನೇ ಪ್ರಶ್ನೆಯನ್ನು ನಿರ್ವಹಿಸುವಾಗ, ಕಾರ್ಯಕರ್ತರು ಮಗು ಎಷ್ಟನೇ ತರಗತಿಯ ವರೆಗೆ ಓದಿದೆ ಎಂಬುದನ್ನು ನಿರ್ದಿಷ್ಟವಾಗಿ ನಮೂದಿಸಿ–ಮುಂದೆ, 'ಮುಂದುವರೆದಿದೆ', ಅಥವಾ 'ನಿಲ್ಲಿಸಿದೆ' ಎಂದು ಸೂಚಿಸಬೇಕು. ಮಗು ಶಿಕ್ಷಣವನ್ನು ಮುಂದುವರೆಸುವ ಆಸಕ್ತಿಯನ್ನು ತೋರಿದರೆ, ಕಾರ್ಯಕರ್ತರು ಇದನ್ನು ದಾಖಲಿಸಬೇಕು.

ಮಗುವನ್ನು ಯಾವಾಗಲಾದರೂ ಬೌದ್ಧಿಕ ಅಸಾಮರ್ಥ್ಯಕ್ಕಾಗಿ, ಕಲಿಕೆಯ ಅಸಾಮರ್ಥ್ಯಕ್ಕಾಗಿ ಪರಿಶೀಲಿಸಿ, ಏನಾದರೂ ತೀರ್ಮಾನಕ್ಕೆ ಬರಲಾಗಿತ್ತೇ ಎಂಬುದನ್ನೂ ಪರಿಶೀಲಿಸುವುದು ಮುಖ್ಯ.

ಇದಕ್ಕಾಗಿ, ಮಗುವನ್ನು ಶಾಲೆಯಲ್ಲಿ ಅಥವಾ ಇನ್ನಾವುದಾದರೂ ಮಾನಸಿಕ ಆರೋಗ್ಯ ತಜ್ಞರಿಂದ ಐಕ್ಯು ಪರೀಕ್ಷೆ ಅಥವಾ ಇನ್ನಾವುದೇ ರೀತಿಯ ಮೌಲ್ಯಮಾಪನ ಮಾಡಲಾಗಿತ್ತೇ ಎಂದು ವಿಚಾರಿಸಬಹುದು.

ಕಾರ್ಯಕರ್ತರು ಅನುಸರಿಸಬಹುದಾದ ಇನ್ನೊಂದು ವಿಧಾನವೆಂದರೆ, ಒಂದು ಪ್ಯಾರಾಗ್ರಾಫನ್ನು ಅಥವಾ ಒಂದು ಕಥೆಯ ಕೆಲವು ಸಾಲುಗಳನ್ನು ಮಗುವಿಗೆ ಕೊಟ್ಟು ಓದಲು ಹೇಳುವುದು. ಮಗು ಅಕ್ಷರಗಳು/ಪದಗಳು/ವಾಕ್ಯಗಳನ್ನು ಎಷ್ಟು ಸುಲಭವಾಗಿ ಓದುತ್ತದೆ ಎನ್ನುವುದರಿಂದ ಕಾರ್ಯಕರ್ತರಿಗೆ ಮಗುವಿನ ಓದುವ ಸಾಮರ್ಥ್ಯದ ಒಂದು ಅಂದಾಜು ಸಿಗುತ್ತದೆ. ಜೆಜೆಬಿ ಎದುರು ಕಾರ್ಯಕರ್ತರು ಮಾಡುವ ಶಿಫಾರಸ್ಸುಗಳ ಮೇಲೆಯೂ ಇದು ಪ್ರಭಾವವನ್ನು ಬೀರಬಲ್ಲುದು.

ಉದಾಹರಣೆಗೆ, ಐದನೇ ತರಗತಿಯನ್ನು ಪಾಸು ಮಾಡಿರುವ ಮಗುವಿಗೆ, ಒಂದು ಸರಳವಾದ ಕಥೆಯ ಕೆಲವು ಸಾಲುಗಳನ್ನು ಓದಲು ಸಾಧ್ಯವಾಗದಿದ್ದರೆ ಅಥವಾ ಎರಡನೇ ತರಗತಿಯಲ್ಲಿ ಕಲಿತಿರುವ ಸಂಖ್ಯೆಗಳನ್ನು ಗುರುತಿಸಲು ಅಥವಾ ಲೆಕ್ಕಹಾಕಲು ಸಾಧ್ಯವಾಗದಿದ್ದರೆ, ಮಗುವಿನ ಶೈಕ್ಷಣಕ ಮಟ್ಟವು ನಿರೀಕ್ಷೆಯ ಮಟ್ಟಕ್ಕಿಂತ ಕೆಳಗಿದೆ ಎನ್ನಬಹುದು. ಅದಕ್ಕನುಗುಣವಾಗಿ, ಹೀಗೆ ಆಗಲು ಕಾರಣವೇನು ಎಂದು ಮಗುವಿಗೇ ಕೇಳಬಹುದು. ಆಸಕ್ತಿಯ ಕೊರತೆಯೇ? ತರಗತಿಯಲ್ಲಿ ಕಲಿಸಿದ್ದನ್ನು ಅರ್ಥ ಮಾಡಿಕೊಳ್ಳುವಲ್ಲಿ ತೊಂದರೆಯೇ? ಶಾಲೆಯ/ಮನೆಯ ಪರಿಸರ ಅದಕ್ಕೆ ಕಾರಣವೇ? ಇತ್ಯಾದಿ.

ಇದನ್ನು ಅನುಸರಿಸಿ ಕಾರ್ಯಕರ್ತರು ಜೆಜೆಬಿಗೆ ಸೂಕ್ತವಾದ ಶಿಫಾರಸ್ಸುಗಳನ್ನು ಮಾಡಬಹುದು.

**ಹೇಗೆ ಮತ್ತು ಯಾರಿಗೆ ಕೇಳುವುದು?**

ಈ ಮಾಹಿತಿಯನ್ನು ಮಗುವಿನಿಂದ ಅಥವಾ ಮನೆ ಭೇಟಿಯ ವೇಳೆಯಲ್ಲಿ ಕುಟುಂಬದವರಿಂದ ಕೇಳಿ ತಿಳಿಯಬಹುದು. ಮಗು ಶಿಕ್ಷಣವನ್ನು ಮುಂದುವರೆಸಿದ್ದರೆ ಅಥವಾ ಶಾಲೆಯನ್ನು ಇತ್ತೀಚೆಗಷ್ಟೆ ಬಿಟ್ಟಿದ್ದರೆ, ಕಾರ್ಯಕರ್ತರು ಶಾಲೆಯ ಪ್ರಿನ್ಸಿಪಾಲರು ಅಥವಾ ಶಿಕ್ಷಕರನ್ನು ಮಾತಾಡಿಸಿ, ಮಗುವಿನ ಒಟ್ಟಾರೆ ಶೈಕ್ಷಣಿಕ ಜಾಣ್ಮೆ, ಮುಂದುವರೆದ ಶಿಕ್ಷಣದ ಸಾಧ್ಯತೆಗಳ ಕುರಿತು ತಿಳಿದುಕೊಳ್ಳಬಹುದು.

## ಪ್ರಶ್ನೆ 27–28

ಈ ಪ್ರಶ್ನೆಗಳಿಗೆ ಪ್ರತಿಕ್ರಿಯೆಗಳನ್ನು ಮಗು ಮತ್ತು ಕುಟುಂಬದವರ ಜೊತೆಗಿನ ಸಂದರ್ಶನದ ಮೂಲಕ ಪಡೆದುಕೊಳ್ಳಬೇಕು. ಜೊತೆಗೆ ಶಾಲೆಯ ಪ್ರಿನ್ಸಿಪಾಲರು ಮತ್ತು ಶಿಕ್ಷಕರನ್ನೂ ಸಂದರ್ಶಿಸಬಹುದು.

## ಪ್ರಶ್ನೆ 29

29ನೇ ಪ್ರಶ್ನೆಯ ಕುರಿತು ಪ್ರಾಥಮಿಕವಾಗಿ ಮಗುವಿನೊಂದಿಗೆ ವಿಚಾರಿಸಿದ ನಂತರ, ಕಾರ್ಯಕರ್ತರು ಮಗು ಶಾಲೆ ಬಿಟ್ಟಿದ್ದಕ್ಕೆ ಕಾರಣಗಳನ್ನು ವಿವರಿಸಬೇಕು. ಉದಾಹರಣೆಗೆ, ಮಗು ಅದಕ್ಕೆ ಕಾರಣ ತನ್ನೊಂದಿಗಾದ ದುರಾಚಾರ ಎಂದು ಹೇಳಿದರೆ, ಅದು ಮಾತಿನಲ್ಲಿ, ದೈಹಿಕವಾಗಿ, ಭಾವನಾತ್ಮಕವಾಗಿ ಅಥವಾ ಲೈಂಗಿಕವಾಗಿ– ಹೇಗಾದರೂ ಆಗಿರಬಹುದು, ಕಾರ್ಯಕರ್ತರು ಅದನ್ನು ಯಥಾವತ್ ವರದಿ ಮಾಡಬೇಕು. ನೆನಪಿರಲಿ, ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯದ ಪ್ರಕರಣಗಳನ್ನು ಕಡ್ಡಾಯವಾಗಿ ವರದಿ ಮಾಡಬೇಕು.

ಪ್ರಶ್ನೆ 26ರ ಪ್ರಕಾರ ('ಅನಕ್ಷರಸ್ಥ' ಎಂದು ನಮೂದಿಸಿ) ಮಗು ಶಾಲೆಗೆ ಹೋಗಿಲ್ಲವಾದರೆ ಪ್ರಶ್ನೆ 29ನ್ನು 'ಔಪಚಾರಿಕ ಶಾಲೆಗೆ ಹೊಗದೇ ಇರುವುದಕ್ಕೆ ಕಾರಣ' ಎಂದು ಓದಿಕೊಳ್ಳಬೇಕು,

## ಪ್ರಶ್ನೆ 30

| |
|---|
| **30. ಕೊನೆಯಲ್ಲಿ ಓದಿದ ಶಾಲೆಯ ವಿವರ:**<br>(i) ಕಾರ್ಪೊರೇಷನ್/ಮುನಿಸಿಪಲ್/ಪಂಚಾಯತಿ ಶಾಲೆ<br>(ii) ಸರಕಾರಿ/ಪ.ಜಾ. ಕಲ್ಯಾಣ ಶಾಲೆ/ ಹಿಂ.ವ. ಕಲ್ಯಾಣ ಶಾಲೆ<br>(iii) ಖಾಸಗಿ ಶಾಲೆ<br>(iv) ಎನ್‌ಸಿಎಲ್‌ಪಿ ಅಡಿಯಲ್ಲಿನ ಶಾಲೆ |

ಇದಕ್ಕೆ ಉತ್ತರವನ್ನು ಶಾಲೆಯ ಹೆಸರಿನ ಸಹಿತವಾಗಿ ಬರೆಯಬೇಕಾಗುವುದು. ಆಯ್ಕೆ (iv)ರಲ್ಲಿ ನ್ಯಾಷನಲ್ ಚೈಲ್ಡ್ ಲೇಬರ್ ಪ್ರಾಜೆಕ್ಟ್ ಸ್ಕೀಮ್ ಅಡಿಯಲ್ಲಿ ಬರುವ ಹೆಸರನ್ನು ಬರೆಯಿರಿ.

## ಪ್ರಶ್ನೆ 31

| |
|---|
| 31. ವೃತ್ತಿ ತರಬೇತಿ, ಇದ್ದರೆ......................... |

ಮಗು ಯಾವುದಾದರೂ ವೃತ್ತಿ ತರಬೇತಿಯನ್ನು ಪಡೆಯುತ್ತಿದ್ದರೆ, ಇದು ಮಗುವಿನ ಐಸಿಪಿಯನ್ನು ರೂಪಿಸುವುದರಲ್ಲಿ ಸಹಾಯಕವಾಗಬಹುದು ಮತ್ತು ಜೆಜೆಬಿಯು ತಾನು ಹೊರಡಿಸುವ ಆದೇಶದಲ್ಲಿ ಮಗು ತನ್ನ ಆಸಕ್ತಿಗಳನ್ನು ಅನುಸರಿಸಲು ಅಗತ್ಯವಾದ ಬೆಂಬಲ ಒದಗಿಸುವುದನ್ನು ಸೇರಿಸಲು ಸಹಾಯಕವಾಗುತ್ತದೆ.

### ಮಗುವಿನ ಸಾಮಾಜಿಕ ಸಂಬಂಧಗಳು (ಪ್ರಶ್ನೆ 32–36)

| |
|---|
| **32. ಸ್ನೇಹಿತರಲ್ಲಿ ಹೆಚ್ಚಿನವರು ಶಿಕ್ಷಿತರು**<br>(i) ಶಿಕ್ಷಿತರು<br>(ii) ಅನಕ್ಷರಸ್ಥರು<br>(iii) ಸಮಾನ ವಯಸ್ಕರು<br>(iv) ವಯಸ್ಸಿನಲ್ಲಿ ದೊಡ್ಡವರು<br>(v) ವಯಸ್ಸಿನಲ್ಲಿ ಚಿಕ್ಕವರು<br>(vi) ಸಮಾನ ಲಿಂಗದವರು<br>(vii) ವಿರುದ್ಧ ಲಿಂಗದವರು<br>(viii) ವ್ಯಸನಿಗಳು<br>(ix) ಅಪರಾಧಿಕ ಹಿನ್ನೆಲೆ ಉಳ್ಳವರು<br>33. **ಸ್ನೇಹಿತರ ಕುರಿತು ಮಗುವಿನ ಧೋರಣೆ**................................................<br>**34. ಮಗುವಿನ ಕುರಿತು ಸ್ನೇಹಿತರ ದೋರಣೆ**...............................................<br>**35. ಮಗುವಿನ ಕುರಿತು ನೆರೆಹೊರೆಯವರ ಅಭಿಪ್ರಾಯ**...............................................<br>**36. ನೆರೆಹೊರೆಯವರ ಕುರಿತು ಮಗುವಿನ ಅಭಿಪ್ರಾಯ (ಮಗುವಿನ ಮೇಲೆ ನೆರೆಹೊರೆಯವರ ಪ್ರಭಾವವನ್ನು ಅರ್ಥ ಮಾಡಿಕೊಳ್ಳಲು)** |

### ಈ ಪ್ರಶ್ನೆಗಳು ಏಕೆ?

- ❖ ಸಾಮಾಜಿಕ ವಲಯಗಳನ್ನು, ಮತ್ತು
- ❖ ಅವರ ನಡುವಿನ ಪರಸ್ಪರ ಒಡನಾಟದ ಸ್ವಭಾವವನ್ನು ನಿರ್ಧರಿಸಲು ಈ ಪ್ರಶ್ನೆಗಳು ಜೆಜೆಬಿಗೆ ಸಹಾಯಕವಾಗುತ್ತವೆ.

ಸ್ನೇಹಿತರು ಮಗುವಿಗೆ ಏನೇನನ್ನು ಪರಿಚಯಿಸಿರಬಹುದು ಮತ್ತು ಅವರು, ಜಗತ್ತಿನ ಕುರಿತು ಮಗುವಿನ ಮನೋಭಾವ ಮತ್ತು ಅದು ಮಾಡಿಕೊಳ್ಳುವ ಆಯ್ಕೆಗಳ ಮಟ್ಟಿಗೆ ಮಗುವಿನ ಬೆಳವಣಿಗೆಯ ಮೇಲೆ ಹೇಗೆ ಪ್ರಭಾವವನ್ನು ಬೀರಿರಬಹುದು ಎಂಬುದನ್ನು ತಿಳಿಯಲು ಸಹಾಯಕವಾಗುತ್ತದೆ.

### ಈ ಪ್ರಶ್ನೆಗಳ ಅರ್ಥವೇನು?

ಇಲ್ಲಿ ಪ್ರಶ್ನೆ ಇರುವುದು ಮಗುವಿನ **ಸ್ನೇಹಿತರಲ್ಲಿ 'ಹೆಚ್ಚಿನವರ' ಕುರಿತು** ಎಂಬುದನ್ನು ಕಾರ್ಯಕರ್ತರು ಗಮನದಲ್ಲಿ ಇರಿಸಿಕೊಳ್ಳಬೇಕು.

ಉದಾಹರಣೆಗೆ. ಸಿಐಸಿಎಲ್‌ನ ಹೆಚ್ಚಿನ ಸ್ನೇಹಿತರು 3ನೇ ತರಗತಿಯವರೆಗೆ ಶಾಲೆಗೆ ಹಾಜರಾಗಿದ್ದರೆ ಮತ್ತು (**ಎಕ್ಸ್** ಎಂದು ಗುರುತಿಸಲಾದ) ಮಾದಕ ದ್ರವ್ಯ ಸೇವನೆಯ ವ್ಯಸನಕ್ಕೆ ಒಳಗಾಗಿರುವ ಒಬ್ಬ ಸ್ನೇಹಿತನ ಹೊರತಾಗಿ ಉಳಿದವರು ಸಿಐಸಿಎಲ್‌ನ ವಯಸ್ಸಿನವರೇ ಆಗಿದ್ದರೆ, ಕಾರ್ಯಕರ್ತರು ನಮೂನೆಯಲ್ಲಿ ಈ ರೀತಿ ನಮೂದಿಸಬೇಕು,

(i) [ಶಿಕ್ಷಿತರು] ಮತ್ತು

(iii) [ಒಂದೇ ವಯಸ್ಸಿನವರು].

ಮುಂದುವರೆದು, ಕಾರ್ಯಕರ್ತರು, ಎಕ್ಸ್ ಮತ್ತು ಸಿಐಸಿಎಲ್ ನಡುವೆ **ಸ್ನೇಹದ ಸ್ವಭಾವವನ್ನು (ಹತ್ತಿರದ್ದೇ ಅಥವಾ ದೂರದ್ದೇ) ಆಧರಿಸಿ,** ಮಾದಕ ದ್ರವ್ಯದ ವ್ಯಸನಕ್ಕೆ ಒಳಗಾಗಿರುವ ಎಕ್ಸ್ ಎಂಬ ಸ್ನೇಹಿತನನ್ನು ನಮೂದಿಸಬಹುದು. ಕಾರ್ಯಕರ್ತರು (viii) ಎಂದು ಗುರುತಿಸಿ, **ಸಿಐಸಿಎಲ್ ಮತ್ತು ಎಕ್ಸ್ ನಡುವಿನ ಸ್ನೇಹದ ಸ್ವಭಾವವನ್ನು ತಿಳಿಸುತ್ತಾ ಅದಕ್ಕೆ ವಿವರಣೆಯನ್ನು ನೀಡಬೇಕು.**

### ಹೇಗೆ ಮತ್ತು ಯಾರಿಗೆ ಕೇಳಬೇಕು?

ಈ ವಿಭಾಗವನ್ನು ಮಗುವಿನೊಂದಿಗೆ ನಡೆಸಿದ ಸಂದರ್ಶನದ ನಂತರ ತುಂಬಬೇಕು.

## ಪ್ರಶ್ನೆ 33–34

ಈ ಪ್ರಶ್ನೆಗಳಿಗೆ ವಿವರವಾಗಿ ಪ್ರತಿಕ್ರಿಯಿಸಬೇಕು.

'ಒಳ್ಳೆಯ' ಮತ್ತು 'ಕೆಟ್ಟ' ಎಂಬ ಪದಗಳು ಬಹಳ ವ್ಯಕ್ತಿನಿಷ್ಠ ಮತ್ತು ಪೂರ್ವಗ್ರಹ ಪೀಡಿತವಾಗಿರಬಹುದಾದ ಕಾರಣಕ್ಕಾಗಿ ಅವುಗಳ ಬಳಕೆಯನ್ನು ನಿವಾರಿಸಬೇಕು.

ಬದಲಿಗೆ, ಕಾರ್ಯಕರ್ತರು ತಮ್ಮ ಅವಲೋಕನವನ್ನು ವಸ್ತುನಿಷ್ಠವಾಗಿ ವರದಿ ಮಾಡುವುದು ಬಹಳ ಮುಖ್ಯ. ಇಲ್ಲಿ ಉದ್ದೇಶವಿರುವುದು ಜೆಜೆಬಿಗೆ ಮಗುವಿನ ವರ್ತನೆಯ ಕುರಿತು ಹೆಚ್ಚು ಉತ್ತಮವಾದ ಗ್ರಹಿಕೆಯನ್ನು ನೀಡುವುದೇ ವಿನಾ ಒಬ್ಬರ ಅಭಿಪ್ರಾಯವನ್ನು ನೀಡುವುದಲ್ಲ. ಉದಾಹರಣೆಗೆ:

- ❖ ಒಪ್ಪಿಕೊಳ್ಳುವ,
- ❖ ಆಕ್ರಮಣಕಾರಿ,
- ❖ ಸಂತೋಷದಾಯಕ,
- ❖ ಅಪನಂಬಿಕೆಯ,
- ❖ ನಿರ್ಲಿಪ್ತ ಇತ್ಯಾದಿ

ಈ ರೀತಿಯ ವರ್ಣನೆಯು, 'ಒಳ್ಳೆಯ/ಕೆಟ್ಟ' ಎಂಬ ಪದಗಳು ನಿರೂಪಿಸಲಾರದ, ಮನೋಭಾವದ ವಿಶಿಷ್ಟ ಸ್ವಭಾವವನ್ನು ಗುರುತಿಸಲು ಜೆಜೆಬಿಗೆ ಸಹಾಯಕವಾಗುತ್ತದೆ.

ಮಗುವಿನ ಸ್ನೇಹಿತರನ್ನು ಕಾರ್ಯಕರ್ತರು ಸಂದರ್ಶಿಸುವುದಾದರೆ, ಮಕ್ಕಳನ್ನು ಸಂದರ್ಶಿಸುವಲ್ಲಿ ಅಗತ್ಯವಾದ ನೈತಿಕತೆಯನ್ನು ಯಾವಾಗಲೂ ಅನುಸರಿಸಬೇಕು. ಪರಿಸರವು ಅಂಥ ಮಾತುಕತೆಗೆ ಪೂರಕವಾಗಿದ್ದರೆ ಪ್ರಶ್ನೆ 35 ಮತ್ತು 36ಕ್ಕಾಗಿ ಕಾರ್ಯಕರ್ತ ನೆರೆಹೊರೆಯವರನ್ನು ವಿಚಾರಿಸಬೇಕು. ಕಾರ್ಯಕರ್ತರು ಅವಲೋಕನಗಳನ್ನು ಆಧರಿಸಿ ಇದಕ್ಕೆ ಪ್ರತಿಕ್ರಿಯಿಸಬೇಕು.

### ಮಗುವಿನಿಂದ ದೌರ್ಜನ್ಯದ ಅನುಭವ (ಪ್ರಶ್ನೆ 37–39)

37. ಮಗುವು ಯಾವುದೇ ತರಹದ ದೌರ್ಜನ್ಯಕ್ಕೆ ಒಳಗಾಗಿದೆಯೇ, ಅನ್ವಯವಾಗುವುದಾದರೆ: **ಹೌದು/ಇಲ್ಲ**

| ಕ್ರಸಂ. | ದೌರ್ಜನ್ಯದ ಬಗೆ | ಷರಾ |
|---|---|---|
| 1. | ಮೌಖಿಕ ದೌರ್ಜನ್ಯ– (ಯಾರಿಂದ?) ತಂದೆತಾಯಿ/ಒಡಹುಟ್ಟಿದವರು/ಉದ್ಯೋಗದಾತರಿಂದ/ ಇತರರು (ನಿರ್ದಿಷ್ಟವಾಗಿ) | |
| 2. | ದೈಹಿಕ ದೌರ್ಜನ್ಯ (ನಿರ್ದಿಷ್ಟವಾಗಿ) | |
| 3. | ಲೈಂಗಿಕ ದೌರ್ಜನ್ಯ (ಯಾರಿಂದ?) ತಂದೆತಾಯಿ/ಒಡಹುಟ್ಟಿದವರು/ಉದ್ಯೋಗದಾತರಿಂದ/ ಇತರರು | |
| 4. | ಇತರೆ (ನಿರ್ದಿಷ್ಟವಾಗಿ) | |

38. ಮಗು ಯಾವುದಾದರೂ ಅಪರಾಧಕ್ಕೆ ಬಲಿಯಾಗಿದೆಯೇ? ಹೌದು/ಇಲ್ಲ

39. ಮಗು ಯಾವುದಾದರೂ ಗ್ಯಾಂಗಿನಿಂದ, ವಯಸ್ಕರಿಂದ, ವಯಸ್ಕರ ಗುಂಪಿನಿಂದ ಬಳಸಲ್ಪಟ್ಟಿದೆಯೇ? ಅಥವಾ ಮಾದಕ ದ್ರವ್ಯಗಳ ಕಳ್ಳಸಾಗಾಣಿಕೆಗೆ ಬಳಸಲ್ಪಟ್ಟಿದೆಯೇ? ಹೌದು/ಇಲ್ಲ

#### ಈ ಪ್ರಶ್ನೆಗಳು ಏಕೆ?

ಜೆಜೆಬಿಯು ಮಗುವಿನ ಕುರಿತು ಅಗತ್ಯವಾದ ತಡೆಗಟ್ಟುವಿಕೆ ಮತ್ತು ಪುನರ್ವಸತಿ ಕ್ರಮಗಳಿಗಾಗಿ ಆದೇಶಗಳನ್ನು ಜಾರಿ ಮಾಡುವಾಗ ಈ ಪ್ರಶ್ನೆಗಳಿಗೆ ಸಿಗುವ ಉತ್ತರಗಳು ಸಹಾಯಕವಾಗುತ್ತವೆ. ಕಾರ್ಯಕರ್ತರು ಇಲ್ಲಿನ ಪ್ರತಿಕ್ರಿಯೆಗಳನ್ನು ತರ್ಕಬದ್ಧ ವಿವರಣೆ ಸಹಿತವಾಗಿ ಬರೆಯುವುದು ಬಹಳ ಮುಖ್ಯ.

#### ಹೇಗೆ ಮತ್ತು ಯಾರನ್ನು ಕೇಳುವುದು?

ಈ ಪ್ರಶ್ನೆಗಳಿಗೆ ನೀಡಬಹುದಾದ ಉತ್ತರಗಳು ಖಾಸಗಿಯಾಗಿರುತ್ತವೆ ಮತ್ತು ಮಗು ಇವುಗಳಲ್ಲಿನ ಸೂಕ್ಷ್ಮವಾದ ವಿವರಗಳನ್ನು ನಿರೂಪಿಸಬೇಕಾಗುತ್ತದೆ, ಆದ್ದರಿಂದ ಕಾರ್ಯಕರ್ತರು ಈ ಪ್ರಶ್ನೆಗಳನ್ನು ಜಾಗರೂಕತೆಯಿಂದ ನಿರ್ವಹಿಸಬೇಕು. ಮಗು ಪೊಲೀಸರ ಕೈಯಿಂದ ಯಾವುದೇ ಬಗೆಯ ದೌರ್ಜನ್ಯಕ್ಕೆ ಒಳಗಾಗಿದ್ದು ಗೊತ್ತಾದರೆ, ಅದನ್ನು ಇಲ್ಲಿ ದಾಖಲಿಸಬೇಕು.

**ಈ ವಿಭಾಗದಲ್ಲಿ ಪ್ರತಿಕ್ರಿಯೆಗಳಿಗೆ ವಿವರಗಳನ್ನೂ ನೀಡಬೇಕು. ಕೇವಲ ಟಿಕ್ ಗುರುತನ್ನು ಹಾಕಿ ತೋರಿಸುವುದರಿಂದ ಎಸ್ಐಆರ್ ಉದ್ದೇಶಕ್ಕೆ ಪ್ರಯೋಜನವಾಗುವುದಿಲ್ಲ.**

ತಮ್ಮ ಅವಲೋಕನಗಳನ್ನು ಆಧರಿಸಿ ಕಾರ್ಯಕರ್ತರು, ಪ್ರಶ್ನೆ 38ರ ಎದುರಿಗೆ, ಮಗುವು ಯಾರಿಂದಲಾದರೂ ನಡೆದ ಅಪರಾಧಕ್ಕೆ ಬಲಿಯಾಗಿತ್ತೇ ಎಂಬುದನ್ನು ಸೂಚಿಸಲು ಸುಲಭವಾಗುತ್ತದೆ. ಇದು, ಮಗು ಬಾಲವಿವಾಹದ ಪದ್ಧತಿ, ಬಾಲ ಕಾರ್ಮಿಕತೆ, ಮಾನವ ಕಳ್ಳಸಾಗಣೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಪೋರ್ನೋಗ್ರಫಿ ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚು ಸಂಗತಿಯಿಂದ ಪೀಡಿತವಾಗುವಂಥ ಪರಿಸ್ಥಿತಿ.

**ಈ ಪ್ರಶ್ನೆಯು ಪ್ರಕರಣ ಅಥವಾ ವರದಿಯನ್ನು ದಾಖಲಿಸಿರುವ ಅಪರಾಧಗಳಿಗೆ ಮಾತ್ರ ಸಂಬಂಧಪಟ್ಟಿದ್ದಲ್ಲ ಎಂಬುದನ್ನು ಕಾರ್ಯಕರ್ತರು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಯಾವುದೇ ಒಂದು ಅಪರಾಧವು ಔಪಚಾರಿಕವಾಗಿ ನೋಂದಾವಣೆಯಾಗಿರದೇ ಇದ್ದರೂ ಮಗು ಅಂಥ ಕ್ರಿಯೆಯಿಂದ ಪೀಡಿತವಾಗಿದೆಯೇ ಎಂಬುದನ್ನು ಕಾರ್ಯಕರ್ತರು ಸೂಚಿಸಬೇಕು.** ಮಗುವಿನ ಜೊತೆಯಲ್ಲಿ ನಡೆಸುವ ಮಾತುಕತೆಯಲ್ಲಿ ಕಾರ್ಯಕರ್ತರು ಇದನ್ನು ವಿವರಿಸುವುದು ಬಹಳ ಮುಖ್ಯ.

**ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ(ಸಿಎಸ್‌ಎ)ದ ಘಟನೆಗಳನ್ನು ಮಗು ನಿರೂಪಿಸಿದರೆ ಕಾರ್ಯಕರ್ತರು ಅನುಸರಿಸಬೇಕಾದ ಹೆಜ್ಜೆಗಳು:**

- ಕಾರ್ಯಕರ್ತರು ಮಗುವಿಗೆ ಬೆಂಬಲವನ್ನು ಸೂಚಿಸಿ ಮಗುವಿನಲ್ಲಿ ಆತ್ಮವಿಶ್ವಾಸವನ್ನು ತುಂಬಬೇಕು. ಅಂಥ ದೌರ್ಜನ್ಯದ ಕುರಿತು ಮಾತಾಡುವುದು ಮಗುವಿಗೆ ಕಷ್ಟವಾಗಬಹುದು, ನಿರೂಪಣೆಯಲ್ಲಿ ಗೊಂದಲಗಳು ಕಾಣಿಸಿಕೊಳ್ಳಬಹುದು, ಆದ್ದರಿಂದ ಕಾರ್ಯಕರ್ತರು ಸೂಕ್ಷ್ಮತೆಯನ್ನು ವಹಿಸಿ ಮಗುವಿನ ಅಮಾಯಕತೆಯ ಕುರಿತು ಜಾಗರೂಕತೆ ಬಳಸಬೇಕು.
- ಮಗು ಇದನ್ನು ಮಾತಾಡುವುದಕ್ಕೆ ಮುಜುಗುರವಾಗದಂತೆ ಅದಕ್ಕಾಗಿ ಒಂದು ಸುರಕ್ಷಿತವಾದ ಸ್ಥಳವನ್ನು ಗುರುತಿಸಬೇಕು. ಮಗುವಿಗೆ ಅಗತ್ಯವಿರುವ ಸಹಾಯ, ಬೆಂಬಲ ಸಿಗುತ್ತದೆ, ಮತ್ತು ಅದು ಮಾತಾಡಿದ್ದು ಗೋಪ್ಯವಾಗಿರುತ್ತದೆ ಎಂಬ ವಿಶ್ವಾಸವನ್ನು ಮಗುವಿನಲ್ಲಿ ಮೂಡಿಸಬೇಕು. ಅನುಸರಿಸಲಾಗುವ ಹಂತಗಳನ್ನು ಶಾಂತವಾದ ಮತ್ತು ಭರವಸೆ ಹುಟ್ಟಿಸುವ ರೀತಿಯಲ್ಲಿ, ಅಂಥ ಧ್ವನಿಯಲ್ಲಿ ವಿವರಿಸಬೇಕು.
- ತನ್ನೊಂದಿಗೆ ಆಗಿರುವುದಕ್ಕೆ ಮಗು ತಾನೇ ಸ್ವತಃ ಜವಾಬ್ದಾರಿಯಲ್ಲ ಎಂಬುದನ್ನು ಮಗುವಿಗೆ ನೆನಪಿಸುತ್ತಾ, ಅದನ್ನು ಹೇಳುವ ಕುರಿತು ಭಯ ಪಡಬೇಕಾಗಿಲ್ಲ ಎಂದು ಮನವರಿಕೆ ಮಾಡಿಸಬೇಕು. ಮಗುವಿನಲ್ಲಿ ಭರವಸೆಯನ್ನು ಮೂಡಿಸುವುದು ಬಹಳ ನಿರ್ಣಾಯಕ.
- ಕಾರ್ಯಕರ್ತರು ಎಲ್ಲಾ ಬಗೆಯಲ್ಲಿ ಮಗು–ಸ್ನೇಹಿ ಕ್ರಮಗಳನ್ನು ಅನುಸರಿಸಬೇಕು.
- ಅಲ್ಲದೇ, **ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ, 2012 (ಪೋಕ್ಸೊ)** ಅಡಿಯಲ್ಲಿ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳನ್ನು ವರದಿ ಮಾಡುವುದು ಕಡ್ಡಾಯ ಎಂಬುದನ್ನು ಕಾರ್ಯಕರ್ತರು ತಿಳಿದಿರಬೇಕು.
- ಈ ಕುರಿತ ವರದಿಯು ಮಗುವಿನ ಅತ್ಯುತ್ತಮ ಹಿತದಲ್ಲಿ ಇರುವ ಹಾಗೆ ನೋಡಿಕೊಳ್ಳಲು ಕಾರ್ಯಕರ್ತರು ಇದನ್ನು ವರದಿ ಮಾಡುವುದರಲ್ಲಿ ಜೆಜೆಬಿಯ ಬೆಂಬಲವನ್ನು ಪಡೆಯಬಹುದು.
- ನಮೂನೆ 6ರ ಶಿಫಾರಸ್ಸುಗಳ ವಿಭಾಗದಲ್ಲಿ, ಕಾರ್ಯಕರ್ತರು ಮಗುವಿಗೆ ಆಪ್ತ ಸಮಾಲೋಚನೆ ಮತ್ತು ಮಾನಸಿಕ ಆರೋಗ್ಯದ ಬೆಂಬಲಗಳ ಅಗತ್ಯವನ್ನು ನಮೂದಿಸಬೇಕು. ಸಂಭವನೀಯ ಸೋಂಕುಗಳನ್ನು ತಡೆಯಲು ವೈದ್ಯಕೀಯ ಚಿಕಿತ್ಸೆಗಾಗಿ ಮತ್ತು ತಕ್ಷಣದ ಸೂಕ್ತ ವೈದ್ಯಕೀಯ ಮಧ್ಯಸ್ಥಿಕೆಗಾಗಿ ಶಿಫಾರಸ್ಸನ್ನು ಮಾಡಬೇಕು.
- ಮಗುವನ್ನು ಸಿಐಎನ್‌ಸಿಪಿ ಎಂದು ಘೋಷಿಸುವಂತೆ ಎಸ್‌ಐಆರ್‌ನಲ್ಲಿಯೂ ಶಿಫಾರಸ್ಸನ್ನು ಮಾಡಬಹುದು.

## ಪ್ರಶ್ನೆ 40

40. ಮಗುವಿನಲ್ಲಿ ಮನೆಯಿಂದ ಓಡಿಹೋಗುವ ಪ್ರವೃತ್ತಿ ಇದೆಯೇ, ಇದ್ದರೆ ವಿವರ ನೀಡಿ: **ಹೌದು**/ಇಲ್ಲ

**ಈ ಪ್ರಶ್ನೆ ಏಕೆ?**

ಮಗುವನ್ನು ಬಂಧನಾತ್ಮಕ/ರಕ್ಷಣಾತ್ಮಕ ಪಾಲನೆಯಲ್ಲಿ ಇರಿಸಲು ಪರಿಗಣಿಸಬಹುದಾದ ಯಾವುದಾದರೂ ಸೂಚಿಗಳು ಇವೆಯೇ ಎಂದು ಅರ್ಥ ಮಾಡಿಕೊಳ್ಳಲು ಈ ಮಾಹಿತಿಯು ಜೆಜೆಬಿಯವರಿಗೆ ನೆರವಾಗುತ್ತದೆ. ಚಕ್ಕರ್ ಹೊಡೆಯುವ, ಗೈರುಹಾಜರಾಗುವ ಪ್ರವೃತ್ತಿ ಎಂಬುದೂ, ಪರಿಹಾರಕ್ಕಾಗಿ ಪ್ರಯತ್ನಿಸಬೇಕಾದ ಮೂಲ ಮಾನಸಿಕ ಸಮಸ್ಯೆಯನ್ನು ಸೂಚಿಸುತ್ತದೆ.

**ಈ ಪ್ರಶ್ನೆಯ ಅರ್ಥವೇನು?**

ಈ ಪ್ರಶ್ನೆಯು ಎರಡೂ ಪ್ರವೃತ್ತಿಗಳನ್ನು ಮತ್ತು ಮಗು ಈ ಹಿಂದೆ ಮನೆಯಿಂದ ಓಡಿ ಹೋಗಿರಬಹುದಾದ ಪ್ರಕರಣವನ್ನೂ ಒಳಗೊಳ್ಳುತ್ತದೆ. ಪೋಷಕರ ಅರಿವಿಗೆ ಬಾರದೇ ಮಗು ಮತ್ತೆ ಮತ್ತೆ ಕೆಲವು ದಿನಗಳ ಕಾಲ ಮನೆಯಿಂದ ದೂರವಿದ್ದಿದ್ದರೆ, ಇದನ್ನು ಮನೆಯಿಂದ 'ಓಡಿ ಹೋಗುವುದು' ಎಂದು ಪರಿಗಣಿಸದೇ ಇದ್ದರೂ, ಅದನ್ನು ಮಗುವಿನಲ್ಲಿರುವ ಮನೆಯಿಂದ ದೂರವಿರುವ ಪ್ರವೃತ್ತಿ ಎಂದು ಸೂಚಿಸಬೇಕು. ಇದಕ್ಕೆ ಕಾರಣ ಮತ್ತು ಇಂಥ ಸಂದರ್ಭದಲ್ಲಿ ಮಗು ಸಾಮಾನ್ಯವಾಗಿ ಎಲ್ಲಿಗೆ ಹೋಗುತ್ತದೆ ಎನ್ನುವುದನ್ನೂ ಮಗು ಅಥವಾ ಕುಟುಂಬದವರಿಂದ ಕೇಳಿ ದಾಖಲಿಸಬೇಕು.

ಇದನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ:

ಮಗು ಮನೆಯಿಂದ ಅಥವಾ ಶಾಲೆಯಿಂದ ಏಕೆ ಓಡಿಹೋಗುತ್ತಿದೆ?

ಮಗು ಯಾವುದರಿಂದ ದೂರ ಓಡಿಹೋಗುತ್ತಿದೆ (ಉದಾ: ಮನೆಯಲ್ಲಿ ನಡೆಯುವ ದೌರ್ಜನ್ಯ, ಲೈಂಗಿಕ ದೌರ್ಜನ್ಯ, ಕುಟುಂಬದಲ್ಲಿನ ಮದ್ಯಪಾನದ ಚಟ ಇತ್ಯಾದಿ)

ಮಗು ಯಾವುದರ ಕಡೆಗೆ ಓಡಿಹೋಗುತ್ತಿದೆ? (ಉದಾ: ಒಂದು ಗ್ಯಾಂಗನ್ನು ಸೇರಲು, ಹಣವನ್ನು ಗಳಿಸಲು ಹೆಚ್ಚಿನ ಅವಕಾಶಕ್ಕಾಗಿ, ಪ್ರೀತಿಸಿದ ಹುಡುಗ/ಹುಡುಗಿಯೊಂದಿಗೆ ಓಡಿಹೋಗಲು ಇತ್ಯಾದಿ).

### ಜೆಜೆ ವ್ಯವಸ್ಥೆಯಲ್ಲಿ ಮಗು (ಪ್ರಶ್ನೆ 41–25)

ಪ್ರಶ್ನೆ 41–43 ಮಗುವಿನ ವಿರುದ್ಧ ದಾಖಲಿಸಲಾದ ಆಪಾದಿತ ಅಪರಾಧದ ಕುರಿತಾಗಿವೆ.

41. ಮಗುವನು ವಶಕ್ಕೆ ಪಡೆದ ಸನ್ನಿವೇಶಗಳು................................
42. ಅಪರಾಧದಲ್ಲಿ ಮಗುವಿನ ಆಪಾದಿತ ಪಾತ್ರ................................
43. ಆಪಾದಿತ ಅಪರಾಧಕ್ಕೆ ಕಾರಣ:
    (i) ತಂದೆತಾಯಿಯರ ನಿಲಕ್ಷ್ಯ
    (ii) ತಂದೆತಾಯಿಯರ ಅತಿಯಾದ ರಕ್ಷಣೆ
    (iii) ತಂದೆತಾಯಿಯರ ಅಪರಾಧಿಕ ವರ್ತನೆ
    (iv) ತಂದೆತಾಯಿಯರ (ನಕಾರಾತ್ಮಕ) ಪ್ರಭಾವ
    (v) ಸಹವರ್ತಿಗಳ ಪ್ರಭಾವ
    (vi) ಕೆಟ್ಟ ಅಭ್ಯಾಸಗಳು (ಮಾದಕ ದ್ರವ್ಯ/ಮದ್ಯ ಕೊಳ್ಳುವುದು)
    (vii) ಇತರೆ (ನಿರ್ದಿಷ್ಟವಾಗಿ)

## ಪ್ರಶ್ನೆ 41

### ಈ ಪ್ರಶ್ನೆ ಏಕೆ?

ಈ ಪ್ರಶ್ನೆಯು ಮಗುವಿಗೆ ತಾನು ಕಾನೂನಿನ ಸಂಪರ್ಕದಲ್ಲಿ ಬಂದಿದ್ದು ಹೇಗೆ ಪೊಲೀಸರು ಮಗುವನ್ನು ವಶಕ್ಕೆ ಪಡೆದಿದ್ದು, ಪೊಲೀಸ್ ಸ್ಟೇಷನ್ನಿನಲ್ಲಿ ತಮ್ಮ ಅನುಭವ, ಜೆಜೆಬಿ ಎದುರು ಹಾಜರು ಪಡಿಸಿದ್ದು, ಒಎಚ್‌ನಲ್ಲಿ ತಮ್ಮ ಅನುಭವ– ಇತ್ಯಾದಿಗಳ ಕುರಿತು ತಮ್ಮ ಮಗ್ಗುಲಿನ ಅನುಭವದ ಕುರಿತು ಮಾತಾಡಲು ಅವಕಾಶ ನೀಡುತ್ತದೆ. ಈ ಮಾಹಿತಿಯು, ಮಗುವನ್ನು ವಶಕ್ಕೆ ಪಡೆದ ಹಂತದಲ್ಲಿ ಮಗುವಿನ ಹಕ್ಕುಗಳನ್ನು ಸಂರಕ್ಷಿಸಲಾಗಿತ್ತೆ ಎಂಬುದನ್ನು ನಿರ್ಧರಿಸಲು ಜೆಜೆಬಿಗೆ ಸಹಾಯಕವಾಗುತ್ತದೆ.

## ಪ್ರಶ್ನೆ 42

### ಈ ಪ್ರಶ್ನೆ ಏಕೆ?

ಕೆಲವೊಮ್ಮೆ ದೊಡ್ಡವರು ಮಾಡುವ ಅಪರಾಧಕ್ಕೆ ಮಕ್ಕಳು ಪ್ರೇಕ್ಷಕರಾಗಿರುತ್ತಾರೆ. ಹಲವು ಸಲ ವಯಸ್ಕರು ಅಥವಾ ಗುಂಪಿನಲ್ಲಿರುವ ಇತರ ಮಕ್ಕಳು ಮಾಡುವ ಅಪರಾಧದ ಪ್ರಕರಣಗಳಲ್ಲಿ ಮಗು ಯಾರಾದರೂ ಬರುತ್ತಾರೋ 'ನೋಡುತ್ತಿರು' ಎಂಬ ಕೆಲಸಕ್ಕೆ ನೇಮಿಸಲಾಗಿರಬಹುದು. ಈ ಪ್ರಶ್ನೆಯನ್ನು ಕೇಳುವ ಮೂಲಕ, ಮಗುವಿಗೆ ಕನಿಷ್ಠ ಅದರಲ್ಲಿ ತನ್ನ ಪಾತ್ರವನ್ನು ವಿವರಿಸುವ ಅಥವಾ ನಿರಾಕರಿಸುವ ಅವಕಾಶವಾದರೂ ದೊರೆಯುತ್ತದೆ.

### ಈ ಪ್ರಶ್ನೆಯನ್ನು ಹೇಗೆ ಕೇಳುವುದು?

ಈ ಪ್ರಶ್ನೆಯನ್ನು ಕೇಳುವಾಗ ಕಾರ್ಯಕರ್ತರು ಬಹಳ ಎಚ್ಚರಿಕೆಯನ್ನು ವಹಿಸಬೇಕು, ಮತು ಸ್ವಯಂ–ದೋಷಾರೋಪಣೆ ಮಾಡಿಕೊಳ್ಳದೇ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.

ಕಾರ್ಯಕರ್ತರು ಇದನ್ನು ಹೇಗೆ ಖಚಿತಪಡಿಸಿಕೊಳ್ಳುವರು? ಮಾತನಾಡಿಸುತ್ತಿರುವ ಮಗು ಮತ್ತು ಸನ್ನಿವೇಶವನ್ನು ಅವಲಂಬಿಸಿ ಬಳಸಬಹುದಾದ, ಅಥವಾ ಆಧರಿಸಿ ರೂಪಿಸಿಕೊಳ್ಳಬಹುದಾದ ಕೆಲವು ಉದಾಹರಣೆಗಳು ಇಲ್ಲಿವೆ.

ಕಾರ್ಯಕರ್ತರು ಹೀಗೆ ಹೇಳಬಹುದು:
*'ನೀನು ತುಂಬಾ ಜಾಣ ಹುಡುಗನ ಹಾಗೆ ಕಾಣಿಸುತ್ತೀಯೆ, ನೀನು ಹೇಗೆ ಈ ಪೊಲೀಸ್ ಕೇಸಿನಲ್ಲಿ ಸಿಕ್ಕಿಹಾಕಿಕೊಂಡೆ?'* ಅಥವಾ

*'ನೀನು 10ನೇ ತರಗತಿಯಲ್ಲಿ ಓದ್ತಾ ಇದ್ದೀಯಾ, ತುಂಬಾ ಓದೋದು ಇರಬಹುದು, ನೀನು ಹೇಗೆ ಈ ಪೊಲೀಸ್ ಕೇಸಿನಲ್ಲಿ ಸಿಕ್ಕಿಹಾಕಿಕೊಂಡೆ?'* ಅಥವಾ

*'ನಿನ್ನ ತಾಯಿ ಹೇಳ್ತಾ ಇದ್ರು, ನೀನು ಬಹಳ ಪ್ರಾಮಾಣಿಕ, ಕಷ್ಟಪಟ್ಟು ಕೆಲಸ ಮಾಡುವ ಹುಡುಗ ಅಂತ, ನೀನು ದುಡಿದು ನಿನ್ನ ಕುಟುಂಬಕ್ಕೆ ಸಹಾಯ ಮಾಡುತ್ತೀಯಂತೆ, ನಿನ್ನಂಥ ಒಬ್ಬ ಹುಡುಗ ಹೇಗೆ ಈ ಪೊಲೀಸ್ ಕೇಸಿನಲ್ಲಿ ಸಿಕ್ಕಿಹಾಕಿಕೊಂಡೆ?'*

ಹೀಗೆ ಹೇಳುವ ಮೂಲಕ ಆ ಮಗುವಿಗೆ ಮಾನಸಿಕವಾಗಿ ತಾನು ಒಳ್ಳೆಯವನೇ/ಳೇ ಎಂಬುದನ್ನು ಖಚಿತಪಡಿಸುವ ವಿಧಾನವಾಗಿದೆ, ಅದರಿಂದಾಗಿ, ಮಗು ಮೂಲಭೂತವಾಗಿ ಒಳ್ಳೆಯ ಮಗು ಮತ್ತು ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದ ಸಂದರ್ಭವು ಒಂದು ವಿಪರ್ಯಾಸ ಎಂದು ನೀವು ನಂಬುತ್ತೀರಿ ಎಂಬ ಭರವಸೆ ಮಗುವಿನಲ್ಲಿ ಮೂಡುತ್ತದೆ. ಇದರಿಂದಾಗಿ ಮಗು ಕಾರ್ಯಕರ್ತರ ಜೊತೆಯಲ್ಲಿ ಹೆಚ್ಚು ಮನಸ್ಸು ಬಿಚ್ಚಿ ಮಾತಾಡುವುದನ್ನು ಉತ್ತೇಜಿಸುತ್ತದೆ.

## ಪ್ರಶ್ನೆ 43

ಆಪಾದಿತ ಅಪರಾಧಕ್ಕೆ ಕಾರಣವೇನು ಎನ್ನುವುದನ್ನು ಖಚಿತವಾಗಿ ಹೇಳುವುದಕ್ಕೆ ಕೆಲವೊಮ್ಮೆ/ಯಾವಾಗಲೂ ಕಷ್ಟವಾಗುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ಕಾರ್ಯಕರ್ತರು ತಮ್ಮ ಅವಲೋಕನವನ್ನು ಮತ್ತು ಆಳವಾದ ವಿಶ್ಲೇಷಣೆಯನ್ನು ಆಧರಿಸಿ ತುಂಬಬೇಕು. ಕಾರ್ಯಕರ್ತರು ಈ ಕೈಪಿಡಿಯ ಅಧ್ಯಾಯ 3ರಲ್ಲಿ ಚರ್ಚಿಸಿರುವ ಹಾಗೆ ಅಪಾಯಸಾಧ್ಯ ಅಂಶಗಳನ್ನು ಮತ್ತು 'ಬಾಲ್ಯದ ಪ್ರತಿಕೂಲ ಅನುಭವಗಳನ್ನು' ಪಟ್ಟಿ ಮಾಡಬೇಕು.

*ಪ್ರಶ್ನೆ 41ರಿಂದ 43ರ ವರೆಗೆ ಕೇಳುವಾಗ ಕಾರ್ಯಕರ್ತ ಬಹಳ ಜಾಗರೂಕತೆಯನ್ನು ವಹಿಸಬೇಕು:*

*ಮಗು ತನ್ನನ್ನು **ಸ್ವಯಂ-ದೂಷಣೆ ಮಾಡಿಕೊಳ್ಳುವಂತೆ ನೀಡಿದ ಮಾಹಿತಿಯನ್ನು ಇಲ್ಲಿ ಸೇರಿಸಬಾರದು** ಎನ್ನುವುದು ಬಹಳ ಮುಖ್ಯ.*

*ಅರೋಪಿತ ಅಪರಾಧದ ಪುರಾವೆಯನ್ನು ಹುಡುಕುವುದು ಕಾರ್ಯಕರ್ತರ ಕೆಲಸವೂ ಅಲ್ಲ, ಜವಾಬ್ದಾರಿಯೂ ಅಲ್ಲ. ಕಾರ್ಯಕರ್ತರ ಕೆಲಸ ಕೇವಲ **ಮಗುವನ್ನು ರಕ್ಷಿಸುವುದು ಮಾತ್ರ**. ಆದ್ದರಿಂದ, 41ರಿಂದ 43ರ ವರೆಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಎಸ್‌ಐಆರ್‌ನಲ್ಲಿ ದಾಖಲಿಸುವಾಗ ಅತ್ಯಂತ ಜಾಗರೂಕತೆಯನ್ನು ವಹಿಸಬೇಕು.*

## ಪ್ರಶ್ನೆ 44–45

44. ಯಾವುದಾದರೂ ಅಪರಾಧಕ್ಕಾಗಿ ಮಗುವನ್ನು ಈ ಮುಂಚೆಯೂ ವಶಕ್ಕೆ ಪಡೆಯಲಾಗಿತ್ತೇ? ಹೌದು/ಇಲ್ಲ
ಹೌದು, ಎಂದಾದರೆ, ಮಕ್ಕಳ ಆರೈಕೆ ಕೇಂದ್ರದಲ್ಲಿ ಮಗುವಿನ ವಾಸ್ತವ್ಯವನ್ನೂ ಸೇರಿದ ಹಾಗೆ ವಿವರಗಳನ್ನು ಕೊಡಿ...........................................................................

45. ಹಿಂದಿನ ಸಾಂಸ್ಥಿಕ/ಪ್ರಕರಣ ಇತಿಹಾಸ ಮತ್ತು ವೈಯಕ್ತಿಕ ಆರೈಕೆಯ ಯೋಜನೆ, ಇದ್ದರೆ:

ಪ್ರಶ್ನೆಗಳು, ಯಾವುದಾದರೂ ಇದ್ದರೆ, ಜೆಜೆ ವ್ಯವಸ್ಥೆಯೊಂದಿಗೆ ಮಗುವಿನ ಈ ಹಿಂದಿನ ಸಂಪರ್ಕದ ಕುರಿತಾಗಿವೆ.

### ಮಗುವಿನ ಭೌತಿಕ ಚಹರೆ ಮತ್ತು ಆರೋಗ್ಯ (ಪ್ರಶ್ನೆ 46–48)

46. ಮಗು ನೋಡಲು ಹೇಗೆ ಕಾಣುತ್ತದೆ:
47. ಮಗುವಿನ ಆರೋಗ್ಯದ ಸ್ಥಿತಿ (ವೈದ್ಯಕೀಯ ಪರೀಕ್ಷೆಯ ವರದಿ ಸೇರಿದ ಹಾಗೆ, ಅನ್ವಯವಾಗುವುದಾದರೆ):
48. ಮಗುವಿನ ಮಾನಸಿಕ ಸ್ಥಿತಿ:
49. ಇತರೆ ಷರಾ:

## ಪ್ರಶ್ನೆ 46

ಇದರ ಅರ್ಥವೇನು? ಮಗು ನೋಡಲು ಹೇಗೆ ಕಾಣುತ್ತದೆ ಎನ್ನುವುದರಲ್ಲಿ ಕೆಳಗಿನವು ಒಳಗೊಂಡಿರುತ್ತವೆ:

- ಅಂದಾಜು ಎತ್ತರ
- ಅಂದಾಜು ತೂಕ
- ಪೌಷ್ಟಿಕತೆಯಿಂದ ಕೂಡಿದ್ದು ಸದೃಢವಾಗಿ ಕಾಣುತ್ತದೆಯೋ ಅಥವಾ ಕೃಶವಾಗಿ ಕಾಣುತ್ತದೆಯೋ
- ಮಗುವಿನ ದೇಹದ ಮೇಲೆ ಗಾಯಗಳು, ಮೂಗೇಟುಗಳು, ಸುಟ್ಟಗಾಯಗಳು, ಹಚ್ಚೆಗಳು, ಸೂಜಿ ಚುಚ್ಚಿಕೊಂಡ ಅಥವಾ ಸ್ವಯಂಹಾನಿ ಮಾಡಿಕೊಂಡ ಗುರುತುಗಳು ಕಂಡರೆ ಅವುಗಳನ್ನೂ ನಮೂದಿಸಬೇಕು.

ಕಾರ್ಯಕರ್ತರು ಮಗುವಿನ ಕೇವಲ **ದೈಹಿಕ ಚಹರೆಗೆ ಸಂಬಂಧಪಟ್ಟ ಲಕ್ಷಣಗಳನ್ನು ಮಾತ್ರ ನಮೂದಿಸಬೇಕು. ಆದ್ದರಿಂದ, ಕೂದಲಿಗೆ ಬಣ್ಣ ಹಾಕಿರುವುದು, ದೇಹದಲ್ಲಿ ಚುಚ್ಚಿರುವುದು, ಹಚ್ಚೆ ಹಾಕಿಸಿಕೊಂಡಿರುವುದು ಇತ್ಯಾದಿಗಳನ್ನು, ಯಾವುದೇ ಪೂರ್ವಗ್ರಹಕ್ಕೆ ಒಳಗಾಗದೇ, ವಸ್ತುನಿಷ್ಠವಾಗಿ ದಾಖಲಿಸಬೇಕು, ಅಸ್ತಿತ್ವದಲ್ಲಿರುವ ರೂಢಿ ಮಾದರಿಗಳ ಹೋಲಿಕೆಯಲ್ಲಿ ಇಂಥ ಕೆಲವು ಪೂರ್ವಗ್ರಹಕ್ಕೆ ಎಡೆಮಾಡಿಕೊಡುತ್ತವೆಯಾದ್ದರಿಂದ ಈ ಕುರಿತು ಹೆಚ್ಚು ಎಚ್ಚರಿಕೆ ವಹಿಸಬೇಕು.**

## ಪ್ರಶ್ನೆ 47

**ಮಗುವಿನ ಆರೋಗ್ಯದ ಸ್ಥಿತಿ:** ಇದರಲ್ಲಿ ಮಗು ಎದುರಿಸಿರಬಹುದಾದ ಯಾವುದೇ ಯಾವುದೇ ವೈದ್ಯಕೀಯ ಸ್ಥಿತಿ ಅಥವಾ ಚಿಕಿತ್ಸೆ ಒಳಗೊಂಡಿರುತ್ತವೆ. ಇದ್ದರೆ, ವೈದ್ಯಕೀಯ ವರದಿಗಳ ಪ್ರತಿ, ಎಸ್ಐಆರ್‌ಗೆ ಲಗತ್ತಿಸಬೇಕು. ಮಗುವನ್ನು ವಶಕ್ಕೆ ಪಡೆದ ನಂತರ, ಆದರೆ ಜೆಜೆಬಿ ಎದುರು ಮೊದಲ ಸಲ ಹಾಜರುಪಡಿಸುವ ಮುಂಚೆ ಮಾಡಲಾದ ಪರೀಕ್ಷೆಯ ನಂತರ ಸಲ್ಲಿಸಲಾದ ವೈದ್ಯಕೀಯ ದಾಖಲೆಯನ್ನು ಗಮನಿಸಬೇಕು.

ಕಾರ್ಯಕರ್ತರು ಜೆಜೆಬಿಯ ಗಮನಕ್ಕೆ ತರಬೇಕಾದ ಇನ್ನೇನಾದರೂ ಸಂಗತಿಗಳಿದ್ದರೆ ಅವುಗಳನ್ನು ತಮ್ಮ ವರದಿಯಲ್ಲಿ ಸೂಚಿಸಬೇಕು/ಎತ್ತಿತ್ತೋರಿಸಬೇಕು. ಅದರ ಜೊತೆಯಲ್ಲಿ, ಕಾರ್ಯಕರ್ತರು ಒಎಚ್‌ನ ಅಥವಾ ಸುರಕ್ಷತತೆಯ ತಾಣದ ಡ್ಯೂಟಿ ಡಾಕ್ಟರ್ ಜೊತೆಯಲ್ಲಿ ಸಮನ್ವಯ ಮಾಡಿಕೊಂಡು ಮಗುವಿಗೆ ವೈದ್ಯಕೀಯ ಆರೈಕೆ ಸಿಗುವುದನ್ನು ಖಚಿತಪಡಿಸಿಕೊಳ್ಳಬೇಕು. ಆದರೆ, ಕಾರ್ಯಕರ್ತರು ಎನ್‌ಜಿಒನಿಂದ ಬಂದಿರುವ ಸಮಾಜ ಕಾರ್ಯಕರ್ತರಾಗಿದ್ದರೆ, ಅವರಿಗೆ ಒಎಚ್‌ನಲ್ಲಿರುವ ಡ್ಯೂಟಿ ಡಾಕ್ಟರನ್ನು ನೇರವಾಗಿ ಸಂಪರ್ಕಮಾಡುವುದು ಕಷ್ಟಸಾಧ್ಯವಾಗಬಹುದು. ಇಂಥ ಸಂದರ್ಭದಲ್ಲಿ ಸಮಾಜ ಕಾರ್ಯಕರ್ತರು ಪಿಒಅವರೊಂದಿಗೆ ಸಮನ್ವಯ ಸಾಧಿಸಬೇಕು.

## ಪ್ರಶ್ನೆ 48

**ಮಗುವಿನ ಮಾನಸಿಕ ಸ್ಥಿತಿ:** ಮಗು ತನ್ನ ಮಾನಸಿಕ ಆರೋಗ್ಯದ ನಿಟ್ಟಿನಲ್ಲಿ ಯಾವುದಾದರೂ ಬಗೆಯ ಮೌಲ್ಯಮಾಪನ ಅಥವಾ ಚಿಕಿತ್ಸೆಗೆ ಒಳಗಾಗಿದ್ದರೆ, ಅದನ್ನು ಇಲ್ಲಿ ನಮೂದಿಸಬೇಕು ಮತ್ತು ಮಗು ತೆಗೆದುಕೊಂಡಿರುವ ಚಿಕಿತ್ಸೆ, ಔಷಧಿ ಕುರಿತಾದ ದಾಖಲೆಗಳ ಪ್ರತಿಯನ್ನು ಲಗತ್ತಿಸಬೇಕು. ಪ್ರಿಸ್ಕ್ರಿಪ್ಷನ್ ಅಥವಾ ವರದಿಗಳು ಲಭ್ಯವಿಲ್ಲವಾದರೆ, ಅವುಗಳ ಮಾಹಿತಿಯನ್ನು ನಮೂನೆಯಲ್ಲಿ ನಮೂದಿಸಬೇಕು.

ಆದರೆ, ಹೆಚ್ಚಿನ ಸಲ ಮಗುವಿನ ಆಂತರಿಕವಾಗಿರುವ ಮಾನಸಿಕ ಸ್ಥಿತಿ ತಂದೆತಾಯಿ ಅಥವಾ ಪೋಷಕರಿಗೆ ಗೊತ್ತಾಗದೇ ಹೋಗಬಹುದು. ಆದ್ದರಿಂದ, ಮಗುವು ಅನಾಯಾಸ ತೋರಿಸಿಕೊಳ್ಳುತ್ತಿರಬಹುದಾದ ಆಂತರಿಕ ಮಾನಸಿಕ ಸ್ಥಿತಿಗಳನ್ನು ಕಾರ್ಯಕರ್ತರು ಸೂಕ್ಷ್ಮವಾಗಿ ಗಮನಿಸಿ, ಅಂಥ ಚಿಹ್ನೆಗಳು, ಲಕ್ಷಣಗಳು ಏನಾದರೂ ಇದ್ದಲ್ಲಿ ದಾಖಲಿಸಿಕೊಳ್ಳಬೇಕು.

ಅವುಗಳಲ್ಲಿ,



- ಸರಿಯಾಗಿ ನಿದ್ದೆ ಬಾರದೇ ಇರುವ ಲಕ್ಷಣಗಳು
- ದುಸ್ವಪ್ನಗಳು
- ಹಸಿವೆ ಆಗದೇ ಇರುವುದು
- ತೂಕ ಹಠಾತ್ ಹೆಚ್ಚಾಗುವುದು ಅಥವಾ ಕಡಿಮೆ ಆಗುವುದು
- ಸದಾ ದಣಿವು, ಶಕ್ತಿಹೀನತೆ
- ಈ ಹಿಂದೆ ಸಂತೋಷವಾಗಿ ಭಾಗವಹಿಸುತ್ತಿದ್ದ ಚಟುವಟಿಕೆಗಳಲ್ಲಿ ನಿರಾಸಕ್ತಿ
- ಹಠಾತ್ ಕೋಪ ಅಥವಾ ಹಿಂಸೆಯ ಆಸ್ಫೋಟ
- ಸಾಮಾಜಿಕ ಹಿಂತೆಗೆತ
- ಆತ್ಮಹತ್ಯಾ ಆಲೋಚನೆಗಳು ಅಥವಾ ಪ್ರಯತ್ನಗಳು
- ಸಿಕ್ಕಾಪಟ್ಟೆ ತಿನ್ನುವುದು ಅಥವಾ ಹಸಿದಿರುವುದು
- ಮನಸ್ಥಿತಿಯ ತೀವ್ರ ಏರುಪೇರು

ಮಗುವಿನಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆಯನ್ನು ಹುಟ್ಟುಹಾಕಬಹುದಾದ ಕೆಲವು ಸಂಭವನೀಯ ಅಪಾಯದ ಅಂಶಗಳು:

- ಕುಟುಂಬದಲ್ಲಿರುವ ಮಾನಸಿಕ ಅಸ್ವಸ್ಥತೆಯ ಇತಿಹಾಸ
- ಮಾದಕ ದ್ರವ್ಯಗಳ ಸೇವನೆ
- ಹಿಂಸಾಚಾರವನ್ನು ಕಾಣುವುದು ಅಥವಾ ಒಳಗಾಗುವುದು
- ತಂದೆತಾಯಿ ಮರಣ ಅಥವಾ ದೂರವಾಗುವುದು
- ಮಕ್ಕಳ ಲೈಂಗಿಕ ದೌರ್ಜನ್ಯ
- ಭಯಪಡಿಸಿ ಪೀಡಿಸುವುದು
- ನ್ಯಾಯ ವ್ಯವಸ್ಥೆಯೊಂದಿಗೆ ಈ ಹಿಂದಿನ ಸಂಪರ್ಕ

## ವಿಚಾರಣೆಯ ಫಲಿತಾಂಶ

| ವಿಚಾರಣೆಯ ಫಲಿತಾಂಶ |
|---|
| 1. ಭಾವನಾತ್ಮಕ ಸಂಗತಿಗಳು..................................................................... |
| 2. ದೈಹಿಕ ಸ್ಥಿತಿ...................................................................... |
| 3. ಬುದ್ಧಿಮತ್ತೆ................................................................... |
| 4. ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳು.................................................................... |
| 5. ಸಮಸ್ಯೆಗಳ ಸಂಭವನೀಯ ಕಾರಣಗಳು................................................................... |
| 6. ಪ್ರಕರಣದ ವಿಶ್ಲೇಷಣೆ, ಕಾರಣಗಳು/ಅಪರಾಧಕ್ಕೆ ಪ್ರೇರಕವಾದ ಸಂಗತಿಗಳು ಸೇರಿದ ಹಾಗೆ..... |
| 7. ಸಂಪರ್ಕಿಸಿದ ಪರಿಣತರ ಅಭಿಪ್ರಾಯ.................................................................... |
| 8. ಪ್ರೊಬೇಷನ್ ಅಧಿಕಾರಿ/ಮಕ್ಕಳ ಕಲ್ಯಾಣ ಅಧಿಕಾರಿಯವರಿಂದ ಪುನರ್ವಸತಿ ಕುರಿತು ಮಾಡಲಾದ ಶಿಫಾರಸ್ಸು.................................................................... |

ಕಾರ್ಯಕರ್ತರು ಈ ವಿಭಾಗವನ್ನು ತಮ ಸೂಕ್ಷ್ಮ ಅವಲೋಕನಗಳನ್ನು ಆಧರಿಸಿ, ಸೂಕ್ತ ವಿಶ್ಲೇಷಣೆಯ ನಂತರ ತುಂಬಬೇಕು. ಈ ವಿಭಾಗವು ಜೆಜೆಬಿಗೆ ಮಗುವಿನ ಕುರಿತು ಒಟ್ಟಾರೆ ಗ್ರಹಿಕೆಯನ್ನು ಪಡೆಯಲು ಮತ್ತು ಆ ಮೂಲಕ ಸೂಕ್ತವಾದ ನಿರ್ಧಾರಗಳನ್ನು ಕೈಗೊಳ್ಳಲು ಮತ್ತು ಆದೇಶಗಳನ್ನು ಜಾರಿ ಮಾಡಲು ಸಹಾಯಕವಾಗುತ್ತದೆ.

1. **ಭಾವನಾತ್ಮಕ ಸಂಗತಿಗಳು:** ಕಾರ್ಯಕರ್ತರ ಅವಲೋಕನವನ್ನು ಆಧರಿಸಿ ಮಗುವಿನ ಭಾವನಾತ್ಮಕ ಲಕ್ಷಣಗಳನ್ನು ಇಲ್ಲಿ ತುಂಬಬೇಕು. ಇದರಲ್ಲಿ, ಅಳುಮೋರೆಯಂಥ ಮಾದಕ ಸೇವನೆಯಿಂದ ಹಿಂತೆಗೆದುಕೊಂಡ ಲಕ್ಷಣ, ಕೋಪದ ಹಠಾತ್ ಆಸ್ಫೋಟ, ಇತರರೊಂದಿಗೆ ವಿನಾಕಾರಣ ಜಗಳಕ್ಕಿಳಿಯುವುದು, ಸಿಗರೇಟು, ಮದ್ಯ ಅಥವಾ ಇತರ ಇಂಥ ದ್ರವ್ಯಗಳಿಗಾಗಿ ಕಾಡಿಬೇಡುವುದು, ಕೊಡದೇ ಇದ್ದರೆ ಹೆದರಿಸುವುದು, ಆತ್ಮಹತ್ಯಾ ಪ್ರವೃತ್ತಿ, ನಿದ್ದೆರಹಿತತೆ, ಲೈಂಗಿಕವಾಗಿ ಅಪಾಯಕಾರಿ ವರ್ತನೆ ಇತ್ಯಾದಿ ಒಳಗೊಂಡಿರುತ್ತವೆ.
2. **ದೈಹಿಕ ಸ್ಥಿತಿ:** ಮಾದಕ ದ್ರವ್ಯ ಸೇವನೆ, ಬೀಡಿ/ಸಿಗರೇಟು ಸೇವನೆಗೆ ಸಂಬಂಧಿಸಿದ ದೈಹಿಕ ಚಿಹ್ನೆಗಳು, ಸತತ ಕೆಮ್ಮು, ನಡುಕ, ಚರ್ಮದ ದದ್ದುಗಳು, ಜ್ವರ, ವಾಂತಿ, ತಲೆನೋವು, ದೇಹದ ಯಾವುದೇ ಭಾಗದಿಂದ ರಕ್ತಸ್ರಾವ, ದೇಹದ ಯಾವುದೇ ಭಾಗದಲ್ಲಿ ಊತ, ನೋವು, ಯಾವುದೇ ಅನಾರೋಗ್ಯದ ಪ್ರಾರಂಭದ ದೈಹಿಕ ಲಕ್ಷಣಗಳು ಇತ್ಯಾದಿಗಳನ್ನು ಕಾರ್ಯಕರ್ತರು ಇಲ್ಲಿ ಸೇರಿಸಬಹುದು.
3. **ಬುದ್ಧಿಮತ್ತೆ:** ಮಗುವಿನ ಗ್ರಹಿಕೆ ಕೌಶಲಗಳನ್ನು ಅವಲೋಕಿಸುವ ಮೂಲಕ ಇದಕ್ಕೆ ಪ್ರತಿಕ್ರಿಯಿಸಬಹುದು. ಸಂದರ್ಶನದ ವೇಳೆಯಲ್ಲಿ ಕಾರ್ಯಕರ್ತರು ವಯಸ್ಸಿಗೆ ತಕ್ಕ ಪ್ರಶ್ನೆಗಳನ್ನು ಕೇಳಿದಾಗ ಅದನ್ನು ಅರ್ಥ ಮಾಡಿಕೊಂಡು ಉತ್ತರಿಸುವ ಮಗುವಿನ ಸಾಮರ್ಥ್ಯ, ಕಂಠಪಾಠ, ಲೆಕ್ಕಾಚಾರ ಮಾಡುವುದು, ತರ್ಕ, ಓದುವುದು, ಅವಧಾನ ಮತ್ತು ಭಾಷೆಯ ಸಮರ್ಪಕ ಬಳಕೆ ಇತ್ಯಾದಿ. ತಮ್ಮ ಅವಲೋಕನದ ಪ್ರಕಾರ ಮಗುವಿನ ಬೌದ್ಧಿಕ ಅಸಾಮರ್ಥ್ಯದ ಹೆಚ್ಚು ವಿವರವಾದ ಮೌಲ್ಯಮಾಪನದ ಅಗತ್ಯವಿದೆ ಎಂದು ಕಾರ್ಯಕರ್ತರಿಗೆ ಅನ್ನಿಸಿದರೆ, ಅವರು ಮಗುವನ್ನು ಮಾನಸಿಕ ಆರೋಗ್ಯ ತಜ್ಞರ ಬಳಿ ಕಳಿಸಿಕೊಡಬೇಕು. ಮಗುವಿಗೆ ಮುಂದುವರೆದ ಮಾನಸಿಕ ಆರೋಗ್ಯ ಮೌಲ್ಯಮಾಪನದ ಅಗತ್ಯವಿದೆ ಎಂದು ಜೆಜೆಬಿಗೆ ಶಿಫಾರಸ್ಸು ಮಾಡಬೇಕು.
4. **ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳು:** ಮನೆ ಭೇಟಿ, ಮಗು, ತಂದೆತಾಯಿ/ಕುಟುಂಬ, ನೆರೆಹೊರೆ, ಶಾಲೆ, ಉದ್ಯೋಗದಾತರು ಇವರುಗಳ ಜೊತೆ ಮಾಡಿದ ಸಂದರ್ಶನ, ಮಾತುಕತೆಗಳ ಅವಲೋಕನ ಮತ್ತು ವಿಶ್ಲೇಷಣೆಗಳನ್ನು ಆಧರಿಸಿ ಈ ಭಾಗವನ್ನು ತುಂಬಬೇಕು. ತಮ್ಮ ಪ್ರತಿಕ್ರಿಯೆಯನ್ನು ಕಾರ್ಯಕರ್ತರು ಮಗು ಮತ್ತು ಕುಟುಂಬದ ಸಾಮಾಜಿಕ ವಾಸ್ತವಗಳು ಧರ್ಮ, ಜಾತಿ, ವರ್ಗ, ಲಿಂಗ, ಸಾಮರ್ಥ್ಯ ಇತ್ಯಾದಿಗಳ ಸಂದರ್ಭದಲ್ಲಿ ಸಮಂಜಸಗೊಳಿಸಬೇಕು.
5. **ಸಮಸ್ಯೆಗಳ ಸಂಭವನೀಯ ಕಾರಣಗಳು:** ಇಲ್ಲಿ 'ಸಮಸ್ಯೆ' ಎನ್ನುವುದನ್ನು ಆಪಾದಿತ ಅಪರಾಧವನ್ನು ಉಲ್ಲೇಖಿಸಲು ಹೇಳಲಾಗಿಲ್ಲ, ಬದಲಿಗೆ, ಕಾನೂನಾತ್ಮಕವಾಗಿ ಮತ್ತು ಸಾಮಾಜಿಕವಾಗಿ ಅಂಗೀಕಾರಾರ್ಹವಲ್ಲದ ರೀತಿಯಲ್ಲಿ ವರ್ತಿಸುವಂತೆ ಮಗುವನ್ನು ಪ್ರೇರೇಪಿಸಿದ ಮೂಲ ಕಾರಣಗಳ ಕುರಿತು ಹೇಳಲಾಗಿದೆ.

   ಉದಾಹರಣೆಗೆ: ಮಕ್ಕಳಲ್ಲಿ ಗುರುತಿಸಬಹುದಾದ ಒಂದು ಸಮಸ್ಯೆಯೆಂದರೆ, ದೊಡ್ಡವರ ಮಾತುಗಳನ್ನು ಆಲಿಸುವುದರಲ್ಲಿ ಮತ್ತು ನಿಯಮಗಳನ್ನು ಅನುಸರಿಸುವುದರಲ್ಲಿ ನಿರಾಸಕ್ತಿ. ಈ ಸಮಸ್ಯೆಗೆ ಕಾರಣ, ಮನೆಯಲ್ಲಿ ಪ್ರೀತಿ ಇಲ್ಲದಿರುವುದು, ಕುಟುಂಬದ ಅಸ್ಥಿರತೆ, ಅವರ ಬದುಕಿನಲ್ಲಿರುವ ದೊಡ್ಡವರ ಜೊತೆಯಲ್ಲಿ ಮಗು ಹೊಂದಿರಬಹುದಾಗಿದ್ದ ಅನಾರೋಗ್ಯಕರ ಸಂಬಂಧ ಅಥವಾ ಯಾವುದಾದರೂ ವಯಸ್ಕ ಮಾರ್ಗದರ್ಶಕರು ಇಲ್ಲದಿರುವುದು.
6. **ಪ್ರಕರಣದ ವಿಶ್ಲೇಷಣೆ, ಕಾರಣಗಳು/ಅಪರಾಧಕ್ಕೆ ಪ್ರೇರಕವಾದ ಸಂಗತಿಗಳು ಸೇರಿದ ಹಾಗೆ:** ಜಾಗರೂಕತೆಯಿಂದ ಮಾಡಿದ ವಿಶ್ಲೇಷಣೆಯ ನಂತರ ಕಾರ್ಯಕರ್ತರು ಅದರ ಸಂಕ್ಷಿಪ್ತ ತಾತ್ಪರ್ಯವನ್ನು ಇಲ್ಲಿ ಬರೆಯಬೇಕು. ಇದರಲ್ಲಿ, ಮಗುವಿನ ದೈಹಿಕ ಮತ್ತು ಮಾನಸಿಕ ಆರೋಗ್ಯ, ಮತ್ತು ಇತರ ಸಾಮಾಜಿಕ-ಆರ್ಥಿಕ ಸಂಗತಿಗಳು ಒಳಗೊಂಡಿರಬಹುದು.

7. **ಸಂಪರ್ಕಿಸಿದ ಪರಿಣತರ ಅಭಿಪ್ರಾಯ:** ಯಾವುದೇ ಒಂದು ಪ್ರಕರಣವನ್ನು ವಿಶ್ಲೇಷಿಸುವುದು ಅಥವಾ ಮೌಲ್ಯಮಾಪನ ಮಾಡುವುದು ತಮಗೆ ಕಷ್ಟವೆಂದು ಕಂಡುಬಂದರೆ ಕಾರ್ಯಕರ್ತರು ಕ್ಷೇತ್ರದಲ್ಲಿನ, ಉದಾಹರಣೆಗೆ, ಮಕ್ಕಳ ಮನೋವಿಜ್ಞಾನದ ಕ್ಷೇತ್ರದ ಒಬ್ಬ ಪರಿಣತರ ಸಲಹೆಯನ್ನು ಪಡೆಯಬಹುದು. ಸಲಹೆಗಾಗಿ ಕೇಳಿದ ತಜ್ಞರ ವಿವರಗಳ ಸಹಿತವಾಗಿ ಅವರು ನೀಡಿದ ಅವಲೋಕನವನ್ನು ಇಲ್ಲಿ ಬರೆಯಬೇಕು. ತಜ್ಞರಿಂದ ದೊರೆತ ಲಿಖಿತ ದಾಖಲೆ ಏನಾದರೂ ಇದ್ದರೆ ಅದನ್ನೂ ಎಸ್‌ಐಆರ್‌ನೊಂದಿಗೆ ಲಗತ್ತಿಸಬೇಕು.
8. **ಪ್ರೊಬೆಷನ್ ಅಧಿಕಾರಿ/ಮಕ್ಕಳ ಕಲ್ಯಾಣ ಅಧಿಕಾರಿಯವರಿಂದ ಪುನರ್ವಸತಿ ಕುರಿತು ಮಾಡಲಾದ ಶಿಫಾರಸ್ಸು:** ಮಗುವಿನ ಕುರಿತಾದ ಸಾಮಾಜಿಕ-ಆರ್ಥಿಕ ಮತ್ತು ಮನೋವೈಜ್ಞಾನಿಕ ಸಂಗತಿಗಳನ್ನು ಎಚ್ಚರಿಕೆಯಿಂದ ವಿಶ್ಲೇಷಿಸಿದ ನಂತರ ಕಾರ್ಯಕರ್ತರು, ಜೆಜೆಬಿ ಮಗುವಿಗೆ ಜಾಮೀನು ನೀಡಬೇಕೆ, ಜಾಮೀನು ನಿರಾಕರಿಸಬೇಕೆ ಅಥವಾ ಷರತ್ತುಸಹಿತ ಜಾಮೀನು ನೀಡಿ, ಮಗುವಿನ ಅತ್ಯುತ್ತಮ ಹಿತಕ್ಕಾಗಿ ಅದನ್ನು ಚಿಕಿತ್ಸೆಗೆ, ಆಪ್ತ ಸಾಮಾಲೋಚನೆ, ಮನೋವೈದ್ಯಕೀಯ ರೆಫ಼ರಲ್, ಟ್ಯೂಷನ್ ಇತ್ಯಾದಿಗಳಿಗೆ ಕಳಿಸಬೇಕು ಎಂಬ ಸೂಚನೆ ನೀಡಬೇಕೇ ಎಂಬುದನ್ನು ಎಸ್‌ಐಆರ್‌ನಲ್ಲಿ ಶಿಫಾರಸ್ಸು ಮಾಡಬೇಕು. ಏನೇ ಶಿಫಾರಸ್ಸುಗಳನ್ನು ನೀಡಲಿ ಅವುಗಳನ್ನು ಸಕಾರಣವಾಗಿ ಸಮರ್ಥಿಸಿಕೊಂಡಿರಬೇಕು.

ಮಗುವಿಗೆ, ಮಗುವಿನ ಅತ್ಯುತ್ತಮ ಹಿತದಲ್ಲಿದ್ದರೆ, ಅದಕ್ಕೆ ಮುಂದುವರೆದ ಆಪ್ತ ಸಮಾಲೋಚನೆ, ಮನೋವೈದ್ಯಕೀಯ ಪರೀಕ್ಷೆ ನಡೆಸುವಂತೆ ಕಾರ್ಯಕರ್ತರು ಸೂಚಿಸಬಹುದು. ಇವುಗಳಲ್ಲದೇ, ಕಾರ್ಯಕರ್ತರು ಇನ್ಯಾವುದಾದರೂ ಶೈಕ್ಷಣಿಕ, ವೃತ್ತಿಸಂಬಂಧಿ, ಜೀವನೋಪಾಯ ಆಧಾರಿತ ತರಬೇತಿ ಅಥವಾ ಪುನರ್ವಸತಿ ಕ್ರಮಗಳಿಗಾಗಿ ಶಿಫಾರಸ್ಸು ಮಾಡಬಹುದು.

**ನಮೂನೆ 6 ಒಡ್ಡುವ ಸವಾಲುಗಳು:**

ಜೆಜೆ ಕಾಯ್ದೆಯನ್ನು ಸುಧಾರಣಾತ್ಮಕ ಧೋರಣೆಯನ್ನು ಆಧರಿಸಿ ರೂಪಿಸಲಾಗಿದೆಯೇ ವಿನಾ ಶಿಕ್ಷೆ ವಿಧಿಸುವ ಮನೋಭಾವದಿಂದಲ್ಲ. ಕಾನೂನು ನಿಗದಿಪಡಿಸಿರುವ ಎಸ್‌ಐಆರ್(ನಮೂನೆ 6)ರಲ್ಲಿ ಹಲವು ಮಿತಿಗಳಿದ್ದರೂ ಮತ್ತು ಪೂರ್ವಗ್ರಬಾಧಿತ ಎಂಬ ರೀತಿಯ ಪ್ರಶ್ನೆಗಳನ್ನು ಒಳಗೊಂಡಿದ್ದರೂ–ಕಾರ್ಯಕರ್ತರು ಎಸ್‌ಐಆರ್‌ನ್ನು ತಯಾರಿಸುವಾಗ ಜೆಜೆ ಕಾಯ್ದೆಯ ಮೂಲಭಾವನೆಯನ್ನು ಮನಸ್ಸಿನಲ್ಲಿರಿಸಿಕೊಳ್ಳಬೇಕು ಮತ್ತು ಪ್ರಶ್ನೆಗಳನ್ನು ಪಕ್ಷಪಾತೀಯ ಧೋರಣೆ ಇಲ್ಲದೇ, ಮಗು–ಸ್ನೇಹಿ ರೀತಿಯಲ್ಲಿ ಕೇಳುವುದನ್ನು ಖಚಿತಪಡಿಸಿಕೊಳ್ಳಬೇಕು.



ಅಧ್ಯಾಯ 7

# ಸಂವಹನ ಒಂದು ಸಾಧನವಾಗಿ

## ಸಂವಹನದ ಸಾಧನಗಳು

ಎಸ್‌ಐಆರ್‌ಗಾಗಿ ಸಾಮಾಜಿಕ ತನಿಖೆಯನ್ನು ನಡೆಸುವಾಗ ಕಾರ್ಯಕರ್ತರು ವಹಿಸುವ ಹೊಣೆಗಾರಿಕೆಯಲ್ಲಿ ಸಂವಹನವು ಬಹಳ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಸಂವಹನದಲ್ಲಿ ಮೌಖಿಕ ಮತ್ತು ಮೌಖಿಕವಲ್ಲದ– ಎರಡೂ ಬಗೆ ಒಳಗೊಂಡಿರುತ್ತವೆ. ಕಾರ್ಯಕರ್ತರು ಬಳಸುವ ಮೌಖಿಕ ಭಾಷೆಯು ಮಗು/ಕುಟುಂಬದಲ್ಲಿ ಒಂದು ಬಗೆಯ ಆರಾಮವನ್ನು ಸೃಷ್ಟಿಸಿ, ಕಾರ್ಯಕರ್ತರಲ್ಲಿ ಅವರ ವಿಶ್ವಾಸವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ಸಂದರ್ಶನವು ಸಾಗುವ ದಿಕ್ಕನ್ನೂ ಪ್ರಭಾವಿಸುತ್ತದೆ.

ಮಗುವಿನೊಂದಿಗೆ ಮಾತುಕತೆ ನಡೆಸುವುದು ಕಾರ್ಯಕರ್ತರಿಗೆ ಹಲವು ಬಗೆಯಲ್ಲಿ ಸವಾಲಾಗಿ ಪರಿಣಮಿಸಬಹುದು. ಇದಕ್ಕೆ ಮುಖ್ಯ ಕಾರಣವೆಂದರೆ, ಮಗುವಿನ ಸಂವಹನವು ಅದರ ಇನ್ನೂ ಪೂರ್ಣವಾಗಿ ಬೆಳೆಯದೇ ಇರುವ ಅರಿವನ್ನು ಆಧರಿಸಿರುತ್ತದೆ. ಆದ್ದರಿಂದ, ಕಾರ್ಯಕರ್ತರು ಮಗುವಿನ ಜೊತೆಯಲ್ಲಿ ಸಂದರ್ಶನವನ್ನು ಮಾಡುವ ಮುಂಚೆ ಸಾಕಷ್ಟು ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಮಗುವಿನೊಂದಿಗೆ ವಿಶ್ವಾಸವನ್ನು ಗಳಿಸಿಕೊಳ್ಳಲು, ಮಗುವು ಮುಕ್ತ ಮನಸ್ಸಿನಲ್ಲಿ ಮಾತಾಡಲು ಅಗತ್ಯವಾದ ಸುರಕ್ಷಿತ ವಲಯವನ್ನು ಸೃಷ್ಟಿಸಲು ಈ ಸಿದ್ಧತೆ ಬಹಳ ಮುಖ್ಯ. ಕಾರ್ಯಕರ್ತರು ಮಗುವು ತಮ್ಮೊಂದಿಗೆ ಹಂಚಿಕೊಳ್ಳುವ ಅನುಭವಗಳು, ಕೆಲವೊಮ್ಮೆ ಅಸಂಗತವಾಗಿ ತೋರಬಹುದು, ಅದು ಆ ವಯಸ್ಸಿನ ಒಂದು ಸ್ವಭಾವವಾಗಿರುತ್ತದೆ, ಮತ್ತು ಆ ಮಗುವಿನಲ್ಲಿ ನಡೆಯುತ್ತಿರುವ ಭೌತಿಕ ಮತ್ತು ಬೌದ್ಧಿಕ ಬೆಳವಣಿಗೆಗಳ ಪ್ರತೀಕವಾಗಿರುತ್ತವೆ ಎಂಬುದರ ಕುರಿತು ಜಾಗರೂಕರಾಗಿರಬೇಕು. ಮಗುವಿನ ಸಾಮಾಜಿಕ ಆಯಾಮಗಳನ್ನು ಆಧರಿಸಿ ಪ್ರತಿಯೊಂದು ಮಗುವಿನ ಅನುಭವವು ಮತ್ತು ಅದನ್ನು ಹಂಚಿಕೊಳ್ಳುವ ವಿಧಾನವು ವಿಭಿನ್ನವಾಗಿರುತ್ತದೆ.



## ಮೌಖಿಕ ಭಾಷೆ

ಕಾರ್ಯಕರ್ತರಿಗೆ ಮಗು/ಕುಟುಂಬ ಮಾತಾಡುವ ಮೊದಲ ಭಾಷೆ/ಉಪಭಾಷೆ ಗೊತ್ತಿದ್ದರೆ ಬಹಳ ಉತ್ತಮ. ಆ ಭಾಷೆ ಕಾರ್ಯಕರ್ತರಿಗೆ ಬಾರದೇ ಇದ್ದರೆ, ಅಥವಾ ಚೆನ್ನಾಗಿ ಸಂವಹನ ಮಾಡುವಷ್ಟು ಬಾರದೇ ಇದ್ದರೆ ಅದನ್ನು **ಅರ್ಥ ಮಾಡಿಸಿ ಹೇಳಬಲ್ಲ ಒಬ್ಬ ಸಹಾಯಕರನ್ನು ಕಾರ್ಯಕರ್ತರು ಇಟ್ಟುಕೊಳ್ಳಬಹುದು.** ಇಂಥ ವಿವರಕರಿಗೆ ಕುಟುಂಬ ಮತ್ತು ಕಾರ್ಯಕರ್ತ ಇಬ್ಬರ ಭಾಷೆಯೂ ಚೆನ್ನಾಗಿ ಗೊತ್ತಿರಬೇಕಾದುದು ಅನಿವಾರ್ಯ. ಕೇವಲ ಪದಗಳ ಅರ್ಥ ಗೊತ್ತಿದ್ದರೆ ಸಾಲದು, ಆ ಉಪಭಾಷೆಯ ನುಡಿಗಟ್ಟು, ಮಾತಾಡುವ ಶೈಲಿಯೂ ಗೊತ್ತಿರಬೇಕು. ಇಂಥ ಸಂದರ್ಭದಲ್ಲಿ ಸಹಜವಾಗಿಯೇ ಎಸ್‌ಐಆರ್ ತಯಾರಿಸಲು ಸಾಮಾನ್ಯಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಹೀಗಾಗಿ ಸಂದರ್ಶನಕ್ಕಾಗಿ ಸಮಯ ನಿಗದಿಪಡಿಸಿಕೊಳ್ಳುವಾಗ ಕಾರ್ಯಕರ್ತರು ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಕೆಲವೊಮ್ಮೆ ಕಾರ್ಯಕರ್ತರು ಮತ್ತು ಕುಟುಂಬದ ನಡುವೆ ಎರಡೂ ಭಾಷೆಗಳನ್ನು ಬಲ್ಲ ವಿವರಕರು ಸಿಗದೇ ಇರಬಹುದು, ಆಗ ಕಾರ್ಯಕರ್ತರು, ನಿಮ್ಮ ನೆರೆಹೊರೆಯಲ್ಲಿ ಅಂಥ ವ್ಯಕ್ತಿ ಯಾರಾದರೂ ಇದ್ದಾರೆಯೇ, ಅವರು ನಮ್ಮ ಜೊತೆ ಇದ್ದರೆ ನಿಮಗೆ ಅಭ್ಯಂತರವಿಲ್ಲವೇ ಎಂದು ಕುಟುಂಬವನ್ನು ವಿಚಾರಿಸಬಹುದು.

ಕಾರ್ಯಕರ್ತರು ಮತ್ತು ಕುಟುಂಬದ ನಡುವೆ ಸುಗಮ ಸಂವಹನವನ್ನು ಏರ್ಪಡಿಸಲು ಇರುವ ಮೊದಲ ಸಾಧನವೆಂದರೆ ಭಾಷೆ. ಆದ್ದರಿಂದ ಭಾಷೆಯನ್ನು ಹೆಚ್ಚು ಸಮರ್ಥವಾಗಿ ಬಳಸಬೇಕು. ಕಾರ್ಯಕರ್ತರು ನಿಂದಿಸುವ, ದೂಷಿಸುವ, ಕಳಂಕ ಹೊರಿಸುವ ರೀತಿಯ ಭಾಷೆಯನ್ನು ಬಳಸದ ಹಾಗೆ ಎಚ್ಚರಿಕೆ ವಹಿಸಬೇಕು. 'ಕ್ರಿಮಿನಲ್', 'ಬಾಲಾಪರಾಧಿ', 'ಅಪರಾಧ,' 'ದೋಷಿ,' ಇಂಥ ಪದಗಳನ್ನು ಮತ್ತು ಧರ್ಮ ಅಥವಾ ಜಾತಿ ಆಧಾರಿತ ಗುರುತುಗಳನ್ನು ಬಳಸಬಾರದು. ಇದರ ಬದಲಿಗೆ ಕಾರ್ಯಕರ್ತರು ಮಗುವನ್ನು 'ಮಗು'ವಾಗಿ ಮಾತ್ರ ನೋಡಬೇಕು, ಮತ್ತು ಅಪರಾಧವನ್ನು 'ಆಪಾದನೆ' ಎಂದು ಮಾತ್ರ ತಿಳಿದಿರಬೇಕು. ಸಂವಹನದಲ್ಲಿ ಪರಿಣಾಮಕಾರಿ ಆಲಿಸುವಿಕೆಯೂ ಬಹಳ ಮುಖ್ಯ. ಕಾರ್ಯಕರ್ತರು ಆಳವಾದ ಆಸಕ್ತಿಯಿಂದ ಆಲಿಸಿದರೆ ಅದು ಮಗು ಮತ್ತು ಕುಟುಂಬದಲ್ಲಿ ಅದು ಅವರ ಕುರಿತು ಭರವಸೆ ಉಂಟಾಗುತ್ತದೆ; ಅವರು ತಮ್ಮ ಅತ್ಯಂತ ಗೋಪ್ಯವಾದ ವಿಚಾರಗಳನ್ನೂ ಹೆಚ್ಚು ಮುಜುಗುರವಿಲ್ಲದೇ ಹಂಚಿಕೊಳ್ಳಲು ಮನಸ್ಸು ಮಾಡುತ್ತಾರೆ.

## ಆಂಗಿಕ ಭಾಷೆ ಅಥವಾ ಮೌಖಿಕವಲ್ಲದ ಭಾಷೆ

ಸಂದರ್ಶನದ ವೇಳೆಯಲ್ಲಿ ಮೌಖಿಕ ಅಥವಾ ಶಾಬ್ದಿಕವಲ್ಲದ ಭಾಷೆ ಮಹತ್ವದ ಪಾತ್ರವನ್ನು ವಹಿಸುತ್ತದೆ. ಉದಾಹರಣೆಗೆ, ಮಗು/ಕುಟುಂಬ ಏನನ್ನಾದರೂ ಹೇಳುವಾಗ ಕೈ ಅಥವಾ ಕಾಲುಗಳಿಂದ ಚಡಪಡಿಸುತ್ತಿದ್ದರೆ, ಮಾತಾಡುವಾಗ ಬೆವರುತ್ತಿದ್ದರೆ, ಉಸಿರುಗಟ್ಟಿದರೆ, ಅತ್ತರೆ ಅವರ ಮಾತುಗಳಿಗಿಂತ ಹೆಚ್ಚು ಸಮರ್ಥವಾಗಿ ಅವರ ದೇಹಗಳು ಸಂವಹನಿಸುತ್ತವೆ ಎಂಬುದನ್ನು ಗುರುತಿಸಬೇಕು, ಈ ಆಂಗಿಕ ಭಾಷೆಯನ್ನೂ ಅಷ್ಟೇ ಲಕ್ಷವಹಿಸಿ ಆಲಿಸಬೇಕು.

## ಗತಿಶೀಲತೆ: ಸಾಂಸ್ಕೃತಿಕ ಮತ್ತು ಅಂತರ್ಗತ ಶಕ್ತಿ ವ್ಯತ್ಯಾಸಗಳು

ಕಾರ್ಯಕರ್ತರು ಎಸ್ಐಆರ್ ತಯಾರಿಸಲು ತೊಡಗುವ ಮುನ್ನ ಸಮುದಾಯದ ಸಾಂಸ್ಕೃತಿಕ ಗತಿಶೀಲತೆಯನ್ನು ಅರ್ಥ ಮಾಡಿಕೊಳ್ಳಬೇಕು. ಉದಾಹರಣೆಗೆ, ಕೆಲವು ಸಮುದಾಯಗಳಲ್ಲಿ ತಮ್ಮನ್ನು ವಿರುದ್ಧ ಲಿಂಗದ ಕಾರ್ಯಕರ್ತರು ಸಂದರ್ಶನ ಮಾಡುವುದನ್ನು ಸಮ್ಮತಿಸುವುದಿಲ್ಲ. ಕಾರ್ಯಕರ್ತರಿಗೆ ಈ ವಾಡಿಕೆಯ ಪರಿಚಯವಿಲ್ಲದೇ ಸಂದರ್ಶನಕ್ಕೆ ಒತ್ತಾಯಿಸಿದರೆ ಪ್ರಶ್ನೆಗಳಿಗೆ ಸಿಗುವ ಪ್ರತಿಕ್ರಿಯೆಗಳು ಮತ್ತು ತತ್ಪರಿಣಾಮವಾಗಿ ಎಸ್ಐಆರ್ ಮೇಲೆ ಇದು ನಕಾರಾತ್ಮಕ ಪ್ರಭಾವವನ್ನು ಬೀರುತ್ತದೆ. ಆದ್ದರಿಂದ, ಈ ಕುರಿತು ಕಾರ್ಯಕರ್ತರು ಎಚ್ಚರಿಕೆ ವಹಿಸಬೇಕು.

ಎಸ್ಐಆರ್‌ಗಾಗಿ ಸಂದರ್ಶನಗಳನ್ನು ನಡೆಸುವಾಗ ಕಾರ್ಯಕರ್ತರ ಆಂಗಿಕ ಭಾಷೆಯೂ ಮಹತ್ವದ ಪಾತ್ರವನ್ನು ವಹಿಸುತ್ತಿರುತ್ತದೆ. ಉದಾಹರಣೆಗೆ, ಈ ಒಂದು ಸನ್ನಿವೇಶವನ್ನು ಊಹಿಸಿಕೊಳ್ಳಿ: ಕಾರ್ಯಕರ್ತರು ಮನೆ ಭೇಟಿಗಾಗಿ ಹೋಗಿದ್ದಾರೆ, ತಾವು ಸ್ವತಃ ನೆಲದ ಮೇಲೆ ಕುಳಿತಿರುವ ಮನೆಯವರು ಅವರನ್ನು ಒಂದು ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ವಿನಂತಿಸುತ್ತಾರೆ. ಅವರ ಮನವಿಯನ್ನು ಮನ್ನಿಸಿ ನೀವು ಕುರ್ಚಿಯ ಮೇಲೆ ಕುಳಿತುಕೊಂಡಿದ್ದೇ ಆದರೆ **ನಿಮ್ಮ ಮತ್ತು ಅವರ ನಡುವಿನ ಸ್ಥಾನ ಅಥವಾ ಅಧಿಕಾರದಲ್ಲಿನ ವ್ಯತ್ಯಾಸವು** ತಾನಾಗಿಯೇ ಕೆಲಸ ಮಾಡತೊಡುತ್ತದೆ ಮತ್ತು ಎದ್ದು ಕಾಣುತ್ತದೆ. ಕಾರ್ಯಕರ್ತರು ಸದೃಢಕಾಯರಾಗಿದ್ದರೆ, ದೈಹಿಕವಾಗಿ ಅವರಿಗೇನೂ ವಿಶೇಷ ತೊಂದರೆ ಇಲ್ಲದಿದ್ದರೆ ಕಾರ್ಯಕರ್ತರೂ ಮಗು ಮತ್ತು ಕುಟುಂಬದವರ ಹಾಗೆ ಅವರದೇ ಮಟ್ಟದಲ್ಲಿ ನೆಲದ ಮೇಲೆ ಕುಳಿತುಕೊಳ್ಳಬೇಕು.



**ಅಧ್ಯಾಯ 8**

# ಇಂಥ ಸನ್ನಿವೇಶಗಳಲ್ಲಿ ನಾನು ಏನನ್ನು ಮಾಡುತ್ತೇನೆ?

## ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು

**1. ಕುಟುಂಬವು ನಮ್ಮ ಮನವಿಯನ್ನು ತಿರಸ್ಕರಿಸಿ ಎಸ್‌ಐಆರ್‌ನಲ್ಲಿ ಭಾಗವಹಿಸಲು ಒಪ್ಪದೇ ಇದ್ದರೆ ಏನು ಮಾಡುವುದು?**

ಈ ಪರಿಸ್ಥಿತಿಗೆ ಹಲವು ಸನ್ನಿವೇಶಗಳು ಕಾರಣವಾಗಬಹುದು. ಅವುಗಳಲ್ಲಿ ಮೂರನ್ನು ಇಲ್ಲಿ ಪರಿಶೀಲಿಸೋಣ.

ಎ. ಕಾರ್ಯಕರ್ತರು ಫೋನ್ ಮಾಡಿದರೂ ಕುಟುಂಬದವರು ಉತ್ತರಿಸಲು ನಿರಾಕರಿಸುತ್ತಾರೆ ಅಥವಾ ಮನೆ ಭೇಟಿಗೆಂದು ಕಾರ್ಯಕರ್ತರು ಹೋದಾಗ ಅವರೊಂದಿಗೆ ಮಾತಾಡಲು ಒಪ್ಪುವುದಿಲ್ಲ. ಇಂಥ ಸನ್ನಿವೇಶದಲ್ಲಿ ಕಾರ್ಯಕರ್ತರು ಹಲವು ತಂತ್ರಗಳನ್ನು ಬಳಸಬಹುದು.

- ಫೋನ್ ನಂಬರೇ ಸರಿಯಾಗಿಲ್ಲ ಎನ್ನುವ ಕಾರಣಕ್ಕಾಗಿ ಮಗುವಿನ ಪೋಷಕರು ಅಥವಾ ಕುಟುಂಬವು ಫೋನಿಗೆ ಉತ್ತರಿಸುತ್ತಿಲ್ಲವಾದರೆ, ಕಾರ್ಯಕರ್ತರು ಸಂಬಂಧಪಟ್ಟ ಪೊಲೀಸ್ ಸ್ಟೇಷನ್, ವೀಕ್ಷಣಾ ಗೃಹ ಅಥವಾ ಆ ಏರಿಯಾದಲ್ಲಿ ಕೆಲಸ ಮಾಡುತ್ತಿರುವ ಒಂದು ಎನ್‌ಜಿಒವನ್ನು ಸಂಪರ್ಕಿಸಿ ಮಗುವಿನ ಸರಿಯಾದ ಸಂಪರ್ಕ ವಿವರಗಳನ್ನು ಪಡೆಯಬಹುದು.
- ಕಾರ್ಯಕರ್ತರ ಕರೆಗಳನ್ನು ಸ್ವೀಕರಿಸದೇ ಇರುವುದಕ್ಕೆ ಅಥವಾ ಸಂದರ್ಶನವನ್ನು ನೀಡದೇ ಇರುವುದಕ್ಕೆ ಅವರ ಕೆಲಸಕಾರ್ಯಗಳ ಶೈಲಿಯೂ ಕಾರಣವಾಗಿರಬಹುದು. ಉದಾಹರಣೆಗೆ, ಕುಟುಂಬದ ಸದಸ್ಯರೊಬ್ಬರು ಫ್ಯಾಕ್ಟರಿಯಲ್ಲಿ ಕೂಲಿಯಾಳಾಗಿ ಕೆಲಸ ಮಾಡುತ್ತಾರೆ, ವಾರದ ದಿನಗಳಲ್ಲಿ ಅವರು ಸಿಗುವುದೇ ಇಲ್ಲ. ಇಂಥ ಸಂದರ್ಭದಲ್ಲಿ ಕಾರ್ಯಕರ್ತರು ಅವರನ್ನು ಭಾನುವಾರ ಭೇಟಿ ಮಾಡಬಹುದು.

ಬಿ. ಮಗು ವಾಸಿಸುವ ಏರಿಯಾವನ್ನು ಹುಡುಕಿಕೊಂಡ ನಂತರವೂ ಕುಟುಂಬದ ಮನೆಯನ್ನು ಗುರುತಿಸುವುದೂ ಕಷ್ಟವಾಗಬಹುದು, ಮನೆ ಸಿಕ್ಕರೂ ಮನೆಯವರು ಕಾರ್ಯಕರ್ತರೊಂದಿಗೆ ಸಂದರ್ಶನ ನೀಡಲು ಒಪ್ಪದೇ ಇರಬಹುದು. ಇಂಥ



ಸನ್ನಿವೇಶದಲ್ಲಿ ಕುಟುಂಬವು ಹಾಗೆ ಹೇಳುತ್ತಿರುವುದಕ್ಕೆ ಕೆಳಗಿನ ಯಾವುದಾದರೂ ಕಾರಣ ಇರಬಹುದು ಎಂದು ಭಾವಿಸಬೇಕು:

i. ಮಾಹಿತಿ ಸಾಕಷ್ಟು ಇಲ್ಲದಿರುವುದು ಅಥವಾ ಅನಗತ್ಯ ಭೀತರಾಗಿರುವುದು

ii. ಮಗುವಿನ ಬಗ್ಗೆ ಕಾಳಜಿ ಮತ್ತು ಕಾನೂನು ವ್ಯವಸ್ಥೆಯು ಹೇಗೆ ಕೆಲಸ ಮಾಡುತ್ತದೆ ಎನ್ನುವುದರ ಅರಿವು ಇಲ್ಲದಿರುವುದು

iii. ಸಂದರ್ಶಕರು ಕಾನೂನು ಜಾರಿ ಅಧಿಕಾರಿ ಅಥವಾ ಪೊಲೀಸ್ ಅಧಿಕಾರಿಯಾಗಿರಬಹುದು ಎಂಬ ತಪ್ಪು ಕಲ್ಪನೆಯಿಂದ ಹುಟ್ಟಿದ ಭಯ

iv. ಮಗುವಿನ ಕುರಿತು ಆಪಾದನೆಯ ನಂತರ ನೆರೆಹೊರೆ/ಸಮುದಾಯದಲ್ಲಿ ಕಳಂಕ/ಅವಮಾನವನ್ನು ಎದುರಿಸಬೇಕಾದ ಭೀತಿ

v. ತಮ್ಮ ಹಿಂದಿನ ಆಘಾತಕಾರಿ ಅನುಭವದ ಕರಾಳ ನೆನಪಿನಿಂದಾಗಿ ಹತ್ತಿಕ್ಕಿಕೊಂಡ ಕೋಪ ಅಥವಾ ಭಯದಿಂದಾಗಿ ಮಗು ಮಾತಾಡಲು ನಿರಾಕರಿಸಬಹುದು.

ಇವು ಸಿಐಸಿಎಲ್ ಅಥವಾ ಅದರ ಕುಟುಂಬದವರು ಸಂದರ್ಶನ ನೀಡುವುದನ್ನು ನಿರಾಕರಿಸುವುದಕ್ಕೆ ಇರಬಹುದಾದ ಹಲವು ಕಾರಣಗಳಲ್ಲಿ ಕೆಲವು.

ಇಂಥ ಸನ್ನಿವೇಶದಲ್ಲಿ ಕಾರ್ಯಕರ್ತರು ಏನು ಮಾಡುತ್ತಾರೆ? ಕಾರ್ಯಕರ್ತರು ಈ ನಿರಾಕರಣೆಯ ಮೂಲವನ್ನು ಗುರುತಿಸಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಬೇಕು, ಅದನ್ನು ಬಿಟ್ಟು ಅವರ ಪ್ರತಿಕ್ರಿಯೆಯನ್ನು ಅದು ಇದ್ದ ಹಾಗೆಯೇ ಭಾವಿಸುವುದಲ್ಲ. ಉದಾಹರಣೆಗೆ, ಕಾರ್ಯಕರ್ತರು ಇದನ್ನು ಮಾಡಬಹುದು:

- ಎಸ್‌ಐಆರ್‌ನ ನಿಜವಾದ ಉದ್ದೇಶವನ್ನು ಕುಟುಂಬದವರಿಗೆ ಮನವರಿಕೆ ಮಾಡಿಸಬೇಕು, ಮಗುವಿನ ಭವಿಷ್ಯಕ್ಕೆ ಅದು ಹೇಗೆ ಮಹತ್ವದ್ದು, ಜೆಜೆಬಿ ಎದುರು ಎಸ್‌ಐಆರ್ ಹೇಗೆ ಮಗುವಿನ ಸಹಾಯಕ್ಕೆ ಬರುತ್ತದೆ ಎಂಬುದನ್ನು ಅರ್ಥ ಮಾಡಿಸಬೇಕು.
- ತಮ್ಮ ಮಗುವಿನ ಕುರಿತ ಕಾನೂನು ಕ್ರಮಗಳ ಕುರಿತು ಅವರಿಗೆ ಏನಾದರೂ ತಿಳಿದುಕೊಳ್ಳುವುದು ಇದೆಯೇ ಎಂದು ಕುಟುಂಬದವರಿಗೆ ಕೇಳುವುದು.
- ಅವರಿಗೆ ಕುಟುಂಬಕ್ಕೆ ಸಂಬಂಧಿಸಿದ ಏನಾದರೂ ಸಮಸ್ಯೆ ಇದೆಯೇ; ಸಂದರ್ಶನವನ್ನು ಬೇರೊಂದು ದಿನ ಅಥವಾ ಸಮಯಕ್ಕೆ ನಿಗದಿಪಡಿಸಬಹುದೇ ಎಂದು ಕೇಳುವುದು.

**ಹೀಗಾಗಿ, ಕಾರ್ಯಕರ್ತರು ಕುಟುಂಬದ ಕಡೆಯಿಂದ ಎದುರಾಗಿರುವ ನಿರಾಕರಣೆಯ ಸನ್ನಿವೇಶವನ್ನು ತಿಳಿಗೊಳಿಸುವ ಉಪಾಯಗಳನ್ನು ಕಂಡುಕೊಳ್ಳಬೇಕೇ ವಿನಾ, ಎಸ್‌ಐಆರ್‌ನ್ನು ನಡೆಸುವುದನ್ನೇ ಕೈಬಿಡುವುದಲ್ಲ.**

ಸಿ. ಇದೆಲ್ಲದರ ಹೊರತಾಗಿಯೂ, ಕುಟುಂಬವು ಮಾತುಕತೆಗೆ ಒಪ್ಪದೇನೇ ಇದ್ದರೆ, ಕಾರ್ಯಕರ್ತರು ಹೀಗೆ ಮಾಡಬಹುದು:

- ಅವರ ತೀರ್ಮಾನವನ್ನು ಗೌರವಿಸುವುದು ಮತ್ತು, ಅಲ್ಲಿಂದ ಮುಂದುವರೆದು (ಇದ್ದರೆ) ಮಗುವಿನ ಉದ್ಯೋಗದಾತರು, ನೆರೆಹೊರೆಯವರು ಮತ್ತು/ಅಥವಾ ಮಗು ಹೋಗುತ್ತಿದ್ದ ಶಾಲಾ ಶಿಕ್ಷಕರೊಂದಿಗೆ ಸಂದರ್ಶನವನ್ನು ನಡೆಸುವುದು.
- ಮಗುವು ಒಬ್ಬ ಸಿಐಎನ್‌ಸಿಪಿಯ ರೂಪದಲ್ಲಿ ಒಂದು ಸಂಸ್ಥೆಯೊಂದಿಗೆ ಸಂಬಂಧವನ್ನು ಹೊಂದಿದ್ದರೆ (ಉದಾಹರಣೆಗೆ, ಭಿಕ್ಷೆ ಬೇಡುತ್ತಾ ಸಿಕ್ಕ ಮಗು, ವಲಸೆ ಬಂದ ಮಗು, ಅನಾಥವಾದ ಮಗು), ಕಾರ್ಯಕರ್ತರು ಆ ಸಂಸ್ಥೆಗೂ ಭೇಟಿಕೊಡಬೇಕು.
- ಇದಲ್ಲದೇ, ಈ ಪ್ರಕ್ರಿಯೆಯಲ್ಲಿ ಕುಟುಂಬವನ್ನು ಸಂದರ್ಶಿಸಲಾಗಿಲ್ಲ ಎಂಬುದನ್ನು ಸೂಚಿಸುತ್ತಾ, ಅದಕ್ಕೆ ಕಾರಣಗಳನ್ನೂ ಎಸ್‌ಐಆರ್ ನಮೂನೆಯಲ್ಲಿ ನಮೂದಿಸಬೇಕು.



**2. ಕಾರ್ಯಕರ್ತರು ಈ ಪ್ರಕ್ರಿಯೆಯಲ್ಲಿ ಅನುಸರಿಸುವ ವಿಧಾನಗಳ ಮಟ್ಟಿಗೆ ಸೃಜನಶೀಲತೆಯ ಪಾತ್ರವೇನು?**

ಕುಟುಂಬವನ್ನು ಸಂಪರ್ಕಿಸುವಾಗ ಸೃಜನಶೀಲರಾಗಿರುವುದು ಬಹಳ ಮುಖ್ಯ. ಪ್ರತಿಯೊಂದು ಮಗು ಮತ್ತು ಅದರ ಕುಟುಂಬ ಸ್ವಭಾವದಲ್ಲಿ ಅನನ್ಯವಾಗಿರುತ್ತದೆ. ಹೀಗಾಗಿ ಆ ಕುಟುಂಬದಿಂದ ಎಸ್‌ಐಆರ್‌ಗಾಗಿ ಬೇಕಾದ ಮಾಹಿತಿಯನ್ನು ಸುಗಮವಾಗಿ ಪಡೆಯಲು ಪರಿಣಾಮಕಾರಿಯಾದ ವಿಧಾನವನ್ನು ಕಂಡುಕೊಳ್ಳಲು ಒಂದಷ್ಟು ಸಮಯವನ್ನು ವಿನಿಯೋಗಿಸಬೇಕು.

**3. ಒಂದು ಮಗುವಿನ ಎಸ್‌ಐಆರ್ ನಡೆಸುತ್ತಿರುವಾಗ ನನಗೆ ಮಾನವ ಸಂಪನ್ಮೂಲದ ಮಟ್ಟಿಗೆ ಕಷ್ಟಗಳು ಎದುರಾದರೆ ಏನು ಮಾಡಬೇಕು?**

ಎಸ್‌ಐಆರ್‌ನ್ನು ತಯಾರಿಸುವಾಗ, ಕಾರ್ಯಕರ್ತರು ಇದನ್ನು ನಡೆಸಲು ಅಗತ್ಯವಾದ ಸಂಪನ್ಮೂಲಗಳನ್ನು ಲೆಕ್ಕಹಾಕಬೇಕಾಗುತ್ತದೆ. ಇದು, ಈ ಪ್ರಕ್ರಿಯೆಗೆ ಬೇಕಾದ ಮಾನವ ಸಂಪನ್ಮೂಲದ ವಿಚಾರವೂ ಆಗಿರಬಹುದು. ಉದಾಹರಣೆಗೆ, ಸಂದರ್ಶನದ ವೇಳೆಯಲ್ಲಿ ಸಂದರ್ಶಕರು ಮತ್ತು ಕುಟುಂಬದ ನಡುವೆ ದ್ವಿಭಾಷಿಯ ಅಗತ್ಯವಿದ್ದರೆ, ಅಂಥ ಒಬ್ಬ ವ್ಯಕ್ತಿಯನ್ನು ನೇಮಿಸಿಕೊಳ್ಳಬೇಕು. ಹಾಗೆಯೇ, ಕುಟುಂಬ ಇರುವ ಜಾಗಕ್ಕೆ ಒಬ್ಬರೇ ಹೋಗಲು ಕಾರ್ಯಕರ್ತರಿಗೆ ಭಯವಾದರೆ, ಆ ಒಂದು ಪ್ರಕರಣಕ್ಕೆ ನೇರವಾಗಿ ಸಂಬಂಧವಿಲ್ಲದ, (ಸಾಮಾಜಿಕ ತನಿಖೆಯನ್ನು ನಡೆಸುವ ಅಧಿಕೃತತೆಯನ್ನು ಪಡೆದಿರುವ) ಇನ್ನೊಬ್ಬ ಸಮಾಜ ಕಾರ್ಯಕರ್ತರನ್ನು ಜೊತೆಗೆ ಕರೆದುಕೊಂಡು ಹೋಗಬಹುದು.

**4. ಮಗುವಿನ ಎಸ್‌ಐಆರ್‌ನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಲ್ಲಿ ನನಗೆ ತೊಂದರೆಯಾದರೆ ನಾನು ಏನು ಮಾಡಬೇಕು?**

- ಮಗುವಿನ ಕುರಿತು ಸಾಮಾಜಿಕ ತನಿಖೆಯನ್ನು ಮುಗಿಸಿದ ನಂತರ ಎಸ್‌ಐಆರ್‌ನ್ನು ತಯಾರಿಸುವ ಹಂತದಲ್ಲಿ ಕಾರ್ಯಕರ್ತರು ಸಮಸ್ಯೆಗಳನ್ನು ಎದುರಿಸಬಹುದು. ಮುಖ್ಯವಾಗಿ ಇದು ಮಗು/ಕುಟುಂಬದ ಸಾಮಾಜಿಕ-ಸಾಂಸ್ಕೃತಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ವಿಶ್ಲೇಷಣೆ ಮಾಡುವಾಗ ಎದುರಾಗುತ್ತದೆ. ಇದನ್ನು ಸಮಂಜಸ ರೀತಿಯಲ್ಲಿ ಬಗೆಹರಿಸಿಕೊಳ್ಳದೇ ಇದ್ದರೆ ಎಸ್‌ಐಆರ್ ಪರಿಣಾಮಕಾರಿಯಾಗದೇ ಹೋಗಬಹುದು, ಹೀಗಾಗಿ ಮಗುವಿನ ಪರಿಸ್ಥಿತಿಯನ್ನು ಸಮಂಜಸವಾಗಿ ವಿವರಿಸುವಲ್ಲಿ ವಿಫಲವಾಗಬಹುದು, ಇದರಿಂದಾಗಿ ಅದು ಮಗುವಿನ ಅತ್ಯುತ್ತಮ ಹಿತವನ್ನು ಕಾಪಾಡುವಲ್ಲಿ ಸೋಲಬಹುದು. ಆದ್ದರಿಂದ, ಮಗುವಿನ ಕುರಿತ ಎಸ್‌ಐಆರ್‌ನ್ನು ಅಂತಿಮವಾಗಿ ಸಲ್ಲಿಸುವ ಮುನ್ನ, ಕಾರ್ಯಕರ್ತರು ತಾವು ಸಂಗ್ರಹಿಸಿರುವ ಸವಿವರವಾದ ಪ್ರತಿಕ್ರಿಯೆಗಳು ಮತ್ತು ತಮ್ಮ ಅವಲೋಕನಗಳನ್ನು ಪೂರ್ವಗ್ರಹವಿಲ್ಲದ ಮತ್ತು ಈ ವಿಚಾರಗಳಲ್ಲಿ ಸಾಕಷ್ಟು ಉತ್ತಮ ಅನುಭವವಿರುವ ಇನ್ನೊಬ್ಬ ಸಮಾಜ ಕಾರ್ಯಕರ್ತರ ಜೊತೆ (ಅಥವಾ ಸಮಾಜ ಕಾರ್ಯ ಕ್ಷೇತ್ರದಲ್ಲಿ ಪರಿಣತಿ ಇರುವ ಜೆಜೆಬಿ ಸದಸ್ಯರೊಬ್ಬರ ಜೊತೆ) ಚರ್ಚೆ ಮಾಡುವುದು ಒಳ್ಳೆಯದು. ಇದರಿಂದಾಗಿ ಮಗುವಿನ ಸನ್ನಿವೇಶವನ್ನು ಒಂದು ಸಮಗ್ರವಾದ ರೀತಿಯಲ್ಲಿ ವಿಶ್ಲೇಷಣೆ ಮಾಡಿ ಸಮರ್ಥವಾದ ವರದಿಯನ್ನು ತಯಾರಿಸುವಲ್ಲಿ ನೆರವಾಗುತ್ತದೆ.
- ಎಸ್‌ಐಆರ್‌ನ್ನು ಜೆಜೆಬಿಗೆ ಸಲ್ಲಿಸುವ ಮುನ್ನ, ಮಗುವಿನ ಸಾಮಾಜಿಕ-ಮಾನಸಿಕ ಹಿನ್ನೆಲೆಯ ವಿಶ್ಲೇಷಣೆಯ ಮಟ್ಟಿಗೆ ಕಾರ್ಯಕರ್ತರು ಒಬ್ಬ ಮಕ್ಕಳ ಮನೋವಿಜ್ಞಾನಿಯ ಸಹಾಯವನ್ನು ಪಡೆಯಬಹುದು.

**5. ಡೈರಿಯನ್ನು ಇಟ್ಟುಕೊಳ್ಳುವುದು ಸಹಾಯಕವಾಗುತ್ತದೆಯೇ?**

- ಹೌದು, ಸಾಮಾಜಿಕ ತನಿಖೆಯನ್ನು ನಡೆಸುತ್ತಿರುವ ಅವಧಿಯಲ್ಲಿ, ನಿಮ್ಮ ಅವಲೋಕನಗಳನ್ನು ಒಂದು ಡೈರಿಯಲ್ಲಿ ದಾಖಲು ಮಾಡುತ್ತಾ ಹೋಗುವುದು ಬಹಳ ಉಪಯುಕ್ತ. ಕೊಟ್ಟಕೊನೆಯಲ್ಲಿ ನಮೂನೆ 6ನ್ನು ತುಂಬುವಾಗ ಇಲ್ಲಿನ ಹಲವು ಅಂಶಗಳು ವರದಿಯನ್ನು ಪರಿಪೂರ್ಣಗೊಳಿಸುವಲ್ಲಿ ಸಹಾಯಕವಾಗಬಹುದು. ಆದರೆ, ಸಂದರ್ಶನ, ಮಾತುಕತೆ




ನಡೆಸುವಾಗ, ಡೈರಿಯನ್ನು ತೆರೆದು ಟಿಪ್ಪಣಿ ಬರೆಯುತ್ತಾ ಕೂರಬಾರದು, ಬೇರೆಯವರಿಂದ ಆಲಿಸಿದ್ದನ್ನು ಮನಸ್ಸಿನಲ್ಲಿಯೇ ಟಿಪ್ಪಣಿ ಮಾಡಿಕೊಂಡು ನೆನಪಿನಲ್ಲಿ ಇರಿಸಿಕೊಳ್ಳುವುದನ್ನು ಅಭ್ಯಾಸ ಮಾಡಬೇಕು. ಇದು ಮಾತುಕತೆ ಯಾವುದೇ ಅಡ್ಡಿಆತಂಕ, ಮುಜುಗರವಿಲ್ಲದೇ ಸುಗಮವಾಗಿ ಸಾಗುವುದಕ್ಕೆ ನೆರವಾಗುತ್ತದೆ.
- ಮನಸ್ಸಿನಲ್ಲಿಯೇ ಟಿಪ್ಪಣಿ ಮಾಡಿಕೊಳ್ಳುವ ಈ ಪ್ರಕ್ರಿಯೆಯು ಮೊದಲು ಕಠಿಣವಾಗಿ ತೋರಿದರೂ ಅಭ್ಯಾಸವಾದ ಹಾಗೆ ಸುಲಭವಾಗುತ್ತಾ ಹೋಗುತ್ತದೆ. ಎಸ್‌ಐಆರ್ ಬರೆಯುವುದು ಸುಲಭವಾಗುತ್ತದೆ. ನಮೂನೆ 6ರ ಪರಿಚಯ ಸರಾಗವಾಗಿ ಆದಷ್ಟೂ ಸಾಮಾಜಿಕ ತನಿಖೆಯ ಪ್ರಕ್ರಿಯೆ ಹೆಚ್ಚು ಹೆಚ್ಚು ಸುಗಮ ಮತ್ತು ಪರಿಣಾಮಕಾರಿಯಾಗುತ್ತಾ ಹೋಗುತ್ತದೆ.

**6. ಎಸ್‌ಐಆರ್ ಒಂದು ಗೋಪನೀಯ ದಾಖಲೆಯೇ? ಯಾವುದೇ ಸಂದರ್ಭದಲ್ಲಿ ಇದರ ಗೋಪ್ಯತೆಯನ್ನು ಭಂಗಗೊಳಿಸಬಹುದೇ?**

- ಹೌದು, ಎಸ್‌ಐಆರ್ ಖಂಡಿತವಾಗಿಯೂ ಒಂದು ಗೋಪನೀಯ ದಾಖಲೆ, ಜೆಜೆಬಿಯೊಂದಿಗೆ ಬಿಟ್ಟರೆ ಅದನ್ನು ಇನ್ನ್ಯಾರ ಜೊತೆಯಲ್ಲಿಯೂ ಹಂಚಿಕೊಳ್ಳುವಂತಿಲ್ಲ. ಹೀಗಾಗಿ, ಕಾರ್ಯಕರ್ತರು ಗೋಪ್ಯತೆಯ ನಿಯಮಗಳು ಮತು ವೃತ್ತಿಯ ನೀತಿ ಸಂಹಿತೆಯನ್ನು ಮುರಿಯಬಾರದು.
- ಯಾವುದಾದರೂ ಕಾರಣಕ್ಕೆ ಮಗುವಿನ ಜೀವಕ್ಕೇ ಅಪಾಯವಿರುವ ವಿಶೇಷ ಸಂದರ್ಭದಲ್ಲಿ ಮಾತ್ರ ಗೋಪ್ಯತೆಯ ತತ್ತ್ವವನ್ನು ಮುರಿಯಬಹುದು. ಇಂಥ ಕಾರಣಗಳಲ್ಲಿ, ಆತ್ಮಹತ್ಯೆಯ ಅಥವಾ ಸ್ವಯಂಹಾನಿಯ, ಇನ್ನೊಬ್ಬರನ್ನು ಹತ್ಯೆ

ಮಾಡುವ, ಮಕ್ಕಳ ಲೈಂಗಿಕ ಅತ್ಯಾಚಾರ ಇತ್ಯಾದಿ ಸಂಭವನೀಯ ಅಪಾಯಗಳು ಒಳಗೊಂಡಿರುತ್ತವೆ. ಇಂಥ ಅಸಾಧಾರಣ ಸನ್ನಿವೇಶಗಳಲ್ಲಿ ಜೆಜೆಬಿಯು ತನ್ನ ಸ್ವವಿವೇಚನೆಯನ್ನು ಬಳಸಿ, ಅದು ಮಗುವಿನ ಅತ್ಯುತ್ತಮ ಹಿತಾಸಕ್ತಿಯಲ್ಲಿದ್ದರೆ, ಎಸ್‌ಐಆರ್‌ನ ಸಂಬಂಧಿತ ಮತ್ತು ಸೂಕ್ತವಾದ ಭಾಗಗಳನ್ನು ಅದಕ್ಕಾಗಿ ಸೂಕ್ತ ಅಧಿಕೃತತೆಯನ್ನು ಪಡೆದಿರುವ ಸಿಬ್ಬಂದಿಯೊಂದಿಗೆ ಹಂಚಿಕೊಳ್ಳಬಹುದು.

7. **ಸಿಐಸಿಎಲ್‌ನ ಎಸ್‌ಐಆರ್‌ಗಾಗಿ ಇತರ ಮಕ್ಕಳು/ಮೈನರ್ ಸ್ನೇಹಿತರು/ ಮೈನರ್ ಒಡಹುಟ್ಟಿದವರನ್ನು ಸಂದರ್ಶನ ಮಾಡಬಹುದೇ?**

- ಎಸ್‌ಐಆರ್ ಉದ್ದೇಶಕಾಗಿ ಮೈನರ್ ಮಕ್ಕಳನ್ನು ಸಂದರ್ಶಿಸುವುದಾದರೆ, ಅದಕ್ಕೂ ಮೊದಲು ಅವರ ತಂದೆತಾಯಿ/ಪೋಷಕರಿಂದ ಅನುಮತಿಯನ್ನು ಪಡೆಯಬೇಕಾಗುತ್ತದೆ. ಅಲ್ಲದೇ, ಮಗುವನ್ನು ಅದರ ತಂದೆತಾಯಿ/ಪೋಷಕರ ಉಪಸ್ಥಿತಿಯಲ್ಲಿಯೇ ಸಂದರ್ಶಿಸಬೇಕಾಗುತ್ತದೆ.
- ಮಗುವಿಗೆ ಅದರ **ಹಕ್ಕುಗಳು, ಸಂಭವನೀಯ ಅಪಾಯಗಳು, ಮತ್ತು ಸಂದರ್ಶನದ ಉದ್ದೇಶ ಮತ್ತು ಪರಿಣಾಮಗಳ** ಕುರಿತು ಆದಷ್ಟು ಸರಳವಾಗಿ ವಿವರಿಸಬೇಕು. ಸಂದರ್ಶನದಲ್ಲಿ ಭಾಗವಹಿಸುವ ಅಥವಾ ನಿರಾಕರಿಸುವ ಆಯ್ಕೆಯನ್ನು ಅವರಿಗೆ ಕೊಡಬೇಕು, ಒತ್ತಾಯಿಸಬಾರದು. ಜೊತೆಗೆ, ಕಾರ್ಯಕರ್ತರೊಂದಿಗೆ ಸಂದರ್ಶನದಲ್ಲಿ ಭಾಗವಹಿಸಲು ಒಪ್ಪಿದ ಪ್ರತಿಯೊಂದು ಮಗುವು ಆ ಪ್ರಕ್ರಿಯೆಯಲ್ಲಿ ಸುರಕ್ಷಿತತೆ ಮತ್ತು ಆರಾಮವನ್ನು ಅನುಭವಿಸುವಂತೆ ನೋಡಿಕೊಳ್ಳಬೇಕು. ಈ ಸಂಗತಿಗಳನ್ನು ಅನುಸರಿಸಿ, ಎಸ್‌ಐಆರ್‌ನ ಉದ್ದೇಶಕ್ಕಾಗಿ ಸಿಐಸಿಎಲ್‌ನ ಒಡಹುಟ್ಟಿದವರನ್ನು ಸಂದರ್ಶಿಸಬಹುದು.
- ಸಿಐಸಿಎಲ್‌ನ ಸ್ನೇಹಿತರನ್ನು ಸಂದರ್ಶಿಸುವುದನ್ನು ಕೈಬಿಡಬಹುದು. **ಸಿಐಸಿಎಲ್‌ನ ಖಾಸಗಿತನವನ್ನು ಸಂರಕ್ಷಿಸಲು** ಇದು ಅತ್ಯಗತ್ಯ. ಮಗುವಿನ ಒಡಹುಟ್ಟಿದವರಿಗೆ ಮಗುವಿನ ಮೇಲೆ ಹೊರೆಸಲಾಗಿರುವ ಆರೋಪದ ಕುರಿತು ಈಗಾಗಲೇ ಗೊತ್ತಿರಬಹುದು, ಆದರೆ ಆ ವಿಚಾರ ಸಿಐಸಿಎಲ್‌ನ ಸ್ನೇಹಿತರಿಗೆ ಗೊತ್ತಿರದೇ ಇರಬಹುದು. ಎಸ್‌ಐಆರ್ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲಿಯೂ ಸಿಐಸಿಎಲ್‌ನ ಖಾಸಗಿತನ ಮತ್ತು ಗೋಪ್ಯತೆಯನ್ನು ಕಾಪಾಡುವುದು ಬಹಳ ಮುಖ್ಯ

8. **ಕಾರ್ಯಕರ್ತರಿಗೆ ತಮ್ಮದೇ ಮಾನಸಿಕ ಯೋಗಕ್ಷೇಮಕ್ಕಾಗಿ ಮಾನಸಿಕ ಆರೋಗ್ಯ ತಜ್ಞರ ಸೇವೆಯನ್ನು ಪಡೆಯುವ ಅವಕಾಶ ಇರುತ್ತದೆಯೇ?**

- ಕಾರ್ಯಕರ್ತರು ತಮ್ಮ ಸ್ವಂತ ಮಾನಸಿಕ ಆರೋಗ್ಯಕ್ಕಾಗಿ ಮಾನಸಿಕ ಆರೋಗ್ಯ ಸೇವೆಗಳನ್ನು ಪಡೆಯುವ ಕುರಿತು ಕಾನೂನಾತ್ಮಕ ಅವಕಾಶಗಳು ಲಭ್ಯವಿರುವುದಿಲ್ಲ. ಆದರೆ, ಕಾರ್ಯಕರ್ತರು ತಮ್ಮ ಮಾನಸಿಕ ಒತ್ತಡದ ಸಮಯದಲ್ಲಿ ಸೂಕ್ತ ತಜ್ಞರ ಸಲಹೆಯನ್ನು ಪಡೆದುಕೊಳ್ಳುವುದು ಮುಖ್ಯ.
- ಇಂಥ ಪ್ರಕರಣದಲ್ಲಿ ಒಂದು ಮಗುವಿನೊಂದಿಗೆ ಒಡನಾಡುವುದು, ಮಾತಾಡುವುದು ಮತ್ತು ಸಂಗ್ರಹಿಸಿದ ಸಂಗತಿಗಳನ್ನು ವಿಶ್ಲೇಷಿಸುವುದು ಕಾರ್ಯಕರ್ತರ ಮೇಲೆಯೂ ಪರಿಣಾಮವನ್ನು ಬೀರಬಹುದು. ಆದ್ದರಿಂದ, ಜೆಜೆ ವ್ಯವಸ್ಥೆಯೊಂದಿಗೆ ತೊಡಗಿಸಿಕೊಂಡಿರುವ ಸಂಸ್ಥೆಗಳು, ಮತ್ತು ಪ್ರೊಬೇಷನ್ ಅಧಿಕಾರಿ ಕಾಲಕಾಲಕ್ಕೆ ತಜ್ಞ ಮಾನಸಿಕ ಆರೋಗ್ಯದ ಕುರಿತು ಸಲಹೆಗಳನ್ನು ಪಡೆಯುವುದು ಒಳ್ಳೆಯದು.

9. **ಒಂದು ಪರಿಣಾಮಕಾರಿ ಎಸ್‌ಐಆರ್‌ನ್ನು ತಯಾರಿಸಲು ಸಾಧ್ಯವಾಗುವಂತೆ ಒಬ್ಬ ಕಾರ್ಯಕರ್ತರು ಯಾವ ಬಗೆಯ ಕಾರ್ಯಶಿಬಿರದಲ್ಲಿ ಭಾಗವಹಿಸಬಹುದು?**

ಒಂದು ಪರಿಣಾಮಕಾರಿಯಾದ ಎಸ್‌ಐಆರ್‌ನ್ನು ಬರೆಯಲು ಒಬ್ಬ ಕಾರ್ಯಕರ್ತರಿಗೆ ಇರಬೇಕಾದ ಕೌಶಲಗಳಲ್ಲಿ ಮುಖ್ಯವಾದವು ಎಂದರೆ, ಸೂಕ್ಷ್ಮ ಅವಲೋಕನ, ಮಗುವಿನ ವರ್ತನೆಯನ್ನು ಅರ್ಥ ಮಾಡಿಕೊಳ್ಳುವುದು, ಮಗುವಿನೊಂದಿಗೆ ಸಮಾನುಭೂತಿ ಯನ್ನು ತೋರುವುದು, ಮತ್ತು ವಿಶ್ಲೇಷಣಾತ್ಮಕ ಆಲೋಚನೆ.

ಎಸ್‌ಐಆರ್‌ನ್ನು ನಡೆಸುವ ಪ್ರಕ್ರಿಯೆಯ ಪ್ರಯೋಜನ ಮತ್ತು ಸಮರ್ಥತೆಯನ್ನು ಸುಧಾರಿಸಲು, ಕಾರ್ಯಕರ್ತರು ಆರು ಅಥವಾ ಮೂರು ತಿಂಗಳಿಗೊಮ್ಮೆ ಪುನರ್ಮನನ ಕಾರ್ಯಶಿಬಿರಗಳಲ್ಲಿ ಭಾಗವಹಿಸಬೇಕು. ಈ ಕಾರ್ಯಶಿಬಿರಗಳಲ್ಲಿ ಕೆಳಗಿನವು ಒಳಗೊಳ್ಳಬಹುದು:

- ಸಾಮಾಜಿಕ ತನಿಖೆಯಲ್ಲಿ ಅನುಸರಿಸಬೇಕಾದ ವಾಡಿಕೆಗಳು ಮತ್ತು ವಿಧಾನಗಳ ಕುರಿತು ಕಾರ್ಯಕರ್ತರಲ್ಲಿ ಈಗಿರುವ ಅರಿವನ್ನು ಬಲಪಡಿಸಲು ಗೋಷ್ಠಿಗಳು.
- ಮನಸ್ಸಿನಲ್ಲಿಯೇ ಟಿಪ್ಪಣಿ ಮಾಡಿಕೊಳ್ಳುವ ಅಭ್ಯಾಸದ



ಗೋಷ್ಠಿಗಳು.

- ಸಿಐಸಿಎಲ್‌ನ ಪ್ರಕರಣಗಳನ್ನು ವಿಶ್ಲೇಷಿಸುವುದು ಹೇಗೆ, ಒಬ್ಬ ಸಿಐಸಿಎಲ್‌ನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಉಪಯುಕ್ತವಾದ ಮನೋವೈಜ್ಞಾನಿಕ ದೃಷ್ಟಿಕೋನ– ಇವುಗಳನ್ನು ಒಳಗೊಂಡ ಅಭ್ಯಾಸದ ಗೋಷ್ಠಿಗಳು.
- ಒಂದಕ್ಕಿಂತ ಹಲವು ಎಸಿಇಗಳಿರುವ ಮಕ್ಕಳೊಂದಿಗೆ ಮಾತುಕತೆಯಾಡುವಾಗ ಬಳಕೆಯಾಗುವ ಕೌಶಲಗಳ ಕುರಿತು ಅಭ್ಯಾಸದ ಗೋಷ್ಠಿಗಳು.
- ಕಾರ್ಯಕರ್ತರ ಬರವಣಿಗೆಯ ಕೌಶಲವನ್ನು ಸುಧಾರಿಸುವ ಕುರಿತು ಅಭ್ಯಾಸದ ಗೋಷ್ಠಿಗಳು.
- ಕಾರ್ಯಕರ್ತರ ಸ್ವ–ಆರೈಕೆ ಮತ್ತು ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮವನ್ನು ಪ್ರೇರೇಪಿಸುವ ಕುರಿತ ಗೋಷ್ಠಿಗಳು.
- ಜೆಜೆ ಕಾಯ್ದೆಯ ಒಟ್ಟಾರೆ ಪರಿಚಯ, ಮತ್ತು ಇತ್ತೀಚೆಗೆ ಆಗಿರಬಹುದಾದ ಬದಲಾವಣೆ/ತಿದ್ದುಪಡಿಗಳ ಅರಿವು ನೀಡುವಂಥ ಗೋಷ್ಠಿಗಳು.

**10. ಎಸ್‌ಐಆರ್ ಸಂದರ್ಶನದ ವೇಳೆಯಲ್ಲಿ ಮಗುವಿನ ಕುಟುಂಬದವರು ಕಾನೂನು ಸಲಹೆಗಾಗಿ ಕೇಳಿದರೆ ಏನು ಮಾಡುವುದು?**

ಹೆಚ್ಚಿನ ಸಲ ಕುಟುಂಬದವರು ಕಾರ್ಯಕರ್ತರಿಂದ ಭರವಸೆ ಮತ್ತು ಸಹಾಯಕ್ಕಾಗಿ ಎದುರುನೋಡುತ್ತಾರೆ. ಕಾರ್ಯಕರ್ತರಿಗೆ ತಾವು ನಿಭಾಯಿಸುತ್ತಿರುವ ಪ್ರಕರಣದ ಕುರಿತು ಪೂರ್ಣ ಮಾಹಿತಿ ಇರಬೇಕು ಮತ್ತು ಜೆಜೆ ವ್ಯವಸ್ಥೆಯ ಕ್ರಮಗಳ ಕುರಿತು ಮೂಲಭೂತವಾದ ಜ್ಞಾನವಿರಬೇಕು. ಇದರಿಂದಾಗಿ ಅವರಿಗೆ ಕುಟುಂಬದವರಿಗೆ ನ್ಯಾಯಿಕ ವ್ಯವಸ್ಥೆಯ ಪರಿಚಯವನ್ನು ಮಾಡಿಸುವುದಕ್ಕಾಗಿ, ಸಾಮಾನ್ಯ ಕಾನೂನು ಅರಿವನ್ನು ನೀಡುವುದಕ್ಕಾಗಿ ಕಾರ್ಯಕರ್ತರಿಗೆ ಸಹಾಯಕವಾಗುತ್ತದೆ.

- ಆದರೆ, ಕಾರ್ಯಕರ್ತರು ತಮ್ಮ ಕಾರ್ಯವ್ಯಾಪ್ತಿಗಿಂತ ಆಚೆ ಇರುವ ವಿಚಾರಗಳ ಕುರಿತು ಕಾನೂನು ಸಲಹೆಗಳನ್ನು ಕೊಡುವುದರಿಂದ ದೂರವಿರಬೇಕು. ಉದಾಹರಣೆಗೆ, 'ನಿಮ್ಮ ಮಗುವಿಗೆ ಜಾಮೀನು ಸಿಗುವುದಿಲ್ಲ' ಎನ್ನುವುದು ಕಾರ್ಯಕರ್ತರ ವೃತ್ತಿವ್ಯಾಪ್ತಿಯ ಹೊರಗಿನ ವಿಚಾರ, ಅದನ್ನು ಅವರು ಕುಟುಂಬದೊಂದಿಗೆ ಹೇಳಬಾರದು. ಕಾರ್ಯಕರ್ತರು ಕುಟುಂಬಕ್ಕೆ ಹುಸಿ ಭರವಸೆಗಳನ್ನು ನೀಡುವುದನ್ನು ಅಥವಾ ಪ್ರಕರಣವನ್ನು ಕ್ಷುಲ್ಲಕಗೊಳಿಸುವುದನ್ನು ನಿವಾರಿಸಬೇಕು. ಕಾನೂನಿಗೆ ಸಂಬಂಧಿಸಿದ ವಿಚಾರಗಳ ಕುರಿತು, ಮಗುವಿನ ಪ್ರಕರಣವನ್ನು ಪ್ರತಿನಿಧಿಸುತ್ತಿರುವ ವಕೀಲರು ಅಥವಾ ನೇರವಾಗಿ ಜೆಜೆಬಿ ಎದುರು ತಾವು ಹಾಜರಾದಾಗ ಅವರನ್ನೇ ಕೇಳಿ ತಿಳಿದುಕೊಳ್ಳಿ ಎಂದು ಉತ್ತೇಜಿಸಬೇಕು

**11. ಕಾರ್ಯಕರ್ತರು ಗಮನದಲ್ಲಿರಿಸಿಕೊಳ್ಳಬೇಕಾದ ನೈತಿಕ ಅಂಶಗಳು ಯಾವುದು?**

- ಎಸ್‌ಐಆರ್ ಪ್ರಕ್ರಿಯೆಯ ಅವಧಿಯಲ್ಲಿ ಮಗು/ಕುಟುಂಬ ತಮ್ಮೊಂದಿಗೆ ಹಂಚಿಕೊಂಡ ಮಾಹಿತಿಯ **ಗೋಪ್ಯತೆ ಮತ್ತು ಖಾಸಗಿತನವನ್ನು ಕಾರ್ಯಕರ್ತರು ಕಾಪಾಡಿಕೊಳ್ಳಬೇಕು.** ಅದನ್ನು ಅನುಸರಿಸಿ ತಯಾರಿಸಲಾಗುವ ವರದಿಯೂ ಗೋಪ್ಯ ದಾಖಲೆಯಾಗಿರುತ್ತದೆ. ಆದ್ದರಿಂದ, ಎಸ್‌ಐಆರ್‌ನಲ್ಲಿರುವ ಯಾವುದೇ ಮಾಹಿತಿಯನ್ನು ಕಾರ್ಯಕರ್ತರು ಬೇರೆ ಯಾರ ಜೊತೆಯಲ್ಲಿಯೂ ಹಂಚಿಕೊಳ್ಳಬಾರದು.
- ಯಾವುದೇ ಮಗು/ಕುಟುಂಬದ ಜೊತೆಯಲ್ಲಾಗಲೀ, ಅಥವಾ ಅದರ ಆರೋಪಿತ ಪ್ರಕರಣದಲ್ಲಾಗಲೀ ಕಾರ್ಯಕರ್ತರು ಯಾವುದೇ ಸ್ಥಾಪಿತ ಹಿತಾಸಕ್ತಿಯನ್ನಾಗಲೀ, ಹಿತಾಸಕ್ತಿಯ ಸಂಘರ್ಷವನ್ನಾಗಲೀ ಹೊಂದಿರಬಾರದು. ಎಂದರೆ, ಪ್ರಕರಣದಲ್ಲಿ ಒಳಗೊಂಡ ಯಾವುದೇ ಒಂದು ಸಂಸ್ಥೆಯ ಭಾಗವಾಗಿದ್ದಲ್ಲಿ ಅಥವಾ ಅದನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿಯಾಗಿದ್ದಲ್ಲಿ ಎಸ್‌ಐಆರ್‌ನ್ನು ನಡೆಸುವ ಪ್ರಕ್ರಿಯೆಯಿಂದ ದೂರವಿರಬೇಕು. ಇದಕ್ಕೆ ಕಾರಣ, ಒಬ್ಬರು ತಯಾರಿಸುವ ಅಂತಿಮ ಎಸ್‌ಐಆರ್ ಎಷ್ಟೇ ಪರಿಣಾಮಕಾರಿಯಾಗಿರಲಿ, ಅದು ಸ್ಥಾಪಿತ ಹಿತಾಸಕ್ತಿ/ಹಿತಾಸಕ್ತಿಯ ಸಂಘರ್ಷದ ಕಾರಣಕ್ಕಾಗಿ ವಿಶ್ವಾಸಾರ್ಹವಾಗಿರುವುದಿಲ್ಲ.



12. **ಮನಸ್ಸಿನಲ್ಲಿ ಇರಿಸಿಕೊಳ್ಳಬೇಕಾದ ಬೇರೆ ವೃತ್ತಿ ಪರಿಗಣನೆಗಳು ಯಾವುವು?**

- ಕಾರ್ಯಕರ್ತರು ಎಸ್‌ಐಆರ್ ಪ್ರಕ್ರಿಯೆಯ ವೇಳೆಯಲ್ಲಿ ಕುಟುಂಬದ ಕುರಿತು ಅನಗತ್ಯ ಸಲಹೆಗಳು ಅಥವಾ ಟಿಪ್ಪಣಿಗಳನ್ನು ಮಾಡಬಾರದು ಎನ್ನುವುದನ್ನು ಮನಸ್ಸಿನಲ್ಲಿರಿಸಿಕೊಳ್ಳಬೇಕು. ಉದಾಹರಣೆಗೆ, ಎಸ್‌ಐಆರ್ ಸಿದ್ಧತೆಯ ಅವಧಿಯಲ್ಲಿ ಕುಟುಂಬಕ್ಕೆ ಭೇಟಿ ನೀಡುವಾಗ, ಮತ್ತು ಕುಟುಂಬದ ಸದಸ್ಯರನ್ನು ಅವಲೋಕಿಸುತ್ತಿರುವಾಗ, ಅವರೊಂದಿಗೆ ಆತ್ಮೀಯವಾದ ಸಂಬಂಧದಲ್ಲಿ ತೊಡಗಬಾರದು. ಹಾಗೆಯೇ ಕುಟುಂಬಕ್ಕೆ, 'ತಂದೆತಾಯಂದಿರು ಅಷ್ಟೊಂದು ಜಗಳಾಡಿಕೊಳ್ಳಬಾರದು, ಅದು ಮಗುವಿನ ಮೇಲೆ ಪ್ರಭಾವ ಬೀರುತ್ತದೆ,' ಎನ್ನುವ ರೀತಿಯ ಅಭಿಪ್ರಾಯಗಳನ್ನು ನೀಡಬಾರದು ಅಥವಾ ಟಿಪ್ಪಣಿಗಳನ್ನು ಮಾಡಬಾರದು.
- ಅದೇ ರೀತಿ, ಕುಟುಂಬವು ಎದುರಿಸುತ್ತಿರುವ ಸನ್ನಿವೇಶ ಅಥವಾ ಪರಿಸರದ ಕುರಿತು ಕಾರ್ಯಕರ್ತರು ಕಾಳಜಿ ವಹಿಸಬೇಕು. ಉದಾಹರಣೆಗೆ, ಕುಟುಂಬವು ಹತ್ತಿರದ ಸದಸ್ಯರೊಬ್ಬರನ್ನು ಕಳೆದುಕೊಂಡ ದುಃಖದಲ್ಲಿದ್ದರೆ, ಮಾನಸಿಕ ಸಾಂತ್ವನವನ್ನು ನೀಡುವ ಕುರಿತು ವೃತ್ತಿ ಸಾಮರ್ಥ್ಯ ಇರದ ಹೊರತು, ಎಸ್‌ಐಆರ್ ವೇಳೆಯಲ್ಲಿ ಆ ಕುರಿತು ವಿಚಾರಿಸಬಾರದು.



## ಅನುಬಂಧ

**ಒಂದು ಮಾದರಿ ಎಸ್‌ಐಆರ್**

ಕೆಳಗಿನ ಒಂದು ಮಾದರಿ ಎಸ್‌ಐಆರ್‌ನ್ನು ಕಾರ್ಯಕರ್ತರ ಮಾಹಿತಿಗಾಗಿ ಸೃಷ್ಟಿಸಲಾಗಿದೆ. (ಇದನ್ನು ಕೇವಲ ಒಂದು ಮಾದರಿಯನ್ನಾಗಿ ಸೃಷ್ಟಿಸಲಾಗಿದೆ ಮತ್ತು ಇಲ್ಲಿ ನಮೂದಿಸಲಾಗಿರುವ, ಸಿಐಸಿಎಲ್ ಹೆಸರು, ಆಪಾದನೆಗಳು, ಪೊಲೀಸ್ ಸ್ಟೇಷನ್, ಒಎಚ್ ಎಲ್ಲವೂ ಕಾಲ್ಪನಿಕ ಎಂಬುದನ್ನು ಗಮನಿಸಬೇಕು).

ಆಸಿಫ್, ಒಬ್ಬ ಸಮಾಜ ಕಾರ್ಯಕರ್ತರು, ನಮನ್ ಎನ್ನುವ ಸಿಐಸಿಎಲ್‌ಗಾಗಿ ಈ ಎಸ್‌ಐಆರ್‌ನ್ನು ಸಿದ್ಧಗೊಳಿಸಿದ್ದಾರೆ. ಬನ್ನಿ, ನಮನ್ ಎಸ್‌ಐಆರ್ ಹೇಗೆ ಇರುತ್ತದೆ ಎಂಬುದನ್ನು ಗಮನಿಸೋಣ.

**ನಮೂನೆ 6**

[ನಿಯಮ 10(9), 11(2), 59(3)(ಎ)]

**ಸಾಮಾಜಿಕ ತನಿಖಾ ವರದಿ (ಎಸ್ಐಆರ್)**

**ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗಾಗಿ**

ಕ್ರಮ ಸಂಖ್ಯೆ: *20*

ಮಕ್ಕಳ ನ್ಯಾಯ ಮಂಡಳಿಗೆ ಸಲ್ಲಿಸಲಾಗಿದೆ (ವಿಳಾಸ): *ಬಾಲಕರ ವೀಕ್ಷಣಾಲಯ, ಮಡಿವಾಳ, ಬೆಂಗಳೂರು*

ಪ್ರೊಬೇಷನ್ ಅಧಿಕಾರಿ/ಸ್ವಯಂ ಸೇವಾ ಸಂಸ್ಥೆ/ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ(ಹೆಸರು): *ಆಸಿಫ಼್ (ಸಮಾಜ ಕಾರ್ಯಕರ್ತರು, ಚೈಲ್ಡ್ ಕೇರ್ ಎನ್‌ಜಿಒ)*

ಎಫ್.ಐ.ಆರ್ ಸಂಖ್ಯೆ: *ಡಿಡಿ ನಂ. 30*

ಯಾವ ಕಲಂಗಳ ಅಡಿಯಲ್ಲಿ: *307 ಬಿಎನ್‌ಎಸ್*

ಪೊಲೀಸ್ ಠಾಣೆ: *ಪುಲಕೇಶಿ ನಗರ*

ಆಪಾದಿಸಲಾದ ದೂರಿನ ಸ್ವರೂಪ: *ಗಂಭೀರ*

1. ಹೆಸರು: *ನಮನ್*
2. ವಯಸ್ಸು/ದಿನಾಂಕ/ಹುಟ್ಟಿದ ವರ್ಷ: *16 ವರ್ಷ*
3. ಲಿಂಗ: *ಗಂಡು*
4. ಜಾತಿ: *ಮಾದಿಗ*
5. ಧರ್ಮ: *ಹಿಂದು*
6. ತಂದೆಯ ಹೆಸರು: *ಅನ್ಬುರಾಜ್*
7. ತಾಯಿಯ ಹೆಸರು: *ಕಾಮಾಕ್ಷಿ*
8. ಪೋಷಕರ ಹೆಸರು: *ಅನ್ವಯವಾಗುವುದಿಲ್ಲ*
9. ಖಾಯಂ ವಿಳಾಸ: *7ನೇ ಅಡ್ಡ ರಸ್ತೆ, ರಾಜೇಂದ್ರ ನಗರ,*
10. ವಿಳಾಸದ ಹೆಗ್ಗುರುತು): *ಚೌಡೇಶ್ವರಿ ದೇವಸ್ಥಾನದ ಹತ್ತಿರ, ಮುಖ್ಯ ರಸ್ತೆಯ ಬಳಿ, ಅಂಬೇಡ್ಕರ್ ಮೂರ್ತಿಯ ಪಕ್ಕ*
11. ಕೊನೆಯ ವಾಸ್ತವ್ಯದ ವಿಳಾಸ: *ಅನ್ವಯವಾಗುವುದಿಲ್ಲ*
12. ತಂದೆಯ/ತಾಯಿಯ/ಕುಟುಂಬದ ಸದಸ್ಯರ ಸಂಪರ್ಕ ಸಂಖ್ಯೆ: *ಅನ್ವಯವಾಗುವುದಿಲ್ಲ*
13. ಮಗುವು ವಿಭಿನ್ನ ಸಾಮರ್ಥ್ಯವುಳ್ಳ ಮಗುವೇ: *ಅನ್ವಯವಾಗುವುದಿಲ್ಲ*
    - (i) ಶ್ರವಣದೋಷ
    - (ii) ಮಾತಿನ ದೋಷ
    - (iii) ದೈಹಿಕವಾಗಿ ಅಸಮರ್ಥರು
    - (iv) ಮಾನಸಿಕವಾಗಿ ಅಸಮರ್ಥರು
    - (v) ಇತರೆ (ದಯವಿಟ್ಟು ನಿರ್ದಿಷ್ಟವಾಗಿ ಬರೆಯಿರಿ)

14. **ಕುಟುಂಬದ ವಿವರ:**

| ಕ್ರ. ಸಂ (1) | ಹೆಸರು ಮತ್ತು ಸಂಬಂಧ (2) | ವಂಯಸ್ಸ (3) | ಲಿಂಗ (4) | ಶಿಕ್ಷಣ (5) | ಉದ್ಯೋಗ (6) | ಆದಾಯ (7) | ಆರೋಗ್ಯದ ಸ್ಥಿತಿ (8) | ಮಾನಸಿಕ ಅಸ್ವಸ್ಥತೆಯ ಇತಿಹಾಸ (ಇದ್ದರೆ) (9) | ಚಟಗಳು (ಇದ್ದರೆ) (10) |
|---|---|---|---|---|---|---|---|---|---|
| 1 | *ಅನ್ಬುರಾಜ್ (ತಂದೆ)* | *45* | *ಗಂಡು* | *ಔಪಚಾರಿಕ ಶಿಕ್ಷಣ ಇಲ್ಲ* | – | – | *ದೈಹಿಕ ಅಸಾಮರ್ಥ್ಯ, ಅವರ ಕಾಲುಗಳು ಒಂದು ಅಪಘಾತದಲ್ಲಿ ಕತ್ತರಿಸಿವೆ* | – | *ಮದ್ಯಪಾನ ಮತ್ತು ಧೂಮಪಾನ* |

| | | | | | | | | | |
|---|---|---|---|---|---|---|---|---|---|
| 2 | ಕಮಾಕ್ಷಿ (ತಾಯಿ) | 38 | ಹೆಣ್ಣು | ಔಪಚಾರಿಕ ಶಿಕ್ಷಣ ಇಲ್ಲ | – | – | – | – | – |
| 3 | ಗೋಕುಲ್ (ಮಲ ಅಣ್ಣ) | 22 | ಗಂಡು | ಔಪಚಾರಿಕ ಶಿಕ್ಷಣ ಇಲ್ಲ | – | – | – | – | ಮದ್ಯಪಾನ ಮತ್ತು ಧೂಮಪಾನ |
| 4 | ರಾಜೀವ್ (ಮಲ ಅಣ್ಣ) | 21 | ಗಂಡು | ಔಪಚಾರಿಕ ಶಿಕ್ಷಣ ಇಲ್ಲ | – | – | – | – | ಮದ್ಯಪಾನ ಮತ್ತು ಧೂಮಪಾನ |
| 5 | ಪ್ರೇಮ (ಅತ್ತಿಗೆ) | 20 | ಹೆಣ್ಣು | 12ನೇ ತರಗತಿ | – | – | – | – | – |
| 6 | ಅರುಣ್ (ತಮ್ಮ) | 12 | ಗಂಡು | 6ನೇ ತರಗತಿ | – | – | – | – | – |

15. ಒಂದು ವೇಳೆ ಮಗು ಅಥವಾ ವ್ಯಕ್ತಿಯು ಮದುವೆಯಾಗಿದ್ದಲ್ಲಿ, ಸಂಗಾತಿಯ ಮತ್ತು ಮಕ್ಕಳ ಹೆಸರು ವಯಸ್ಸು ಮತ್ತು ವಿವರಗಳು: *ಇಲ್ಲ, ಮಗುವಿಗೆ ಮದುವೆ ಆಗಿಲ್ಲ*

16. ಕುಟುಂಬದ ಸದಸ್ಯರ ನಡುವಿನ ಸಂಬಂಧ:

| | |
|---|---|
| 1. ತಂದೆ ಮತ್ತು ತಾಯಿ | ಆತ್ಮೀಯ/ *[ಆತ್ಮೀಯವಲ್ಲದ ✓]* /ತಿಳಿದಿಲ್ಲ<br>*ತಂದೆ ತಾಯಿ ಪ್ರತ್ಯೇಕವಾಗಿದ್ದಾರೆ. ತಂದೆ ಮನೆಗೆ ಕುಡಿದು ಬಂದು ತಾಯಿಯ ಮೇಲೆ ಕೂಗಾಡುತ್ತಾರೆ.* |
| 2. ತಂದೆ ಮತ್ತು ಮಗು | *[ಆತ್ಮೀಯ ✓]* /ಆತ್ಮೀಯವಲ್ಲದ/ತಿಳಿದಿಲ್ಲ<br>*ಮಗು ತನ್ನ ತಂದೆಯೊಂದಿಗೆ ಆತ್ಮೀಯವಾಗಿದೆ. ಮಗು ತಂದೆಯನ್ನು ಗಾಲಿ ಕುರ್ಚಿಯಲ್ಲಿ ಅಗತ್ಯವಿದ್ದಲ್ಲಿ ಕರೆದುಕೊಂಡು ಹೋಗುತ್ತದೆ.* |
| 3. ತಾಯಿ ಮತ್ತು ಮಗು | *[ಆತ್ಮೀಯ ✓]* /ಆತ್ಮೀಯವಲ್ಲದ/ತಿಳಿದಿಲ್ಲ<br>*ಮಗು ತಾಯಿಯ ಜೊತೆಯಲ್ಲಿಯೇ ಆತ್ಮೀಯವಾಗಿ. ಮಗು ಆಕೆಯನ್ನು ಪ್ರೀತಿಸುತ್ತದೆ, ಚೆನ್ನಾಗಿ ನೋಡಿಕೊಳ್ಳುತ್ತದೆ.* |
| 4. ತಂದೆ ಮತ್ತು ಒಡಹುಟ್ಟಿದವರು | ಆತ್ಮೀಯ/*[ಆತ್ಮೀಯವಲ್ಲದ ✓]* /ತಿಳಿದಿಲ್ಲ<br>*ತಂದೆ ಚಿಕ್ಕ ಮಗನ ಜೊತೆ ಆತ್ಮೀಯವಾಗಿದ್ದಾರೆ, ಆದರೆ ದೊಡ್ಡ ಮಕ್ಕಳ ಜೊತೆ ಯಾವಾಗಲೂ ಜಗಳವಾಡುತ್ತಿರುತ್ತಾರೆ, ಏಕೆಂದರೆ, ಅವರು ಆತನಿಗೆ ಮಲ ಮಕ್ಕಳು.* |
| 5. ತಾಯಿ ಮತ್ತು ಒಡಹುಟ್ಟಿದವರು | *[ಆತ್ಮೀಯ ✓]* /ಆತ್ಮೀಯವಲ್ಲದ/ತಿಳಿದಿಲ್ಲ<br>*ತಾಯಿ ಮಗುವಿನ ಒಡಹುಟ್ಟಿದವರ ಜೊತೆಯಲ್ಲಿ ಒಳ್ಳೆಯ ಸಂಬಂಧವನ್ನು ಹೊಂದಿದ್ದಾರೆ. ತನ್ನ ಸೊಸೆಯನ್ನೂ, ಒಳಗೊಂಡ ಹಾಗೆ ಆಕೆ ಎಲ್ಲಾ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ.* |
| 6. ಮಗು ಮತ್ತು ಒಡಹುಟ್ಟಿದವರು | *[ಆತ್ಮೀಯ ✓]* /ಆತ್ಮೀಯವಲ್ಲದ/ತಿಳಿದಿಲ್ಲ<br>*ಮಗುವಿಗೆ ತನ್ನ ಚಿಕ್ಕ ತಮ್ಮನ ಕುರಿತು ಬಹಳ ಪ್ರೀತಿ* |
| 7. ಮಗು ಮತ್ತು ಅಜ್ಜಿ ಅಜ್ಜಂದಿರು (ತಂದೆ ಮತ್ತು ತಾಯಿಯ ಪೋಷಕರು) | ಆತ್ಮೀಯ/ಆತ್ಮೀಯವಲ್ಲದ/ *[ತಿಳಿದಿಲ್ಲ✓]* |

**17. ಕುಟುಂಬದ ಸದಸ್ಯರು ಅಪರಾಧಿಕ ಕೃತ್ಯಗಳಲ್ಲಿ ಭಾಗಿಯಾದ ಹಿನ್ನೆಲೆ, ಯಾವುದಾದರೂ ಇದ್ದಲ್ಲಿ:**

| ಕ್ರ ಸಂ | ಸಂಬಂಧ | ಅಪರಾಧದ ಸ್ವರೂಪ | ಪ್ರಕರಣದ ಕಾನೂನು ಸ್ಥಿತಿ | ಬಂಧಿಸಲಾಗಿತ್ತೇ | ಸೆರೆವಾಸದ ಅವಧಿ | ವಿಧಿಸಲಾದ ಶಿಕ್ಷೆ |
|---|---|---|---|---|---|---|
| 1 | ತಂದೆ | ಗಂಭೀರ | ಗೊತ್ತಿಲ್ಲ | ಇಲ್ಲ | ಎನ್‌ಎ | ಎನ್‌ಎ |
| 2 | ಮಲತಂದೆ | ಘೋರ (ಸ್ಥಳೀಯ ಗ್ಯಾಂಗಿನಿಂದ ಹತ್ಯೆ) | ಗೊತ್ತಿಲ್ಲ | ಗೊತ್ತಿಲ್ಲ | ಗೊತ್ತಿಲ್ಲ | ಗೊತ್ತಿಲ್ಲ |
| 3 | ತಾಯಿ | ಇಲ್ಲ | – | – | – | – |
| 4 | ಮಲತಾಯಿ | ಎನ್‌ಎ | – | – | – | – |
| 5 | ಸಹೋದರ | ಗಂಭೀರ | ಗೊತ್ತಿಲ್ಲ | ಹೌದು (ಪ್ರಸ್ತುತ ಜಾಮೀನಿನ ಮೇಲೆ) | – | – |
| 6 | ಸಹೋದರಿಯರು | ಇಲ್ಲ | – | – | – | – |
| 7 | ಇತರೆ (ಅಂಕಲ್/ಆಂಟಿ/ಅಜ್ಜ/ಅಜ್ಜಿ) | ಇಲ್ಲ | – | – | – | – |

18. ಮಗು ಮತ್ತು ಕುಟುಂಬದವರಿಗೆ ಧರ್ಮದ ಕುರಿತು ಇರುವ ಮನೋಭಾವ: *ಮಗು ತನ್ನ ತಾಯಿಯ ಜೊತೆ ಆಗಾಗ ದೇವಸ್ಥಾನಕ್ಕೆ ಹೋಗುತ್ತದೆ.*

19. ಪ್ರಸ್ತುತ ವಾಸ್ತವ್ಯದ ಸ್ಥಿತಿ: *ಸಿಮೆಂಟಿನಿಂದಾದ, ಆದರೆ ಬಣ್ಣ ಮಾಡಿಲ್ಲದ, ಪೀಠೋಪಕರಣಗಳಿಲ್ಲ, 1 ಬಿಎಚ್‌ಕೆ ಮನೆಯಲ್ಲಿ ವಾಸ. ತುಕ್ಕು ಹಿಡಿದ ಟಿನ್ ಶೀಟುಗಳ ಮತ್ತು ಹರಿದ ಟಾರ್ಪೊಲಿನ್ ಪ್ಯಾಚ್‌ವರ್ಕ್ ಮಾಡಿದ ಛಾವಣಿ. ಇರುವ ಒಂದೇ ರೂಮು ವಾಸ ಮತ್ತು ಮಲಗುವ ಏರಿಯಾ.*

20. ಪ್ರಾಮುಖ್ಯತೆಯ ಇತರ ಅಂಶಗಳು, ಇದ್ದಲ್ಲಿ: *ನಮನ್ ಅಪರಾಧಿಕ ಚಟುವಟಿಕೆಗಳಿಗೆ ಕುಖ್ಯಾತವಾದ ಸ್ಲಮ್‌ನಲ್ಲಿ ವಾಸಿಸುತ್ತಾನೆ. ನಮನ್ ಸ್ನೇಹಿತರು ಅವನಿಗಿಂತ ದೊಡ್ಡವರು, ಈಗಾಗಲೇ ಬಡತನದಿಂದ ಬಳಲಿರುವ ನಮನ್‌ನನ್ನು ಅವರು ಬಾಲಾಪರಾಧಿ ವರ್ತನೆಗೆ ಬಲಿಯಾಗುವಂತೆ ಪ್ರಭಾವಿಸಬಲ್ಲರು.*

21. (i) ಮಗುವಿನ ಅಭ್ಯಾಸಗಳು (ಇರುವುವನ್ನು ಟಿಕ್ ಮಾಡಿ)

| ಎ | ಬಿ |
|---|---|
| (ಎ) ಧೂಮಪಾನ✓: *ಸಹವರ್ತಿಗಳೊಂದಿಗೆ ಆಗಾಗ* | (ಜಿ) ಟಿವಿ/ಸಿನಿಮಾ ನೋಡುವುದು |
| (ಬಿ) ಮದ್ಯಪಾನ ✓: *ಆಗಾಗ* | (ಎಚ್) ಒಳಾಂಗಣ/ಹೊರಾಂಗಣ ಆಟ✓: *ಆಡಲು ಇಷ್ಟ* |
| (ಸಿ) ಮಾದಕ ದ್ರವ್ಯ ಸೇವನೆ (ನಿರ್ದಿಷ್ಟವಾಗಿ) | (ಐ) ಪುಸ್ತಕ ಓದುವುದು |
| (ಡಿ) ಜೂಜಾಟ | (ಜೆ) ಧಾರ್ಮಿಕ ಚಟುವಟಿಕೆ |
| (ಇ) ಭಿಕ್ಷೆ ಬೇಡುವುದು✓: *ತನ್ನ ತಮ್ಮನನ್ನು ಸಾಕಲು ನಮನ್ ತನ್ನ ತಂದೆಯೊದಿಗೆ ಹೆಚ್ಚಿನ ದಿನಗಳು ಭಿಕ್ಷೆಗೆ ಹೋಗುತ್ತಾನೆ.* | (ಕೆ) ಡ್ರಾಯಿಂಗ್/ಪೇಂಟಿಂಗ್/ಅಭಿನಯ/ಹಾಡುವುದು |
| (ಎಫ್) ಇತರೆ (ನಿರ್ದಿಷ್ಟವಾಗಿ) | (ಎಲ್) ಇತರೆ (ನಿರ್ದಿಷ್ಟವಾಗಿ) |

(ii) ಪಠ್ಯೇತರ ಆಸಕ್ತಿಗಳು: *ಎನ್‌ಎ*

(iii) ಅಸಾಧಾರಣ ಗುಣಲಕ್ಷಣಗಳು ಮತ್ತು ವ್ಯಕ್ತಿತ್ವದ ಲಕ್ಷಣಗಳು: *8ನೇ ತರಗತಿವರೆಗೆ ಆತ ಓದಿನಲ್ಲಿ ತುಂಬಾ ಚೆನ್ನಾಗಿದ್ದ.*

22. ಮನೆಯಲ್ಲಿನ ಶಿಸ್ತಿನ ಕುರಿತು ಮಗುವಿನ ಅಭಿಪ್ರಾಯ/ಪ್ರತಿಕ್ರಿಯೆ: *ಮನೆಯಲ್ಲಿ ಶಿಸ್ತಿಗೆ ಒಳಪಡಿಸಲಾಗುತ್ತದೆ ಎಂದು ಮಗುವಿಗೆ ಅನಿಸುವುದಿಲ್ಲ.*

23. ಮಗುವಿನ ಉದ್ಯೋಗದ ವಿವರ, ಇದ್ದರೆ: *ಎನ್‌ಎ*

24. ಆದಾಯದ ಬಳಕೆಯ ವಿವರ ಮತ್ತು ಸ್ವಭಾವ: *ಎನ್‌ಎ*

25. ಕೆಲಸದ ದಾಖಲೆ (ಉದ್ಯೋಗದ ಆಸಕ್ತಿಯನ್ನು ಕೈಬಿಟ್ಟಿದ್ದಕ್ಕೆ ಕಾರಣಗಳು, ಕೆಲಸ ಅಥವಾ ಉದ್ಯೋಗದ ಕುರಿತು ಧೋರಣೆ: *ಎನ್‌ಎ*

26. ಮಗುವಿನ ಶಿಕ್ಷಣದ ವಿವರ:

(i) ಅನಕ್ಷರಸ್ಥ

(ii) 5ನೇ ತರಗತಿವರೆಗೆ ಓದಿದೆ

(iii) 5ನೇ ತರಗತಿವರೆಗೆ ಆದರೆ 8ನೇ ತರಗತಿಗಿಂತ ಕಡಿಮೆ ಓದಿದೆ: *✓ ಹೌದು, 8ನೇ ತರಗತಿವರೆಗೆ ಓದಿದೆ*

(iv) 8ನೇ ತರಗತಿಗಿಂತ ಹೆಚ್ಚು ಆದರೆ 10ನೇ ತರಗತಿಗಿಂತ ಕಡಿಮೆ ಓದಿದೆ

(v) 10ನೇ ತರಗತಿಗಿಂತ ಹೆಚ್ಚು ಓದಿದೆ

27. ಮಗುವಿನ ಕುರಿತು ಸಹಪಾಠಿಗಳ ಧೋರಣೆ: *ಸಹಪಾಠಿಗಳ ಪ್ರಕಾರ ನಮನ್ ಬಹಳ ಶಾಂತ ಸ್ವಭಾವದವನು, ಆದರೆ ಕೆಲವೊಮ್ಮೆ ಆತ ತರಗತಿಯಲ್ಲಿ ಜಗಳ ಕಾಯುತ್ತಿದ್ದ.*

28. ಮಗುವಿನ ಕುರಿತು ಶಿಕ್ಷಕರು ಮತ್ತು ಸಹಪಾಠಿಗಳ ಧೋರಣೆ: *ಶಿಕ್ಷಕರು ಗಮನಿಸಿದ ಹಾಗೆ ನಮನ್ ಯಾವಾಗಲೂ ಖಾಲಿ ಹೊಟ್ಟೆಯಿಂದ ಶಾಲೆಗೆ ಬರುತ್ತಿದ್ದ. ಶಾಲೆಯಲ್ಲಿ ನೀಡಲಾಗುತ್ತಿದ್ದ ಒಂದು ಊಟವೇ ಆತನ ಆ ದಿನದ ಊಟ.*

29. ಶಾಲೆಯನ್ನು ಬಿಟ್ಟಿದ್ದಕ್ಕೆ ಕಾರಣ (ಅನ್ವಯವಾಗುವ ಹಾಗೆ, ಹೌದು/ಇಲ್ಲ ಟಿಕ್ ಮಾಡಿ)

(i) ಕಡೆಯದಾಗಿ ಓದಿದ ತರಗತಿಯಲ್ಲಿ ಅನುತ್ತೀರ್ಣ ಹೌದು/ಇಲ್ಲ

(ii) ಶಾಲಾ ಚಟುವಟಿಕೆಯಲ್ಲಿ ನಿರಾಸಕ್ತಿ: *✓ ಹೌದು* ಹೌದು/ಇಲ್ಲ

(iii) ಶಿಕ್ಷಕರ ಅಸಡ್ಡೆಯ ಮನೋಭಾವ ಹೌದು/ಇಲ್ಲ

(iv) ಸಹವರ್ತಿಗಳ ಪ್ರಭಾವ : *✓ ಹೌದು* ಹೌದು/ಇಲ್ಲ

(v) ದುಡಿದು ಕುಟುಂಬವನ್ನು ಬೆಂಬಲಿಸುವುದು ಹೌದು/ಇಲ್ಲ

(vi) ತಂದೆತಾಯಿಯರ ಹಠಾತ್ ಮರಣ ಹೌದು/ಇಲ್ಲ

(vii) ಶಾಲೆಯಲ್ಲಿ ಆಗುವ ದಬ್ಬಾಳಿಕೆ ಹೌದು/ಇಲ್ಲ

(viii) ಶಾಲೆಯ ಅತಿ ಕಟ್ಟುನಿಟ್ಟಿನ ವಾತಾವರಣ ಹೌದು/ಇಲ್ಲ

(ix) ಮತ್ತೆ ಮತ್ತೆ ಗೈರುಹಾಜರಿ, ಅದರ ನಂತರ ಶಾಲೆಯಿಂದ ಓಡಿಹೋಗುವುದು ಹತ್ತಿರದಲ್ಲಿ ಹೌದು/ಇಲ್ಲ

(x) ಹತ್ತಿರದಲ್ಲಿ ವಯಸ್ಸಿಗೆ ಸರಿಯಾದ ಶಾಲೆಯಿಲ್ಲ ಹೌದು/ಇಲ್ಲ

(xi) ಶಾಲೆಯಲ್ಲಿ ದುರಾಚಾರ ಹೌದು/ಇಲ್ಲ

(xii) ಶಾಲೆಯಲ್ಲಿ ಅಪಹಾಸ್ಯ ಹೌದು/ಇಲ್ಲ

(xiii) ದೈಹಿಕ ಶಿಕ್ಷೆ (ಕಾರ್ಪರಲ್ ಪನಿಷ್‌ಮೆಂಟ್) ಹೌದು/ಇಲ್ಲ

(xiv) ಕಲಿಸುವ ಮಾಧ್ಯಮ

(xv) ಆನ್‌ಲೈನ್ ತರಗತಿಗಳು ಮತ್ತು ಕೋವಿಡ್ 19 ಸಾಂಕ್ರಾಮಿಕ: *✓ ಹೌದು* ಹೌದು/ಇಲ್ಲ

(xvi) ಇತರೆ (ನಿರ್ದಿಷ್ಟವಾಗಿ ಸೂಚಿಸಿ) ಹೌದು/ಇಲ್ಲ

30. ಕೊನೆಯಲ್ಲಿ ಓದಿದ ಶಾಲೆಯ ವಿವರ:

(i) ಕಾರ್ಪೊರೇಷನ್/ಮುನಿಸಿಪಲ್/ಪಂಚಾಯತಿ ಶಾಲೆ

(ii) ಸರಕಾರಿ/ಪ.ಜಾ.ಕಲ್ಯಾಣ ಶಾಲೆ/ ಹಿಂ.ವ. ಕಲ್ಯಾಣ ಶಾಲೆ: *ಹೌದು*

(iii) ಖಾಸಗಿ ಶಾಲೆ

(iv) ಎನ್‌ಸಿಎಲ್‌ಪಿ ಅಡಿಯಲ್ಲಿನ ಶಾಲೆ

31. ವೃತ್ತಿ ತರಬೇತಿ, ಇದ್ದರೆ: – *ಇಲ್ಲ*

32. ಸ್ನೇಹಿತರಲ್ಲಿ ಹೆಚ್ಚಿನವರು...

(i) ಶಿಕ್ಷಿತರು

(ii) ಅನಕ್ಷರಸ್ಥರು: *ಹೌದು*

(iii) ಸಮಾನ ವಯಸ್ಕರು: *ಹೌದು*

(iv) ವಯಸ್ಸಿನಲ್ಲಿ ದೊಡ್ಡವರು: *ಹೌದು*

(v) ವಯಸ್ಸಿನಲ್ಲಿ ಚಿಕ್ಕವರು

(vi) ಸಮಾನ ಲಿಂಗದವರು: *ಹೌದು*

(vii) ವಿರುದ್ಧ ಲಿಂಗದವರು

(viii) ವ್ಯಸನಿಗಳು

(ix) ಅಪರಾಧಿಕ ಹಿನ್ನೆಲೆ ಉಳ್ಳವರು

15. 33. ಸ್ನೇಹಿತರ ಕುರಿತು ಮಗುವಿನ ಧೋರಣೆ: *ಹೆಚ್ಚಿನ ಸಮಯ ಸ್ನೇಹಿತರೊಂದಿಗೆ ಓಡಾಡುತ್ತಾನೆ.*

16. 34. ಮಗುವಿನ ಕುರಿತು ಸ್ನೇಹಿತರ ದೋರಣೆ: *ಎನ್ಎ*

17. 35. ಮಗುವಿನ ಕುರಿತು ನೆರೆಹೊರೆಯವರ ಅಭಿಪ್ರಾಯ: *ಕುಟುಂಬದೊಂದಿಗೆ ನೆರೆಹೊರೆಯವರು ಮಾತಾಡುವುದಿಲ್ಲ.*

*18.* 36. ನೆರೆಹೊರೆಯವರ ಕುರಿತು ಮಗುವಿನ ಅಭಿಪ್ರಾಯ (ಮಗುವಿನ ಮೇಲೆ ನೆರೆಹೊರೆಯವರ ಪ್ರಭಾವವನ್ನು ಅರ್ಥ ಮಾಡಿಕೊಳ್ಳಲು): *ನೆರೆಹೊರೆ ಇರುವುದು ಒಂದು ಸ್ಲಮ್ಮಿನಲ್ಲಿ. ಹೆಚ್ಚಿನ ಮಕ್ಕಳು ಬೀದಿಯಲ್ಲಿಯೇ ಇರುತ್ತಾರೆ. ಕೆಲವರು ಕೆಲಸಕ್ಕಾಗಲೀ ಶಾಲೆಗಾಗಲೀ ಹೋಗುವುದಿಲ್ಲ.*

37. ಮಗುವು ಯಾವುದೇ ತರಹದ ದೌರ್ಜನ್ಯಕ್ಕೆ ಒಳಗಾಗಿದೆಯೇ, ಅನ್ವಯವಾಗುವುದಾದರೆ:
**ಹೌದು**/ಇಲ್ಲ

| ಕ್ರಸಂ. | ದೌರ್ಜನ್ಯದ ಬಗೆ | ಷರಾ |
|---|---|---|
| 1. | ಮೌಖಿಕ ದೌರ್ಜನ್ಯ– (ಯಾರಿಂದ?) ತಂದೆತಾಯಿ/ಒಡಹುಟ್ಟಿದವರು/ಉದ್ಯೋಗದಾತರಿಂದ/ ಇತರರು (ನಿರ್ದಿಷ್ಟವಾಗಿ) | *ಹೌದು, ಪೊಲೀಸರು ಮಗುವನ್ನು ಬೈಯ್ದರು* |
| 2. | ದೈಹಿಕ ದೌರ್ಜನ್ಯ (ನಿರ್ದಿಷ್ಟವಾಗಿ) | *ಹೌದು, ಸ್ಟೇಷನ್ನಿ ಪೊಲಿಸರು ಮೂರು ದಿನಗಳ ಕಾಲ ಮಗುವನ್ನು ದೈಹಿಕವಾಗಿ ಹಿಂಸಿಸಿದರು.* |
| 3. | ಲೈಂಗಿಕ ದೌರ್ಜನ್ಯ (ಯಾರಿಂದ?) ತಂದೆತಾಯಿ/ಒಡಹುಟ್ಟಿದವರು/ಉದ್ಯೋಗದಾತರಿಂದ/ ಇತರರು | *ಇಲ್ಲ.* |
| 4. | ಇತರೆ (ನಿರ್ದಿಷ್ಟವಾಗಿ) | – |

38. ಮಗು ಯಾವುದಾದರೂ ಅಪರಾಧಕ್ಕೆ ಬಲಿಯಾಗಿದೆಯೇ? ಹೌದು/ಇಲ್ಲ

*ಹೌದು, ತನ್ನ ಸ್ನೇಹಿತರೊಂದಿಗೆ ಸೇರಿ ಅಪರಾಧ ಮಾಡಿದ ಆಪಾದನೆಯ ಮೇಲೆ ಪೊಲೀಸರು ಮಗುವನ್ನು ವಶಕ್ಕೆ ಪಡೆದು ಘೋರವಾಗಿ ಹಿಂಸಿಸಿದರು. ಮಗುವನ್ನು ಕಸ್ಟಡಿಯ ಟಾರ್ಚರ್‌ಗೆ ಗುರಿಪಡಿಸಲಾಯಿತು, ಶೌಚಾಲಯಕ್ಕೆ ಹೋಗಲೂ ಬಿಡಲಿಲ್ಲ. ತಿನ್ನಲು, ಕುಡಿಯಲು ಏನೂ ಕೊಡಲಿಲ್ಲ. ಮಗುವನ್ನು ನಿದ್ದೆ ಮಾಡಲೂ ಬಿಡಲಿಲ್ಲ.*

39. ಮಗು ಯಾವುದಾದರೂ ಗ್ಯಾಂಗಿನಿಂದ, ವಯಸ್ಕರಿಂದ, ವಯಸ್ಕರ ಗುಂಪಿನಿಂದ ಬಳಸಲ್ಪಟ್ಟಿದೆಯೇ? ಅಥವಾ ಮಾದಕ ದ್ರವ್ಯಗಳ ಕಳ್ಳಸಾಗಾಣಿಕೆಗೆ ಬಳಸಲ್ಪಟ್ಟಿದೆಯೇ? ಹೌದು/ಇಲ್ಲ

*ಇಲ್ಲ, ಮಗು ಈ ವರೆಗೆ ಮಾದಕ ದ್ರವ್ಯಗಳ ಕಳ್ಳಸಾಗಾಣಿಕೆ ಮಾಡಿಲ್ಲ. ಆದರೂ, ಆತನ ನೆರೆಹೊರೆಯಲ್ಲಿ ಆತನನ್ನೂ ಬಳಸಿಕೊಳ್ಳುವ ಸಾಧ್ಯತೆಯುಳ್ಳ ಗ್ಯಾಂಗುಗಳು ಇವೆ.*

40. ಮಗುವಿನಲ್ಲಿ ಮನೆಯಿಂದ ಓಡಿಹೋಗುವ ಪ್ರವೃತ್ತಿ ಇದೆಯೇ, ಇದ್ದರೆ ವಿವರ ನೀಡಿ: **ಹೌದು**/**ಇಲ್ಲ**

*ಇಲ್ಲ, ಮಗು ತನ್ನ ಸ್ನೇಹಿತರೊಂದಿಗೆ ಓಡಾಡಿದರೂ ರಾತ್ರಿ ಹೊತ್ತಿನಲ್ಲಿ ಮನೆಗೆ ಹಿಂದಿರುಗುತ್ತದೆ.*

41. ಮಗುವನು ವಶಕ್ಕೆ ಪಡೆದ ಸನ್ನಿವೇಶಗಳು: *ಒಂದು ಫೋನನ್ನು ಕದ್ದ ಆರೋಪದ ಮೇಲೆ ಪುಲಿಕೇಶಿ ಪಿಎಸ್ ಮಗುವನ್ನು ವಶಕ್ಕೆ ಪಡೆದಿದ್ದರು. ಪೊಲೀಸರು 307ನ್ನು ಮಗುವಿನ ಮೇಲೆ ವಿಧಿಸಿದ್ದಾರೆ, ಆದರೆ ಅದರ ಕುರಿತು ಮಗುವಿಗೆ ಏನೂ ಗೊತ್ತಿಲ್ಲ.*
42. ಅಪರಾಧದಲ್ಲಿ ಮಗುವಿನ ಆಪಾದಿತ ಪಾತ್ರ: *ಫೋನನ್ನು ಕಸಿದಿದ್ದು.*
43. ಆಪಾದಿತ ಅಪರಾದಕ್ಕೆ ಕಾರಣ:

(i) ತಂದೆತಾಯಿಯರ ನಿಲಕ್ಷ್ಯ *✓: ಹೌದು*

(ii) ತಂದೆತಾಯಿಯರ ಅತಿಯಾದ ರಕ್ಷಣೆ

(iii) ತಂದೆತಾಯಿಯರ ಅಪರಾಧಿಕ ವರ್ತನೆ *✓: ಹೌದು*

(iv) ತಂದೆತಾಯಿಯರ (ನಕಾರಾತ್ಮಕ) ಪ್ರಭಾವ *✓: ಹೌದು*

(v) ಸಹವರ್ತಿಗಳ ಪ್ರಭಾವ *✓: ಹೌದು*

(vi) ಕೆಟ್ಟ ಅಭ್ಯಾಸಗಳು (ಮಾದಕ ದ್ರವ್ಯ/ಮದ್ಯ ಕೊಳ್ಳುವುದು) *✓: ಹೌದು*

(vii) ಇತರೆ (ನಿರ್ದಿಷ್ಟವಾಗಿ)

44. ಯಾವುದಾದರೂ ಅಪರಾಧಕ್ಕಾಗಿ ಮಗುವನ್ನು ಈ ಮುಂಚೆಯೂ ವಶಕ್ಕೆ ಪಡೆಯಲಾಗಿತ್ತೇ? ಹೌದು/ಇಲ್ಲ *ಇಲ್ಲ*

45. ಹಿಂದಿನ ಸಾಂಸ್ಥಿಕ/ಪ್ರಕರಣ ಇತಿಹಾಸ ಮತ್ತು ವೈಯಕ್ತಿಕ ಆರೈಕೆಯ ಯೋಜನೆ, ಇದ್ದರೆ: *ಇಲ್ಲ*

46. ಮಗು ನೋಡಲು ಹೇಗೆ ಕಾಣುತ್ತದೆ: *ಎತ್ತರ– 5' 5", ತೂಕ–57 ಕೆಜಿ. ಬಡಕಲು ದೇಹ, ಕೈ ಮತ್ತು ಕುತ್ತಿಗೆಯ ಮೇಲೆ ಗಾಯದ ಗುರುತುಗಳು*

47. ಮಗುವಿನ ಆರೋಗ್ಯದ ಸ್ಥಿತಿ (ವೈದ್ಯಕೀಯ ಪರೀಕ್ಷೆಯ ವರದಿ ಸೇರಿದ ಹಾಗೆ, ಅನ್ವಯವಾಗುವುದಾದರೆ): *ಎನ್‌ಎ*

48. ಮಗುವಿನ ಮಾನಸಿಕ ಸ್ಥಿತಿ: *ಮಗು ಆಪ್ತ ಸಮಾಲೋಚನೆಯ ಎರಡು ಗೋಷ್ಠಿಗಳನ್ನು ತೆಗೆದುಕೊಂಡಿದೆ. ಆಪ್ತ ಸಮಾಲೋಚಕರು ಮಗುವಿನಲ್ಲಿ ಅಧಿಕವಾದ ಎಸಿಇ (ಪ್ರತಿಕೂಲ ಬಾಲ್ಯದ ಅನುಭವಗಳು) ಸಾಧ್ಯತೆ ಇದೆ, ಇದಕ್ಕಾಗಿ ಹೆಚ್ಚಿನ ಗೋಷ್ಠಿಗಳ ಅಗತ್ಯ ಬೀಳಬಹುದು ಎನ್ನುತ್ತಾರೆ.*

49. ಇತರೆ ಷರಾ: *ಎನ್‌ಎ*

**ತನಿಖೆಯ ಫಲಿತಾಂಶ**

| | | |
|---|---|---|
| 1. | ಭಾವನಾತ್ಮಕ ಅಂಶಗಳು | *ತಂದೆತಾಯಿಯರ ಅಲಕ್ಷ್ಯದಿಂದಾಗಿ ಪ್ರೀತಿ ಮತ್ತು ಸ್ವಮೌಲ್ಯದ ಕೊರತೆ* |
| 2. | ದೈಹಿಕ ಸ್ಥಿತಿ | *ಪಾದದ ಕೆಳಗೆ ಹೊಡೆದ ಗುರುತು, ಮೈ ನೋವು, ಕೈಗಳಲ್ಲಿ ಊತ* |
| 3. | ಬೌದ್ಧಿಕ ಸ್ಥಿತಿ | *ಉತ್ತಮ, ಲೆಕ್ಕಾಚಾರದಲ್ಲಿ ಚುರುಕು. ಸೂಕ್ಷ್ಮ ಅವಲೋಕನ. ಮಗುವಿನಲ್ಲಿ 8ನೇ ತರಗತಿಯ ವಿದ್ಯಾರ್ಥಿಯ ಬೌದ್ಧಿಕ ಸಾಮರ್ಥ್ಯ ಕಾಣುತ್ತದೆ (ಮಗು 8ನೇ ತರಗತಿಯಲ್ಲಿ ಶಾಲೆಯನ್ನು ಬಿಡಬೇಕಾಯಿತು). ಶಿಕ್ಷಣವನ್ನು ಮುಂದುವರೆಸುವ ಸಾಮರ್ಥ್ಯ ಮಗುವಿನಲ್ಲಿದೆ.* |
| 4. | ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ | *ಮಗು ಅತ್ಯಂತ ಕೆಳ ಸಾಮಾಜಿಕ ಆರ್ಥಿಕ ಸ್ಥಿತಿಗೆ ಸೇರಿದವನು.* |
| 5. | ಸಮಸ್ಯೆಯು ಸೂಚಿಸುವ/ ಪರಿಗಣಿಸಲಾದ ಕಾರಣಗಳು | *ಬಡತನ, ಕುಟುಂಬದಲ್ಲಿ ಅಪರಾಧಿಕ ಇತಿಹಾಸ, ಕುಟುಂಬದಲ್ಲಿನ ಶಿಥಿಲ ಸಂಬಂಧಗಳು, ಬದುಕಿನ ಪರಿಸರ ಇಂಥ ಮನೋವೈಜ್ಞಾನಿಕ ಸಂಗತಿಗಳು* |
| 6. | ಪ್ರಕರಣದ ವಿಶ್ಲೇಷಣೆ, ಅಪರಾಧಕ್ಕೆ ಕಾರಣಗಳು/ ನೆರವಾಗುವ ಅಂಶಗಳನ್ನು ಒಳಗೊಂಡಂತೆ | *ಕುಟುಂಬದಲ್ಲಿನ ಅಪರಾಧಿಕ ಚಟುವಟಿಕೆಗಳ ಜೊತೆಯಲ್ಲಿ ಮಗು ಅಪರಾಧವು ಸಮೃದ್ಧವಾಗಿರುವ, ಪ್ರೀತಿ, ಆತ್ಮೀಯತೆಯ ಕೊರತೆಯಿರುವ ಪರಿಸರದಲ್ಲಿ ಬೆಳೆದಿದೆ. ಕುಟುಂಬದಲ್ಲಿರುವ ಮೂರು ಮಕ್ಕಳೊಂದಿಗೆ ತಂದೆತಾಯಿ ಮಗುವನ್ನು ಸರಿಯಾಗಿ ಆರೈಕೆ ಮಾಡಿಲ್ಲ ಅಥವಾ ಆತನಿಗೆ ಅಗತ್ಯವಾದ ಪ್ರೀತಿಯನ್ನು ಕೊಡಲು ಅವರಿಗೆ ಸಾಧ್ಯವಾಗಿಲ್ಲ. ಕಡುಬಡತನ, ಇಂಥ ಮಕ್ಕಳನ್ನು ಗುರಿಯಾಗಿಸಿಕೊಳ್ಳುವ ಪೊಲೀಸರಿಂದ ಬಡತನದ ಅಪರಾಧೀಕರಣ, ಜೊತೆಗೆ ಮೇಲೆ ಹೇಳಿದ ಸಂಗತಿಗಳು ನಮನ್‌ನಂಥ ಮಕ್ಕಳನ್ನು ಅಪರಾಧಕ್ಕೆ ತಳ್ಳುತ್ತವೆ.* |
| 7. | ಸಮಾಲೋಚಿಸಲಾದ ತಜ್ಞರ ಅಭಿಪ್ರಾಯಗಳು | *ಎನ್‌ಎ* |
| 8. | ಪ್ರೊಬೆಷನ್ ಅಧಿಕಾರಿ/ ಮಕ್ಕಳ ಕಲ್ಯಾಣ ಅಧಿಕಾರಿಯವರಿಂದ ಮಗುವಿನ ಪುನರ್ವಸತಿ ಕುರಿತಂತೆ ಶಿಫಾರಸ್ಸುಗಳು | *ಮಗುವನ್ನು ಪುನರ್ವಸತಿಗಾಗಿ ಮುಚ್ಚಿದ ಸೌಕರ್ಯಕ್ಕೆ ಗಳಿಸಬೇಕು ಮತ್ತು ತನ್ನ ಶಿಕ್ಷಣವನ್ನು ಮುಗಿಸಲು, ತರಬೇತಿಯನ್ನು ಪಡೆಯಲು ಅವಕಾಶ ಮಾಡಿಕೊಡಬೇಕು. ಮಗು ತನ್ನ ಮನೆಗೆ ಹಿಂದಿರುಗಿದರೆ, ಅದು ಮತ್ತೆ ಹಳೆಯ ಸನ್ನಿವೇಶಕ್ಕೆ ಮರಳುವ ಎಲ್ಲಾ ಸಾಧ್ಯತೆಗಳಿವೆ.* |

*(ಸಹಿ)*

*(ಆಸಿಫ್)*

*ಸಮಾಜ ಕಾರ್ಯಕರ್ತರು, ಚೈಲ್ಡ್ ಕೇರ್ ಎನ್‌ಜಿಒ*

## Notes

Centre for Child and the Law,
National Law School of India University